10 June 2026 Wednesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ
# ವರ್ತಮಾನ
ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಮನುಷ್ಯನಿಗೆ ಧೈರ್ಯ ಬೇಕೇಬೇಕು,
ಆದರೆ ಕೆಟ್ಟ ಧೈರ್ಯ ಇರಬಾರದು
ಅದು ಅಪಾಯಕಾರಿ!
▸▸ ಸ್ನೇಹಾ ಆನಂದ್

info.varthaman@gmail.com


ಅರಸು ಮೊಮ್ಮಗ ಸೂರಜ್ ಹೆಗಡೆ ನಿಧನಕ್ಕೆ ಕಾಂಗ್ರೆಸ್ ಸಂತಾಪ ಪುಟ ಸಂ. 2


ಮಾಸ್ತಿ ಎಂದರೆ ಕನ್ನಡದ ಆಸ್ತಿ: ಪತ್ರಿಕೋದ್ಯಮಕ್ಕೆ ಖಾದ್ರಿ ಶಾಮಣ್ಣ ಕೊಡುಗೆ ಅಪಾರ ಪುಟ ಸಂ. 3


ಪ್ರಾದೇಶಿಕ ಪಕ್ಷಗಳ ಮುಗಿಸುವ ಯತ್ನ: ಎಂ. ಲಕ್ಷ್ಮಣ್ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN | Volume: 69 | Issue: 194 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಮೈತ್ರಿ ಬಿರುಕಿಗೆ 'ಕೈ' ಷಡ್ಯಂತ್ರ

## ಕಾಂಗ್ರೆಸ್ ನಾಯಕರಿಗೆ ಈಗ ದೇವೇಗೌಡರ ಮೇಲೆ ಎಲ್ಲಿಲ್ಲದ ಅನುಕಂಪ: ಎಚ್‌ಡಿಕೆ ವಾಗ್ದಾಳಿ

**ಮಂಡ್ಯ:** ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ ಮೇಲೆ ಕಾಂಗ್ರೆಸ್ ನಾಯಕರಿಗೆ ಅತಿಯಾದ ಅನುಕಂಪ ಬಂದಿದೆ. ಜೆಡಿಎಸ್ ಮತ್ತು ಬಿಜೆಪಿ ಮೈತ್ರಿಯಲ್ಲಿ ಬಿರುಕು ಸೃಷ್ಟಿಸಲು ಕಾಂಗ್ರೆಸ್ ಅನುಕಂಪದ ಅಸ್ತ್ರ ಪ್ರಯೋಗಿಸುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಶ್ರೀರಂಗಪಟ್ಟಣ ತಾಲ್ಲೂಕಿನ ತಗ್ಗಹಳ್ಳಿ ಗ್ರಾಮದಲ್ಲಿ ಸಿಎಸ್ ಆರ್ ನಿಧಿ ಅನುದಾನದಿಂದ ನಿರ್ಮಿಸಿರುವ ಶಾಲಾ ಕೊಠಡಿ ಉದ್ಘಾಟಿಸಿ ಮಾಧ್ಯಮಗಳ ಜೊತೆ ಅವರು ಮಾತನಾಡಿದರು.

ತಮ್ಮ ಪಕ್ಷದ ವೈಫಲ್ಯಗಳನ್ನು ಮುಚ್ಚಿಟ್ಟುಕೊಳ್ಳಲು ಕಾಂಗ್ರೆಸ್ ದೇವೇಗೌಡರನ್ನು ನೆಪ ಮಾಡಿಕೊಂಡು ರಾಜಕೀಯ ಮಾಡುತ್ತಿದೆ. ದೇವೇಗೌಡರದು ಹೋರಾಟದ ಬದುಕು. ಅಧಿಕಾರಕ್ಕಾಗಿ ಹಪಾಹಪಿಸಿದವರಲ್ಲ. ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಪ್ರಧಾನಿ ಸ್ಥಾನವನ್ನೇ ಬಿಟ್ಟು ಬಂದರು. ಅದೆಲ್ಲವೂ ಕಾಂಗ್ರೆಸ್ ಪಕ್ಷಕ್ಕೆ ಗೊತ್ತಿಲ್ಲವೇ ಎಂದು ತೀಕ್ಷ್ಣವಾಗಿ ಪ್ರಶ್ನಿಸಿದರು.

ರಾಜ್ಯಸಭೆ ಟಿಕೆಟ್ ವಿಚಾರದಲ್ಲಿ ಕಾಂಗ್ರೆಸ್ ನಾಯಕರು ಅನಗತ್ಯವಾಗಿ ಮಾತನಾಡುತ್ತಿದ್ದಾರೆ. ದೇವೇಗೌಡರ ಬಗ್ಗೆ ಎಲ್ಲಿಲ್ಲದ ಅನುಕಂಪ ತೋರುತ್ತಿದ್ದಾರೆ. ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಯಲ್ಲಿ ಬಿರುಕು ತರಲು ಕಾಂಗ್ರೆಸ್ ವಿಫಲ ಪ್ರಯತ್ನ ನಡೆಸುತ್ತಿದೆ. ದೇವೇಗೌಡರು ರಾಜ್ಯಸಭೆ ಟಿಕೆಟ್‌ಗೆ ಅರ್ಜಿಯೇ ಹಾಕಿಲ್ಲ ಎಂದು ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ಕಳೆದ ಬಾರಿ ದೇವೇಗೌಡರ ಅವಿರೋಧ ಆಯ್ಕೆಗೆ ಕಾಂಗ್ರೆಸ್ ಬೆಂಬಲದ



### ಡಿಕೆಶಿಗೆ 2 ತಿಂಗಳ ಅವಕಾಶ!

ರಾಜ್ಯದಲ್ಲಿ ಒಕ್ಕಲಿಗ ಮುಖ್ಯಮಂತ್ರಿ ಇರಬೇಕಾದರೆ ರಾಜ್ಯಸಭೆ ಸ್ಥಾನ ತಗೊಂಡು ಏನ್ಮಾಡ್ತೀರಾ? ಅವರೇನು ಮಾಡುತ್ತಾರೆ ಎಂಬುದನ್ನು ಎರಡು ತಿಂಗಳು ಕಾದು ನೋಡೋಣ. ಆನಂತರ ಮಾತಾಡೋಣ ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಡಿಕೆಶಿ ಮುಖ್ಯಮಂತ್ರಿ ಆಗುತ್ತಿರುವ ಹಿನ್ನೆಲೆಯಲ್ಲಿ ದೇವೇಗೌಡರ ಮನೆಯಲ್ಲಿ ಸೂತಕ ಆವರಿಸಿದೆ ಎಂದಿದ್ದ ಮಾಜಿ ಮಂತ್ರಿಯೊಬ್ಬರ ಹೇಳಿಕೆಗೆ ಪ್ರತಿಕ್ರಿಯೆ ನೀಡಲು ಅವರು ಸ್ಪಷ್ಟವಾಗಿ ನಿರಾಕರಿಸಿದರು.

ಮಾಜಿ ಸಚಿವ ಜ ವಿ ೀರ್ ಪುಟ 2ಕ್ಕೆ



### ನಾನೇನೂ ಹರಿದಿಲ್ಲ: ಡಿಕೆಶಿಗೆ ನನ್ನ ಸಲಹೆ ಕೇಳೋದೇನಿದೆ?

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ನಿಮ್ಮನ್ನು ಭೇಟಿ ಮಾಡಿ ಸಲಹೆ ಕೇಳುವುದಾಗಿ ಹೇಳಿದ್ದಾರಲ್ಲ ಎಂಬ ಸುದ್ದಿಗಾರರ ಪ್ರಶ್ನೆಗೆ ಎಚ್.ಡಿ.ಕುಮಾರಸ್ವಾಮಿ ತೀಕ್ಷ್ಣ ವಾಗಿ ಉತ್ತರಿಸಿದರು.

ಅವರಿಗೆ ನಾನೇನು ಸಲಹೆ ನೀಡಲಿ. ಕುಮಾರಸ್ವಾಮಿ ಎರಡು ಬಾರಿ ಮುಖ್ಯಮಂತ್ರಿ ಆಗಿ ಏನು ಹರಿದಿದ್ದಾರೆ ಎಂದು ನನ್ನನ್ನು ಪ್ರಶ್ನಿಸಿದ್ದಾರೆ. ಎಲ್ಲದಕ್ಕೂ ಸಾಕ್ಷಿ ಗುಡ್ಡೆ ಕೇಳುತ್ತಾರೆ. ನಾನೇನು ಹರಿದಿಲ್ಲ, ನನ್ನ ಬಳಿ ಬಂದು ಅವರು ಏನು ಸಲಹೆ ಕೇಳುತ್ತಾರೆ. ಎಲ್ಲವನ್ನು ನಾನೇ ಬಲ್ಲೆ ಎನ್ನುತ್ತಾರೆ. ಹಿರಿಯರು ಒಂದು ಮಾತು ಹೇಳಿದ್ದಾರೆ. 'ಅತಿ ವಿನಯಂ ದೂರ್ತ ಲಕ್ಷಣಂ' ಅಂತ. ಆ ಮಾತು ನನಗೆ ಪದೇಪದೇ ನೆನಪಿಗೆ ಬರುತ್ತಿದೆ ಎಂದು ಡಿಕೆಶಿಗೆ ಲೇವಡಿ ಮಾಡಿದರು.

ವಿಧಾನ ಪರಿಷತ್ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿ ಹಾಕಿರುವ ವಿಚಾರದ ಕೇಳಿದ ಪ್ರಶ್ನೆಗೆ ಉತ್ತರಿಸಿದ ಕುಮಾರಸ್ವಾಮಿ, ನಮಗೂ ಎರಡು ಮತ ಬೇಕು. ಕಾಂಗ್ರೆಸ್ ಪಕ್ಷಕ್ಕೂ ಎರಡು ಮತ ಬೇಕು. ಇದರಲ್ಲಿ ಯಾವುದೇ ಗೇಮ್ ಪ್ಲಾನ್ ಇಲ್ಲ. ನಾವು ಬಿಜೆಪಿಯಿಂದ ಉಚ್ಚಾಟನೆಯಾಗಿರುವ ಪುಟ 2ಕ್ಕೆ

## ಮಂಡ್ಯದಲ್ಲಿ ಒಂದೇ ಕುಟುಂಬದ ಮೂವರು ಅನುಮಾನಾಸ್ಪದ ಸಾವು

**ಮಂಡ್ಯ:** ನಗರದ ನೆಹರು ನಗರದಲ್ಲಿ ಒಂದೇ ಕುಟುಂಬದ ಮೂವರು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ನಡೆದಿದೆ. ಮೃತರನ್ನು ಪ್ರಭಾಕರ್, ಪತ್ನಿ ಜ್ಯೋತಿ ಹಾಗೂ ಪುತ್ರ ಸಂತೋಷ್ ಎಂದು ಗುರುತಿಸಲಾಗಿದೆ.

ತಾಯಿ ಜ್ಯೋತಿ ಮತ್ತು ಪುತ್ರ ಸಂತೋಷ್ ಅವರು ಸೋಮವಾರ ರಾತ್ರಿ ಮನೆಯಲ್ಲೇ ಶವವಾಗಿ ಪತ್ತೆಯಾಗಿದ್ದಾರೆ. ಇಬ್ಬರ ಸಾವಿಗೆ ನಿಖರ ಕಾರಣ ಏನು ಎಂಬುದು ತಿಳಿದುಬಂದಿಲ್ಲ.

ಪ್ರಭಾಕರ್ ಅವರು ತಮ್ಮ ಬಟ್ಟೆ ಅಂಗಡಿಯಲ್ಲಿ ಮಂಗಳವಾರ ಬೆಳಗ್ಗೆ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ. ಒಂದೇ ಕುಟುಂಬದ ಮೂವರು ಸಾವನ್ನಪ್ಪಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಮೃತ ಸಂತೋಷ್ ಅವರಿಗೆ ಒಂದು ತಿಂಗಳ ಹಿಂದಷ್ಟೇ ಮದುವೆ ಆಗಿತ್ತು.




ಮೂವರ ಸಾವಿಗೆ ನಿಖರ ಕಾರಣ ಏನು ಎಂಬುದು ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಆದರೆ ಸಾಲದ ಒತ್ತಡ ಹಾಗೂ ವ್ಯಾಪಾರದಲ್ಲಿ ಉಂಟಾದ ತೀವ್ರ ನಷ್ಟದಿಂದ ಬೇಸತ್ತ ಬಟ್ಟೆ ವ್ಯಾಪಾರಿಯಾದ ಪ್ರಭಾಕರ್ ಅವರು, ತಮ್ಮ ಪತ್ನಿ ಮತ್ತು ಮಗನನ್ನು ಉಸಿರುಗಟ್ಟಿಸಿ ಕೊಲೆ ಮಾಡಿ ಬಳಿಕ ತಾವೂ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನಲಾಗಿದೆ. ಘಟನಾ ಸ್ಥಳಕ್ಕೆ ಮಂಡ್ಯ ಪೂರ್ವ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

### 'ಶಕ್ತಿ ಯೋಜನೆ' ಉಲ್ಲೇಖ

ಪೊಲೀಸರ ಪರಿಶೀಲನೆ ವೇಳೆ ಪ್ರಭಾಕರ್ ಅವರು ಬರೆದಿದ್ದಾರೆ ಎನ್ನಲಾದ ಆಘಾತಕಾರಿ 'ಡೆತ್‌ನೋಟ್' ಪತ್ತೆಯಾಗಿದೆ. ಈ ಡೆತ್‌ನೋಟ್‌ನಲ್ಲಿ ಪ್ರಭಾಕರ್ ಅವರು ತಮ್ಮ ಸಾವಿಗೆ ಮತ್ತು ಕುಟುಂಬದ ಅಂತ್ಯಕ್ಕೆ ಆರ್ಥಿಕ ಸಂಕಷ್ಟವೇ ಕಾರಣ ಎಂದು ಉಲ್ಲೇಖಿಸಿದ್ದಾರೆ.

ಸರ್ಕಾರ ಜಾರಿಗೆ ತಂದಿರುವ ಉಚಿತ ಬಸ್ ಪ್ರಯಾಣದ 'ಶಕ್ತಿ ಯೋಜನೆ'ಯಿಂದ ಜನರು ಬೇರೆ ನಗರಗಳಿಗೆ ತೆರಳುತ್ತಿರುವುದರಿಂದ ಸ್ಥಳೀಯ ಬಟ್ಟೆ ವ್ಯಾಪಾರ ಸಂಪೂರ್ಣ ಕುಸಿದಿದೆ. ವ್ಯಾಪಾರ ಇಲ್ಲದ ಕಾರಣ ಖಾಸಗಿ ಫೈನಾನ್ಸ್‌ಗಳಲ್ಲಿ ಮಾಡಿದ್ದ ಸಾಲಕ್ಕೆ ಸರಿಯಾಗಿ ಬಡ್ಡಿ ಕಟ್ಟಲು ಸಾಧ್ಯವಾಗುತ್ತಿರಲಿಲ್ಲ. ಸಾಲ ಮರುಪಾವತಿ ಮಾಡದಿದ್ದರೆ ಖಾಸಗಿ ಫೈನಾನ್ಸ್ ಕಂಪನಿಗಳ ಏಜೆಂಟರು ಮನೆ ಬಾಗಿಲಿಗೆ ಬಂದು ಕಿರುಕುಳ ನೀಡುವ ಭಯವಿತ್ತು. ಮಾನ, ಮರ್ಯಾದೆಗೆ ಹೆದರಿ ಈ ನಿರ್ಧಾರ ಕೈಗೊಂಡಿರುವುದಾಗಿ ನೋಟ್‌ನಲ್ಲಿ ಬರೆದಿದ್ದಾರೆ.

## ವಿಧಾನಸೌಧ ಆವರಣದಲ್ಲಿರುವ ಮರಕ್ಕೆ ನೇಣು ಬಿಗಿದುಕೊಂಡು ರೈತ ಆತ್ಮಹತ್ಯೆಗೆ ಯತ್ನ!



**ಬೆಂಗಳೂರು:** ಚಿಕ್ಕಮಗಳೂರು ಜಿಲ್ಲೆಯ ರೈತನೊಬ್ಬ ಮಂಗಳವಾರ ಮಧ್ಯಾಹ್ನ ವಿಧಾನಸೌಧ ಆವರಣದಲ್ಲಿರುವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಘಟನೆ ವರದಿಯಾಗಿದೆ.

ಪೊಲೀಸರ ಸಕಾಲಿಕ ಮಧ್ಯಪ್ರವೇಶದಿಂದ ರೈತನ ಜೀವ ಉಳಿದಿದೆ.

ಪೊಲೀಸರ ಪ್ರಕಾರ, ಚಿಕ್ಕಮಗಳೂರು ಜಿಲ್ಲೆಯ ಹಳಿಯೂರು ಗ್ರಾಮದ ವಿಶು ಕುಮಾರ್ ಎಂಬುವವರು ವಿಧಾನಸೌಧ ಆವರಣದಲ್ಲಿರುವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಪುಟ 2ಕ್ಕೆ

## ಉಜ್ವಲ ಯೋಜನೆ ಸಿಲಿಂಡರ್ 4ಕ್ಕೆ ಕಡಿತ

**ನವದೆಹಲಿ:** ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಉಜ್ವಲ ಯೋಜನೆಯ ಫಲಾನುಭವಿಗಳಿಗೆ ನೀಡುತ್ತಿದ್ದ ವಾರ್ಷಿಕ ಸಬ್ಸಿಡಿ ಸಿಲಿಂಡರ್‌ಗಳನ್ನು 9ರಿಂದ 4 ಕ್ಕೆ ಕಡಿತಗೊಳಿಸಿದೆ.

ಪಶ್ಚಿಮ ಏಷ್ಯಾ ಸಂಘರ್ಷ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್‌ಪಿಜಿ ಕೊರತೆಯಿಂದ ಕೇಂದ್ರ ಸರ್ಕಾರ ಈ ನಿರ್ಧಾರ ತೆಗೆದುಕೊಂಡಿದೆ. 2016ರಲ್ಲಿ ಯೋಜನೆ ಆರಂಭವಾದಾಗ ವರ್ಷಕ್ಕೆ 12 ಸಿಲಿಂಡರ್ ನೀಡಲಾಗುತ್ತಿತ್ತು. ಕಳೆದ ವರ್ಷ ಇದನ್ನು 9ಕ್ಕೆ ಇಳಿಸಲಾಗಿತ್ತು. ಈಗ ಅದನ್ನು ಮತ್ತೆ 4ಕ್ಕೆ ಕಡಿಮೆ ಮಾಡಲಾಗಿದೆ. 14.2 ಕೆಜಿ ಸಿಲಿಂಡರ್‌ಗೆ ಸಿಗುವ 300 ರೂ. ಸಬ್ಸಿಡಿ ಮುಂದುವರಿಯಲಿದೆ. ಈ ಹಣ ನೇರವಾಗಿ ಗ್ರಾಹಕರ ಬ್ಯಾಂಕ್ ಖಾತೆಗೆ ಜಮೆ ಆಗಲಿದೆ.

## ಗೃಹಲಕ್ಷ್ಮಿಗೆ ಬಯೋಮೆಟ್ರಿಕ್ ಜಾರಿ

### ಯೋಜನೆ ದುರುಪಯೋಗ ತಡೆಯಲು ನಿರ್ಧಾರ

**ಬೆಂಗಳೂರು:** ಮಹಿಳೆಯರಿಗೆ ನೀಡಲಾಗುತ್ತಿರುವ ಗೃಹಲಕ್ಷ್ಮಿ ಹಣದ ದುರುಪಯೋಗ ತಡೆಗಟ್ಟಲು ಬಯೋಮೆಟ್ರಿಕ್ ಜಾರಿಗೆ ಸರ್ಕಾರ ನಿರ್ಧಾರ ಮಾಡಿದೆ. ಮುಂದಿನ ತಿಂಗಳಿನಿಂದ ಬಯೋಮೆಟ್ರಿಕ್ ಜಾರಿ ಆಗಲಿದೆ.

ಗೃಹಲಕ್ಷ್ಮಿ ಫಲಾನುಭವಿಗಳು ಬಯೋಮೆಟ್ರಿಕ್ ನೀಡಲು ಶುಲ್ಕ ಪಾವತಿ ಮಾಡಬೇಕಿದೆ. ಬಯೋಮೆಟ್ರಿಕ್ ಆಗದೇ ಇದ್ದರೆ 2 ಸಾವಿರ ರೂ. ಬರುವುದಿಲ್ಲ. ಹೀಗಾಗಿ ಬಯೋಮೆಟ್ರಿಕ್ ಮಾಡಿಸಿಕೊಳ್ಳಲು ಪ್ರತಿ ಫಲಾನುಭವಿ 5 ರೂ. ಶುಲ್ಕವನ್ನ ಪಾವತಿ ಮಾಡಬೇಕಿದೆ.

ಬಯೋಮೆಟ್ರಿಕ್ ಜೊತೆಗೆ ಗೃಹಲಕ್ಷ್ಮಿ ಸೊಸೈಟಿಗೆ ಸದಸ್ಯತ್ವವನ್ನ ಕೂಡ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮಾಡಿಕೊಳ್ಳಲಿದೆ. ಸದಸ್ಯತ್ವ ಬಯಸುವ ಫಲಾನುಭವಿಗಳು 1,250 ರೂ. ಪಾವತಿ ಮಾಡಬೇಕಿದೆ. ಒಂದು ವೇಳೆ ಗೃಹಲಕ್ಷ್ಮಿ ಸೊಸೈಟಿ ಸದಸ್ಯತ್ವ ಬೇಡ ಅಂದರೆ ಬಯೋಮೆಟ್ರಿಕ್ ಅಷ್ಟೇ ಮಾಡಿಸಿಕೊಳ್ಳಬಹುದು. ಮುಂದಿನ ತಿಂಗಳ ಒಳಗಡೆ ಬಯೋಮೆಟ್ರಿಕ್ ಜಾರಿ ಮಾಡುವ ಚಿಂತನೆಯಲ್ಲಿದೆ. ಈಗಾಗಲೇ ಗೃಹಲಕ್ಷ್ಮಿ ಬಯೋಮೆಟ್ರಿಕ್ ಪಡೆಯಲು ಆಪ್ ಸಿದ್ಧಪಡಿಸಲಾಗಿದೆ.




### ಬಯೋಮೆಟ್ರಿಕ್ ಹೇಗೆ?

- **ಬೆಂಗಳೂರು ಒನ್, ಕರ್ನಾಟಕ ಒನ್, ಗ್ರಾಮ ಒನ್‌ಗಳಲ್ಲಿ ಬಯೋಮೆಟ್ರಿಕ್ ನೀಡಲು ಅವಕಾಶ**
- **ಒಂದು ಸಲ ಬಯೋಮೆಟ್ರಿಕ್ ನೀಡಿದರೆ ವ್ಯಕ್ತಿ ಖಚಿತತೆಯಿಂದ 2 ಸಾವಿರ ರೂ. ಪಾವತಿ**
- **ಗೃಹಲಕ್ಷ್ಮಿ ಬಯೋಮೆಟ್ರಿಕ್‌ಗೆ 5 ರೂ. ಶುಲ್ಕವನ್ನ ಮಹಿಳಾ ಇಲಾಖೆ ನಿಗದಿ ಮಾಡಲಿದೆ**
- **ಬಯೋಮೆಟ್ರಿಕ್‌ಗೆ ಫಲಾನುಭವಿಗಳ ಆಧಾರ್ ಕಾರ್ಡ್ ಕಡ್ಡಾಯ**

## ಆಯುಷ್ಮಾನ್: ಹಣ ಪಡೆದರೆ ಕ್ರಮ


### ಸಂಪೂರ್ಣ ನಗದುರಹಿತ ಚಿಕಿತ್ಸೆ: ಯು.ಟಿ.ಖಾದರ್ ಎಚ್ಚರಿಕೆ

**ಮಂಗಳೂರು:** ಆಯುಷ್ಮಾನ್ ಭಾರತ್ ಯೋಜನೆ ಫಲಾನುಭವಿಗಳಿಗೆ ಖಾಸಗಿ ಆಸ್ಪತ್ರೆಗಳು ಸಂಪೂರ್ಣ ನಗದು ರಹಿತ ಚಿಕಿತ್ಸೆ ನೀಡಬೇಕು. ಆದರೆ, ಹೆಚ್ಚುವರಿ ಹಣ ಪಾವತಿಸುವಂತೆ ಒತ್ತಾಯಿಸುತ್ತಿರುವ ಬಗ್ಗೆ ದೂರುಗಳು ಬಂದಿರುವ ಕುರಿತು ಆರೋಗ್ಯ ಸಚಿವ ಯು.ಟಿ ಖಾದರ್ ಕಳವಳ ವ್ಯಕ್ತಪಡಿಸಿದರು.

ಖಾಸಗಿ ಆಸ್ಪತ್ರೆಗಳು ರೋಗಿಗಳಿಂದ ಹಣ ಪಾವತಿಸುವಂತೆ ಒತ್ತಾಯಿಸಿದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ಎಚ್ಚರಿಕೆ ನೀಡಿದರು.

ಆಯುಷ್ಮಾನ್ ಭಾರತ್ ಯೋಜನೆಯಡಿ ವಿಶೇಷ ವಾರ್ಡ್ಗಳನ್ನು ಆಯ್ಕೆ ಮಾಡುವ ರೋಗಿಗಳಿಗೂ ಸೌಲಭ್ಯವನ್ನು ವಿಸ್ತರಿಸುವ ಕುರಿತು ಸರ್ಕಾರ ಚಿಂತನೆ ನಡೆಸುತ್ತಿದೆ. ಈ ವ್ಯವಸ್ಥೆಯಲ್ಲಿ ರೋಗಿಗಳು ವಿಶೇಷ ವಾರ್ಡ್ಗೆ ಸಂಬಂಧಿಸಿದ ಹೆಚ್ಚುವರಿ ಶುಲ್ಕವನ್ನು ಮಾತ್ರ ಪಾವತಿಸಬೇಕಾಗುತ್ತದೆ ಎಂದು ಖಾದರ್ ಹೇಳಿದರು.

ವಿಮಾ ಕ್ಲೈಮ್‌ಗಳ ಅನುಮೋದನೆಯಲ್ಲಿ ಅನಗತ್ಯ ವಿಳಂಬ ಮಾಡದಂತೆ ವೈದ್ಯರು ಹಾಗೂ ಆಸ್ಪತ್ರೆಗಳ ಆಡಳಿತ ಮಂಡಳಿಗಳಿಗೆ ಎಚ್ಚರಿಕೆ ನೀಡಿದರು. ಇಂತಹ ವಿಳಂಬವನ್ನು ಸರ್ಕಾರ ಸಹಿಸುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದರು.



ತೀವ್ರ ಅಸ್ವಸ್ಥರು ಮತ್ತು ಐಸಿಯು ರೋಗಿಗಳು ಕಡ್ಡಾಯ ಮುಖ ದೃಢೀಕರಣ ಪ್ರಕ್ರಿಯೆಯಿಂದ ಆಯುಷ್ಮಾನ್ ಭಾರತ್ ಯೋಜನೆಯ ಸೌಲಭ್ಯ ಪಡೆಯಲು ತೊಂದರೆ ಅನುಭವಿಸುತ್ತಿದ್ದಾರೆಂದು ಅಧಿಕಾರಿಯೊಬ್ಬರು ಸಚಿವರಿಗೆ ತಿಳಿಸಿದರು.

## ರಾಜ್ಯಕ್ಕೆ ಮಧ್ಯಪ್ರದೇಶ ಕೈ ಶಾಸಕರು!

**ಭೋಪಾಲ್:** ಜೂನ್ 18ರಂದು ನಡೆಯಲಿರುವ ರಾಜ್ಯಸಭಾ ಚುನಾವಣೆಗೂ ಮುನ್ನ ತನ್ನ ಶಾಸಕರನ್ನು ಸೆಳೆಯಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಮಧ್ಯಪ್ರದೇಶ ಕಾಂಗ್ರೆಸ್ ನಾಯಕರು ಮಂಗಳವಾರ ಆರೋಪಿಸಿದ್ದಾರೆ. ಅಡ್ಡ ಮತದಾನ ತಡೆಯಲು ಹಾಗೂ ಒಗ್ಗಟ್ಟಾಗಿಡಲು ತನ್ನ ಶಾಸಕರನ್ನು ಕಾಂಗ್ರೆಸ್ ಆಡಳಿತವಿರುವ ಕರ್ನಾಟಕಕ್ಕೆ ಸ್ಥಳಾಂತರಿಸಲು ಪಕ್ಷ ನಿರ್ಧರಿಸಿದೆ ಎಂದು ಅವರು ತಿಳಿಸಿದ್ದಾರೆ.

ಕಾಂಗ್ರೆಸ್ ಶಾಸಕರನ್ನು ಪಕ್ಷದ ಆಡಳಿತವಿರುವ ಕರ್ನಾಟಕದ ಬೆಂಗಳೂರಿಗೆ ಸ್ಥಳಾಂತರಿಸಲಾಗುತ್ತಿದೆ ಎಂದು ಸೌನ್ಸರ್ ಶಾಸಕ ವಿಜಯ್ ರೇವನಾಥ್ ಚೌರೆ ಪಿಟಿಐಗೆ ತಿಳಿಸಿದ್ದಾರೆ. ಬೆಂಗಳೂರಿಗೆ ಸ್ಥಳಾಂತರಿಸುತ್ತಿರುವುದು ಹೌದು ಎಂದು ಶಾಸಕರಾದ ಯಾದವೇಂದ್ರ ಸಿಂಗ್ ಮತ್ತು ಬಾಬು ಜಾಂಡೆಲ್ ಖಚಿತಪಡಿಸಿದ್ದಾರೆ. ಬಿಜೆಪಿ ಕಾಂಗ್ರೆಸ್ ಶಾಸಕರನ್ನು ಖರೀದಿಸಲು ಪ್ರಯತ್ನಿಸುತ್ತಿದೆ. ಅವರೆಲ್ಲರನ್ನೂ ಪಕ್ಷದ ಆಡಳಿತವಿರುವ ರಾಜ್ಯಕ್ಕೆ ಸ್ಥಳಾಂತರಿಸಲಾಗುವುದು ಎಂದು ವಿರೋಧ ಪಕ್ಷದ ನಾಯಕ ಸಿಂಘಾರ್ ತಿಳಿಸಿದ್ದಾರೆ.

## ಖಾಸಗಿ ಬಸ್ ಟಿಕೆಟ್ ದರ ಏರಿಕೆ

**ಬೆಂಗಳೂರು:** ರಾಜ್ಯಾದ್ಯಂತ ಖಾಸಗಿ ಬಸ್ ಪ್ರಯಾಣಿಕರಿಗೆ ಟಿಕೆಟ್ ದರ ಏರಿಕೆ ಬಿಸಿ ತಟ್ಟಲಿದೆ. ಖಾಸಗಿ ಬಸ್‌ಗಳ ಪ್ರಯಾಣ ದರವನ್ನ ಮಂಗಳವಾರದಿಂದ ಜಾರಿ ಆಗುವಂತೆ ಶೇ. 5ರಿಂದ 8ರಷ್ಟು ಹೆಚ್ಚಳ ಮಾಡಲಾಗಿದೆ.

ಡೀಸೆಲ್ ದರ ಏರಿಕೆ, ವಾಹನ ನಿರ್ವಹಣಾ ವೆಚ್ಚ ಹೆಚ್ಚಳ ಹಾಗೂ ನೌಕರರ ವೇತನದ ಒತ್ತಡದಿಂದ ಬೆಲೆ ಏರಿಕೆ ಅನಿವಾರ್ಯ ಎಂದು ಖಾಸಗಿ ಬಸ್ ಮಾಲೀಕರು ಸ್ಪಷ್ಟಪಡಿಸಿದ್ದಾರೆ. ಸ್ಟೇಜ್ ಕ್ಯಾರಿಯೇಜ್ ಬಸ್ ಟಿಕೆಟ್ ದರ ಏರಿಕೆ ಬಗ್ಗೆ ಫೆಡರೇಷನ್ ಆಫ್ ಸ್ಟೇಜ್ ಕ್ಯಾರಿಯೇಜ್ ಬಸ್ ಆಪರೇಟರ್ಸ್ ಅಸೋಸಿಯೇಷನ್ ರಾಜ್ಯಾಧ್ಯಕ್ಷರು ಬೆಲೆ ಏರಿಕೆ ಬಗ್ಗೆ ಘೋಷಣೆ ಮಾಡಿದ್ದಾರೆ.

ಒಕ್ಕೂಟದ ರಾಜ್ಯ ಅಧ್ಯಕ್ಷ ಕುಯ್ಲಾಡಿ ಸುರೇಶ್ ನಾಯಕ್ ಈ ಬಗ್ಗೆ ಮಾತನಾಡಿ, ಕೇಂದ್ರ ಸರಕಾರ ನಾಲ್ಕು ಬಾರಿ ಲೀಟರ್‌ಗೆ 8.17 ಡೀಸೆಲ್ ದರ ಜಾಸ್ತಿ ಮಾಡಿದೆ. ರಾಜ್ಯ ಸರ್ಕಾರ ವರ್ಷದ ಹಿಂದೆ ರೂ.3 ಏರಿಕೆ ಮಾಡಿತ್ತು. ಹಾಗೇ ವಾಹನಗಳ ಬಿಡಿ ಭಾಗಗಳ ದರ ಹೆಚ್ಚಾಗಿದೆ. ಟಯರ್ ರಿಸೋಲಿಂಗ್ ದರ ಹೆಚ್ಚಾಗಿದೆ. ಟೋಲ್ ದರ, ನೌಕರರ ವೇತನ, ತೆರಿಗೆ, ಇನ್ಶೂರೆನ್ಸ್ ಎಲ್ಲವೂ ಹೆಚ್ಚಾಗಿದೆ. ಹೀಗಾಗಿ ಬಸ್ ದರ ಏರಿಕೆ ಅನಿವಾರ್ಯ ಎಂದು ತಿಳಿಸಿದ್ದಾರೆ.



## ಮಹಿಳೆಗೆ ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ

**ದಾವಣಗೆರೆ:** 41 ವರ್ಷದ ಮಹಿಳೆಗೆ ಡ್ರಗ್ಸ್ ನೀಡಿ ಸಾಮೂಹಿಕ ಅತ್ಯಾಚಾರ ಎಸಗಿರುವ ಆರೋಪದ ಮೇಲೆ 10 ಜನರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಬಸವಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯ ಹಳ್ಳಿಯಲ್ಲಿ ಜೂನ್ 3ರಂದು ರಾತ್ರಿ ಈ ಹೀನ ಕೃತ್ಯ ನಡೆದಿದೆ. ಆದರೆ ಜೂನ್ 8ರಂದು ಆರೋಪಿಗಳು ತಾವೇ ರೆಕಾರ್ಡ್ ಮಾಡಿದ್ದಾರೆ ಎನ್ನಲಾದ ಕುಡಿದ ಅಮಲಿನಲ್ಲಿರುವ ಮಹಿಳೆಯ ವಿಡಿಯೋವನ್ನು ವಾಟ್ಸಾಪ್ ಗುಂಪುಗಳಲ್ಲಿ ಹಂಚಿಕೊಂಡ ನಂತರ ಪ್ರಕರಣ ಬೆಳಕಿಗೆ ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆ ನೀಡಿದ ದೂರಿನ ಆಧಾರದ ಮೇಲೆ ಎಫ್‌ಐಆರ್ ದಾಖಲಿಸಿದ ಪೊಲೀಸರು, ಎಲ್ಲಾ 10 ಜನರನ್ನು ಬಂಧಿಸಿದ್ದಾರೆ. ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸಂಬಂಧಿತ ನಿಬಂಧನೆಗಳ ಜೊತೆಗೆ ಸಾಮೂಹಿಕ ಅತ್ಯಾಚಾರ ಸೇರಿದಂತೆ ವಿವಿಧ ಸೆಕ್ಷನ್ ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

## ಸೂರಜ್ ಹೆಗ್ಡೆಗೆ ರಾಹುಲ್ ಗಾಂಧಿ ಅಂತಿಮ ನಮನ



**ಬೆಂಗಳೂರು:** ಎಐಸಿಸಿ ಕಾರ್ಯದರ್ಶಿ ಸೂರಜ್ ಹೆಗ್ಡೆ ಅಂತ್ಯ ಸಂಸ್ಕಾರ ಮಂಗಳವಾರ ನೆರವೇರಿತು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅಂತಿಮ ನಮನ ಸಲ್ಲಿಸಿದರು.

ದೆಹಲಿಯಿಂದ ಬೆಂಗಳೂರಿಗೆ ಆಗಮಿಸಿದ ರಾಹುಲ್ ಗಾಂಧಿ ಸೂರಜ್ ಹೆಗ್ಡೆ ಅವರ ಡಾಲರ್ಸ್ ಕಾಲೋನಿ ನಿವಾಸಕ್ಕೆ ಅಗಮಿಸಿ ಅಂತಿಮ ದರ್ಶನ ಪಡೆದರು. ಅವರಿಗೆ ಸಿಎಂ ಡಿ.ಕೆ.ಶಿವಕುಮಾರ್. ಮಾಜಿ ಸಿಎಂ ಸಿದ್ದರಾಮಯ್ಯ ಸಾಥ್ ನೀಡಿದರು.

ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ ಸೂರಜ್ ಹೆಗ್ಡೆ ಅವರು ಭಾನುವಾರ ರಾತ್ರಿ ಹೃದಯಾಘಾತ ಕೊನೆಯುಸಿರೆಳೆದರು. ಎಐಸಿಸಿ ಕಾರ್ಯದರ್ಶಿ, ಕೆಪಿಸಿಸಿ ಉಪಾಧ್ಯಕ್ಷ ಹಾಗೂ ತಮಿಳುನಾಡು ಮತ್ತು ಪುದುಚೇರಿ ಕಾಂಗ್ರೆಸ್ ಉಸ್ತುವಾರಿಯಾಗಿ ಕೆಲಸ ಮಾಡಿದ್ದರು.

## ನಲಪಾಡ್‌ಗೆ ಹವಾಲ ಹಣದ ಪಾಲು

### ಬಿಟ್‌ಕಾಯಿನ್ ಹಗರಣ: ಎಸ್‌ಐಟಿ, ಇಡಿ ಕಾನೂನು ಕುಣಿಕೆ

**ಬೆಂಗಳೂರು:** ರಾಜ್ಯ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಮೊಹಮ್ಮದ್ ನಲಪಾಡ್‌ಗೆ ಬಿಟ್‌ಕಾಯಿನ್ ಹಗರಣದಲ್ಲಿ ಕಾನೂನಿನ ಸಂಕಷ್ಟ ಮತ್ತಷ್ಟು ಬಿಗಿಗೊಂಡಿದೆ. ಈ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡ (ಎಸ್‌ಐಟಿ) ನ್ಯಾಯಾಲಯಕ್ಕೆ ಅಧಿಕೃತ ಆರೋಪಪಟ್ಟಿ ಸಲ್ಲಿಕೆ ಮಾಡಿದೆ.

ಹಗರಣಕ್ಕೆ ಸಂಬಂಧಿಸಿದಂತೆ ಒಂದೆಡೆ ಎಸ್‌ಐಟಿ ಚಾರ್ಜ್‌ಶೀಟ್ ಸಲ್ಲಿಕೆ ಮಾಡಿದೆ. ಇನ್ನೊಂದೆಡೆ ಜಾರಿ ನಿರ್ದೇಶನಾಲಯ (ಇಡಿ) ಅಕ್ರಮ ಹಣ ವರ್ಗಾವಣೆ ಆರೋಪದಡಿ ತನಿಖೆ ತೀವ್ರಗೊಳಿಸಿದೆ. ಇಡಿ ಅಧಿಕಾರಿಗಳು ನಲಪಾಡ್ ಮನೆ ಮೇಲೆ ದಾಳಿ ನಡೆಸಿದ್ದರು.

ಪ್ರಮುಖ ಆರೋಪಿಗಳಾದ ಶ್ರೀಕಿ, ರಾಬಿನ್ ಖಂಡೇವಾಲ ಹಾಗೂ ಮೊಹಮ್ಮದ್ ನಲಪಾಡ್ ಸೇರಿದಂತೆ ಇತರರ ವಿರುದ್ಧ ಚಾರ್ಜ್‌ಶೀಟ್ ಸಲ್ಲಿಕೆಯಾಗಿದೆ. ಎಸ್‌ಐಟಿ ಅಧಿಕಾರಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದೋಷಾರೋಪ ಪಟ್ಟಿಯಲ್ಲಿ ಮೊಹಮ್ಮದ್ ನಲಪಾಡ್ ವಿರುದ್ಧ ಗಂಭೀರ ಅಂಶಗಳನ್ನು ಉಲ್ಲೇಖಿಸಿದ್ದಾರೆ.



ತುಮಕೂರಿನ ಖಾಸಗಿ ಕಂಪನಿಯೊಂದರ ಬಿಟ್‌ಕಾಯಿನ್ ಕಳವು ಕೃತ್ಯದಲ್ಲಿ ಅಂತಾರಾಷ್ಟ್ರೀಯ ಮಟ್ಟದ ಹ್ಯಾಕರ್ ಶ್ರೀಕೃಷ್ಣ ಅಲಿಯಾಸ್ ಶ್ರೀಕಿಯಿಂದ ನಲಪಾಡ್‌ಗೆ ದೊಡ್ಡ ಮೊತ್ತದ ಪಾಲು ಸಿಕ್ಕಿದೆ. ಹ್ಯಾಕರ್ ಶ್ರೀಕಿ ಕಳುವು ಮಾಡಿದ್ದ ಬಿಟ್‌ಕಾಯಿನ್‌ಗಳನ್ನು ನಗದೀಕರಣ (ಕ್ಯಾಶ್) ಮಾಡಿಕೊಳ್ಳಲು ಮೊಹಮ್ಮದ್ ನಲಪಾಡ್ ಅವರನ್ನು ಸಂಪರ್ಕ ಮಾಡಿದ್ದ. ಪುಟ 2ಕ್ಕೆ

### ಇಡಿ ನೋಟಿಸ್ ಜಾರಿ

ಈ ಹಗರಣಕ್ಕೆ ಸಂಬಂಧಿಸಿದಂತೆ ಹಣ ವರ್ಗಾವಣೆ ತಡೆ ಕಾಯ್ದೆಯಡಿ ಜಾರಿ ನಿರ್ದೇಶನಾಲಯ (ಇಡಿ) ಕೂಡ ತನಿಖೆ ನಡೆಸುತ್ತಿದೆ. ಇಡಿ ಅಧಿಕಾರಿಗಳು ಮೊಹಮ್ಮದ್ ನಲಪಾಡ್ ಹಾಗೂ ಹ್ಯಾಕರ್ ಶ್ರೀಕಿ ಸೇರಿದಂತೆ ಹಲವರ ಮನೆಗಳ ಮೇಲೆ ದಾಳಿ ನಡೆಸಿ ಪ್ರಮುಖ ದಾಖಲೆಗಳನ್ನು ವಶಪಡಿಸಿಕೊಂಡಿದ್ದರು. ಈ ವೇಳೆ ಇಡಿ ಅಧಿಕಾರಿಗಳು ಶ್ರೀಕಿ ಮತ್ತು ರಾಬಿನ್ ಖಂಡೇವಾಲನನ್ನು ಬಂಧಿಸಿ ವಿಚಾರಣೆ ನಡೆಸಿದ್ದರು.

ಬಂಧಿತ ಆರೋಪಿಗಳು ನೀಡಿದ ಮಹತ್ವದ ಹೇಳಿಕೆಗಳ ಆಧಾರದ ಮೇಲೆ, ಪ್ರಕರಣದ ವಿಚಾರಣೆಗೆ ಹಾಜರಾಗುವಂತೆ ಇಡಿ ಅಧಿಕಾರಿಗಳು ಈಗಾಗಲೇ ಮೊಹಮ್ಮದ್ ನಲಪಾಡ್‌ಗೆ ಎರಡು ಬಾರಿ ನೋಟಿಸ್ ಜಾರಿ ಮಾಡಿದ್ದರು. ಈಗ ಇಡಿ ಅಧಿಕಾರಿಗಳು ನಲಪಾಡ್‌ಗೆ ಮೂರನೇ ಬಾರಿಗೆ ನೋಟಿಸ್ ನೀಡಿದ್ದಾರೆ. ಇಡಿ ಕುಣಿಕೆ ಸಹ ಬಿಗಿಯಾಗುವ ಸಾಧ್ಯತೆ ಇದೆ.

ಮೊದಲ ಪುಟದಿಂದ

## ನಾನೇನೂ ಹರಿದಿಲ್ಲ: ಡಿಕೆಶಿಗೆ ನನ್ನ ಸಲಹೆ ಕೇಳೋದೇನಿದೆ?

ಬಸನಗೌಡ ಪಾಟೀಲ ಯತ್ನಾಳ್ ಅವರನ್ನು ಮತ ಹಾಕುವಂತೆ ಕೇಳುತ್ತೇವೆ. ನಮ್ಮ ಪ್ರಯತ್ನ ನಾವು ಮಾಡುತ್ತೇವೆ. ಕಾಂಗ್ರೆಸ್ ನವರಿಗೆ ಹಣ ಬಲ, ಅಧಿಕಾರ ಬಲ ಇದೆ. ಮುಂದೆ ನೋಡೋಣ ಏನಾಗುತ್ತದೆ ಎಂದು ತಿಳಿಸಿದರು.

## ಮರಕ್ಕೆ ನೇಣು ಬಿಗಿದುಕೊಂಡು ರೈತ ಆತ್ಮಹತ್ಯೆಗೆ ಯತ್ನ!

ತಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದಕ್ಕಾಗಿ ಪರಿಹಾರ ಸಿಕ್ಕಿಲ್ಲ ಎಂದು ಆರೋಪಿಸಿ ವಿಧಾನಸೌಧ ಆವರಣದಲ್ಲಿರುವ ಮರವನ್ನು ಕಡಿಯಲು ಈ ಹಿಂದೆ 2025ರಲ್ಲಿ ಪ್ರಯತ್ನಿಸಿದ್ದರು ಎಂದು ಮೂಲಗಳು ತಿಳಿಸಿವೆ. ಮಂಗಳವಾರ, ಅವರು ಮತ್ತೊಮ್ಮೆ ಅದೇ ಮರದ ಬಳಿಗೆ ತಲುಪಿ ಹಸಿರು ಸ್ಕಾರ್ಫ್ ಬಳಸಿ ನೇಣು ಬಿಗಿದುಕೊಳ್ಳಲು ಪ್ರಯತ್ನಿಸಿದ್ದಾರೆ. ಅಲ್ಲಿ ನಿಯೋಜನೆಗೊಂಡಿದ್ದ ಪೊಲೀಸರು ಅವರ ಚಟುವಟಿಕೆಗಳನ್ನು ಗಮನಿಸಿದ ತಕ್ಷಣ, ಅವರನ್ನು ಪೊಲೀಸ್ ಠಾಣೆಗೆ ಕರೆದೊಯ್ದಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ವಿಶು ಕುಮಾರ್, ತಮ್ಮ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಆದರೆ ಪರಿಹಾರವನ್ನು ಇನ್ನೂ ನೀಡಿಲ್ಲ ಎಂದು ಹೇಳಿದರು. 'ನಾಲ್ಕು ವಾರಗಳಲ್ಲಿ ವಿಷಯವನ್ನು ಅಂತಿಮಗೊಳಿಸಿ ಪರಿಹಾರವನ್ನು ಪಾವತಿಸುವಂತೆ ಚಿಕ್ಕಮಗಳೂರಿನ ಜಿಲ್ಲಾಧಿಕಾರಿಗೆ ನ್ಯಾಯಾಲಯ ನಿರ್ದೇಶಿಸಿತ್ತು. ಆದರೆ, ಮೂರು ತಿಂಗಳು ಕಳೆದರೂ ನಮಗೆ ಯಾವುದೇ ಪರಿಹಾರ ಸಿಕ್ಕಿಲ್ಲ. ಜಮೀನಿನಲ್ಲಿ ನಾನು ಶ್ರೀಗಂಧದ ಮರಗಳನ್ನು ಬೆಳೆಸಿದ್ದೇನೆ. ಅಗತ್ಯವಿರುವ ನೋಟಿಸ್ ನೀಡದೆಯೇ ಮರಗಳನ್ನು ಕಡಿಯಲು ಅಧಿಕಾರಿಗಳು ಯೋಜಿಸಿದ್ದಾರೆ. ಈ ಪ್ರಕ್ರಿಯೆಯ ಬಗ್ಗೆ

## ಡಿಕೆಶಿಗೆ 2 ತಿಂಗಳ ಅವಕಾಶ!

ನನ್ನ ಜತೆ ಸಂಪರ್ಕ ಹೊಂದಿದ್ದಾರೆ ಎಂಬ ವದಂತಿ ತಳ್ಳಿ ಹಾಕಿದರು. ಕಾಂಗ್ರೆಸ್‌ನ ಯಾವ ನಾಯಕರನ್ನು ನಾನು ಸಂಪರ್ಕಿಸಿಲ್ಲ ಎಂದು ಸ್ಪಷ್ಟಪಡಿಸಿದರು.

## ಮೈತ್ರಿ ಬಿರುಕು ಸೃಷ್ಟಿಗೆ ಕೈ ಷಡ್ಯಂತ್ರ

ಬಗ್ಗೆಯೂ ಮಾತನಾಡಿದ ಕುಮಾರಸ್ವಾಮಿ, ಆಗ ದೇವೇಗೌಡರ ವಿರುದ್ಧ ಇನ್ನೊಬ್ಬ ಅಭ್ಯರ್ಥಿ ನಿಲ್ಲುವ ಅವಕಾಶ ಇರಲಿಲ್ಲ. ಹೀಗಾಗಿ ರಾಜ್ಯಸಭೆಗೆ ದೇವೇಗೌಡರು ಆಯ್ಕೆಯಾದರು. ಅವರು ಕಾಂಗ್ರೆಸ್ ಬೆಂಬಲದಿಂದ ರಾಜ್ಯಸಭೆಗೆ ಹೋಗಲಿಲ್ಲ ಎಂದು ಹೇಳಿದರು.

ಗ್ಯಾಸ್ ಪೆಟ್ರೋಲ್ ಬೆಲೆ ಏರಿಕೆ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಿಸಿದ ಅವರು, ಯುದ್ಧದ ಹಿನ್ನೆಲೆಯಲ್ಲಿ ಬೆಲೆ ಏರಿಕೆಯಾಗಿದೆ. ಇದು ಭಾರತದಲ್ಲಿ ಮಾತ್ರ ಆಗಿಲ್ಲ. ಜಗತ್ತಿನ ಎಲ್ಲಾ ದೇಶಗಾಳಿಗೂ ಈ ಪರಿಸ್ಥಿತಿ ಬಂದಿದೆ. ಕಾಂಗ್ರೆಸ್ ನವರು ಎಲ್ಲದಕ್ಕೂ ರಾಜಕೀಯ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ನಿರಂತರವಾಗಿ ಕಳೆದ ಮೂರೂವರೆ ವರ್ಷದಿಂದ ಬೆಲೆ ಏರಿಸುತ್ತಾ ಬಂದಿದೆ. ಅದಕ್ಕೆ ಏನೆಂದು ಹೇಳುವುದು? ಎಂದು ತರಾಟೆಗೆ ತೆಗೆದುಕೊಂಡರು. ಮಾಜಿ ಶಾಸಕ ರವೀಂದ್ರ ಶ್ರೀಕಂಠಯ್ಯ, ಕೆಆರ್ ಪೇಟೆ ಶಾಸಕ ಮಂಜುನಾಥ ಇತರರು ಇದ್ದರು.

## ನಲಪಾಡ್‌ಗೆ ಹವಾಲ ಹಣದ ಪಾಲು

ನಲಪಾಡ್ ತನ್ನ ಸ್ನೇಹಿತರ ಮೂಲಕ ಈ ಬಿಟ್‌ಕಾಯಿನ್‌ಗಳನ್ನು ನಗದೀ ಕರಣ ಮಾಡಿಕೊಟ್ಟಿದ್ದಾನೆ ಎನ್ನುವ ವಿಚಾರ ಉಲ್ಲೇಖಿಸಲಾಗಿದೆ.

ಆರೋಪಿ ಶ್ರೀಕಿಗೆ ಸಹಾಯ ಮಾಡಲು ನಲಪಾಡ್ ತನ್ನ ಮುಂಬೈ ಮೂಲದ ಸ್ನೇಹಿತನ ನೆರವು ಪಡೆದಿ ದ್ದರು. ಮುಂಬೈ ಸ್ನೇಹಿತನ ಮೂಲಕ ಹವಾಲಾ ರೂಪ ದಲ್ಲಿ ಕೋಟ್ಯಂತರ ರೂಪಾಯಿ

ಹಣವನ್ನು ನಗದೀಕರಣ ಮಾಡಲಾಗಿತ್ತು. ಈ ಇಡೀ ಪ್ರಕ್ರಿಯೆಯಲ್ಲಿ ನಡೆದ ಹಣದ ವಹಿವಾಟಿನ ಕಮಿಷನ್‌ನಲ್ಲಿ ನಲಪಾಡ್‌ಗೂ ಸಹ ದೊಡ್ಡ ಮಟ್ಟದ ಪಾಲು ಹೋಗಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಚಾರ್ಜ್‌ಶೀಟ್‌ನಲ್ಲಿ ನಲಪಾಡ್‌ಗೆ ಹಣ ಸಂದಾಯವಾಗಿರುವ ಸಂಪೂರ್ಣ ವಿವರಗಳನ್ನು ಎಸ್‌ಐಟಿ ಉಲ್ಲೇಖಿಸಿದೆ.

## ಜೂ.21ರಿಂದ ಯೋಗ ಶಿಕ್ಷಕರ ತರಬೇತಿ



ಮೈಸೂರು: ನಗರದ ರಾಮಕೃಷ್ಣನಗರದ ಪರಮಹಂಸ ಯೋಗ ಮಹಾವಿದ್ಯಾಲಯದಲ್ಲಿ ಜೂನ್ 21ರಿಂದ ಅಂತರರಾಷ್ಟ್ರೀಯ ಯೋಗ ಶಿಕ್ಷಕರ ತರಬೇತಿ ಕೋರ್ಸ್ ಆರಂಭವಾಗಲಿದೆ ಎಂದು ವಿದ್ಯಾಲಯದ ಚೇರ್ಮನ್ ಶಿವಪ್ರಕಾಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ತರಬೇತಿಯು ಮೂರು ತಿಂಗಳ ಅವಧಿಯದ್ದಾಗಿದೆ. ಪರಿಣತ ತಜ್ಞರಿಂದ ಶನಿವಾರ ಸಂಜೆ ಮತ್ತು ಭಾನುವಾರ ಬೆಳಿಗ್ಗೆ ಆಫ್ ಲೈನ್ ಮತ್ತು ಆನ್‌ಲೈನ್ ನಲ್ಲಿ ನಡೆಯಲಿದೆ. ತರಬೇತಿ ಪೂರೈಸಿದವರಿಗೆ ದೇಶ, ವಿದೇಶದಲ್ಲಿ ಉದ್ಯೋಗಾವಕಾಶ ದೊರೆಯಲಿದೆ. ಆಸಕ್ತರು ಮೊ.ಸಂ. 95382 05222 ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು. ಮೈಸೂರು ಯೋಗ ಒಕ್ಕೂಟದ ಅಧ್ಯಕ್ಷ ದೇವರಾಜ್, ಮೈಸೂರು ಯೋಗೀಸ್ ಸಂಸ್ಥೆ ಸಂಸ್ಥಾಪಕ ಯೋಗಪ್ರಕಾಶ್, ಹಿಮಾಲಯ ಯೋಗ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ಎನ್.ಅನಂತ, ಯೋಗ ಮಹಾವಿದ್ಯಾಲಯ ಪ್ರಾಧ್ಯಾಪಕ ಬಿ.ಜೆ.ವಿಜಯ್‌ಕುಮಾರ್, ಎಸ್. ಕಾವ್ಯ, ಬಿ.ಕೆ.ಲಕ್ಷ್ಮಿ ಇದ್ದರು.

# ಪ್ರಧಾನ ಮಂತ್ರಿ ಅವಾಸ್ ಯೋಜನೆ: ನಗರ 2.0 ಯೋಜನೆ ಸಮೀಕ್ಷೆಯ ಸದುಪಯೋಗಕ್ಕೆ ಕರೆ

ರಾಮನಗರ: ಜಿಲ್ಲೆಯ ಕನಕಪುರ ನಗರಸಭಾ ವ್ಯಾಪ್ತಿಯಲ್ಲಿ ಭಾರತ ಸರ್ಕಾರದ ಪ್ರಧಾನ ಮಂತ್ರಿ ಆವಾಸ್ ಯೋಜನೆ (ನಗರ) 2.0 ಯೋಜನೆಯನ್ನು ಸರ್ವರಿಗೂ ಸೂರು ಅಭಿಯಾನದಡಿ ದಿನಾಂಕ: 01-09-2024ರಿಂದ ಜಾರಿಗೆ ತಂದಿರುತ್ತದೆ. ಈ ಯೋಜನೆಯಡಿ ಕೊಳಚೆ ನಿವಾಸಿಗಳನ್ನು ಒಳಗೊಂಡಂತೆ ನಗರ ಪ್ರದೇಶದ ವಸತಿ ರಹಿತ ಬಡವರು ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ವಸತಿ ಸೌಲಭ್ಯ ಕಲ್ಪಿಸುವ ಉದ್ದೇಶ ಹೊಂದಲಾಗಿದ್ದು, ಮುಂದಿನ 05 ವರ್ಷಗಳಲ್ಲಿ ದೇಶಾದ್ಯಂತ ಒಂದು ಕೋಟಿ ನಗರ ಕುಟುಂಬಗಳಿಗೆ ಸಹಾಯಧನದ ಮೂಲಕ ಸೂರು ಒದಗಿಸುವ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿರುತ್ತದೆ.

ಈ ಯೋಜನೆಯ ಮಾರ್ಗಸೂಚಿಗಳನ್ವಯ ವಸತಿ ರಹಿತ ಫಲಾನುಭವಿಗಳ ಸಮೀಕ್ಷೆ ಕೈಗೊಳ್ಳಲು ಸೂಚಿಸಿರುವ ಮೇರೆಗೆ ಕನಕಪುರ ನಗರಸಭೆ ವ್ಯಾಪ್ತಿಯ ಸಾರ್ವಜನಿಕರು ಈ ಯೋಜನೆಯ ಸದುಪಯೋಗವನ್ನು ಪಡೆದುಕೊಳ್ಳಬೇಕು.

ಸಮೀಕ್ಷೆಗೆ ಮಾನದಂಡಗಳು:

ವಸತಿ ರಹಿತ ಫಲಾನುಭವಿಗಳು ಸ್ವಂತ ನಿವೇಶನ/ ಕಚ್ಚಾಮನೆ ಹೊಂದಿದ್ದಲ್ಲಿ ಹಕ್ಕುಪತ್ರ/ ಕ್ರಯಪತ್ರ/ ದಾನಪತ್ರ/ ಉಡುಗೊರೆಪತ್ರ/ ಖಾತಾ ದಾಖಲೆಯನ್ನು ಹೊಂದಿರಬೇಕು. ಪತ್ರಗಳಲ್ಲಿ ಯಾವುದಾದರೂ ದಾಖಲೆಯನ್ನು ಹೊಂದಿರಬೇಕು. ಪ್ರಧಾನ ಮಂತ್ರಿ ಆವಾಸ್ ನಗರ 1.0 ಯೋಜನೆಯ ಸಮೀಕ್ಷೆಯಲ್ಲಿ ಸೇರಿ ವಸತಿ ಸೌಲಭ್ಯ ಪಡೆಯದೇ ಉಳಿದಿರುವ ಎಲ್ಲಾ ಅರ್ಹ ಫಲಾನುಭವಿಗಳನ್ನು ಪ್ರಧಾನ ಮಂತ್ರಿ ಆವಾಸ್ ನಗರ 2.0 ಸಮೀಕ್ಷೆಯಲ್ಲಿ ಸೇರಬಹುದು. ಈ ಹಿಂದೆ ಪ್ರಧಾನ ಮಂತ್ರಿ ಆವಾಸ್ ನಗರ ಯೋಜನೆಯಡಿ ಆಯ್ಕೆಯಾಗಿ ಮನೆ ನಿರ್ಮಿಸದೇ ದಿನಾಂಕ: 31-12-2023 ರ ನಂತರ ಕೇಂದ್ರ ಸರ್ಕಾರದಿಂದ ಮನೆ ರದ್ದುಗೊಂಡ ಫಲಾನುಭವಿಗಳು ಸಮೀಕ್ಷೆಯಲ್ಲಿ ಅರ್ಜಿ ಸಲ್ಲಿಸಲು ಅನರ್ಹರಾಗಿತ್ತಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರದ ವಸತಿ ಯೋಜನೆಗಳಡಿ ಈಗಾಗಲೇ ವಸತಿ ಸೌಲಭ್ಯ ಪಡೆದಿರುವ ಫಲಾನುಭವಿಗಳು ಸಮೀಕ್ಷೆಯಲ್ಲಿ ಸೇರಲು ಅನರ್ಹರಾಗಿರುತ್ತಾರೆ.

ಜೂನ್ 30ರೊಳಗೆ ಅಧಿಕಾರಿಗಳನ್ನು ಸಂಪರ್ಕಿಸಿ

ಆಸಕ್ತ ಸಾರ್ವಜನಿಕರು ಈ ಯೋಜನೆಯ ಸಮೀಕ್ಷೆಯಲ್ಲಿ ಸೇರ್ಪಡೆಯಾಗಲು 2026ರ ಜೂ.30 ರೊಳಗೆ ಕೇಂದ್ರ ಸರ್ಕಾರದ ಆನ್‌ಲೈನ್ ಪೋರ್ಟಲ್ ಕಒಂಜ 2.0 ಐಆರುಟಿ ನಲ್ಲಿ ದಾಖಲಾತಿಗಳೊಂದಿಗೆ ಕನಕಪುರ ನಗರಸಭೆಯ ವಸತಿ ಶಾಖೆಯ ಅಧಿಕಾರಿ/ಸಿಬ್ಬಂದಿಯನ್ನು ಸಂಪರ್ಕಿಸುವಂತೆ (ಸೈಬರ್ ಸೆಂಟರ್ ಕರ್ನಾಟಕ ಒನ್ ಹಾಗೂ ಇತರೆ ಸೇವಾ ಸಿಂಧೂ ಮೂಲಕ ಹಾಕುವ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ) ಕನಕಪುರ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆರೋಗ್ಯ ಕಾಪಾಡಿಕೊಳ್ಳಲು ಆದ್ಯತೆ ಕೊಡಿ



ರಾಮನಗರ: ಆರೋಗ್ಯವನ್ನು ಕಾಪಾಡಿಕೊಳ್ಳುವ ವಿಚಾರದಲ್ಲಿ ಎಲ್ಲರೂ ಆಧ್ಯತೆ ಕೊಡಬೇಕು. ಆರೋಗ್ಯದ ವಿಚಾರದಲ್ಲಿ ನಿರ್ಲಕ್ಷ ಸಲ್ಲದು ಎಂದು ಜಯಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷ ಹಾಗೂ ಸ್ಥಳೀಯ ಹಾಲು ಉತ್ಪಾದಕರ ಸಂಘದ ಅಧ್ಯಕ್ಷ ರವಿ ಕರೆ ನೀಡಿದರು.

ಇಲ್ಲಿಗೆ ಸಮೀಪದ ಮದಾಸಾಬರದೊಡ್ಡಿಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಲ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ.ಟ್ರಸ್ಟ್‌ನ ಮಹಿಳಾ ಜ್ಞಾನ ವಿಕಾಸ ಕಾರ್ಯಕ್ರಮ ದಡಿಯಲ್ಲಿ ಹರೀಸಂದ್ರ-ಕುರುಬರಹಳ್ಳಿ ಕಾರ್ಯಕ್ಷೇತ್ರದ ವಿಭಾಗದವತಿಯಿಂದ ಬೆಂಗಳೂರು ಕೋಣನಕುಂಟೆಯ ಎಸ್.ವಿ.ಕೆ.ಆಸ್ಪತ್ರೆಯ ಸಹಯೋಗದಲ್ಲಿ ಏರ್ಪಡಿಸಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅನಾರೋಗ್ಯಕ್ಕೆ ಚಿಕಿತ್ಸೆಯ ವೆಚ್ಚಗಳು ದುಬಾರಿಯಾಗುತ್ತಿದೆ. ಆರೋಗ್ಯ ವಿಮೆ ಮಾಡಿಸಿಕೊಂಡರೆ ರಿಯಾಯಿತಿ ದರಗಳಲ್ಲಿ ಚಿಕಿತ್ಸೆ ದೊರೆಯುತ್ತದೆ. ಆದರೆ ಆರೋಗ್ಯವನ್ನು ಕಾಪಾಡಿಕೊಳ್ಳುವುದೇ ಉತ್ತಮ ಎಂದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮ ಅಭಿವೃದ್ಧಿ ಯೋಜನೆಯ ಮೂಲಕ ಕಳೆದ ಹತ್ತು ವರ್ಷಗಳಿಂದ ನಮ್ಮ ಜಿಲ್ಲೆಯಲ್ಲಿ ಆರೋಗ್ಯ ವಿಮೆ, ನಿರ್ಗತಿಗರಿಗೆ ಮಾಸಾಸನ, ಅಶಕ್ತರಿಗೆ ಮನೆ ನಿರ್ಮಿಸುವುದು, ಹಾಲು ಉತ್ಪಾದಕರ ಸಹಕಾರ ಸಂಘಗಳ ಕಟ್ಟಡ ನಿರ್ಮಾಣಕ್ಕೆ ಅನುದಾನ, ಕೆರೆಗಳ ಹೂಳೆತ್ತುವುದು, ಹಿಂದು ರುದ್ರ ಭೂಮಿ ದುರಸ್ಥಿ, ಪರಿಸರ ಕಾರ್ಯಕ್ರಮಗಳು, ಶಾಲಾ ಕಾಲೇಜುಗಳಲ್ಲಿ ದುಶ್ಚಟಗಳ ಬಗ್ಗೆ ಮಾಹಿತಿಯನ್ನು ನೀಡುವುದು ಸೇರಿದಂತೆ ಹಲವಾರು ಅತ್ಯಂತ ಉಪಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಸಮಾಜಕ್ಕೆ ಒಳಿತಾಗುವ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರಲಾಗುತ್ತಿದೆ. ಇಂದು ನಮ್ಮ ಗ್ರಾಮದಲ್ಲಿಯೂ ಉಚಿತ ಆರೋಗ್ಯ ಶಿಬಿರವನ್ನು ಆಯೋಜಿಸಿರುವುದು ಅತ್ಯಂತ ಶ್ಲಾಘನೀಯ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಜ್ಞಾನವಿಕಾಸ ಕೇಂದ್ರದ ಅಧ್ಯಕ್ಷರಾದ ಚೈತ್ರ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಯೋಜನೆಯ ತಾಲೂಕು ಯೋಜನಾಧಿಕಾರಿ ಮುರಳಿಧರ್, ಎಸ್ ವಿ ಕೆ ಆಸ್ಪತ್ರೆ ವೈದ್ಯಾಧಿಕಾರಿಗಳಾದ ಡಾ ರವಿ, ಹಾಲು ಉತ್ಪಾದಕರ ಸಂಘದ ಉಪಾಧ್ಯಕ್ಷರಾದ ವೆಂಕಟಪ್ಪ ಮುಂತಾದವರು ಉಪಸ್ಥರಿದ್ದರು.

ಜ್ಞಾನ ವಿಕಾಸ ಸಮನ್ವಯ ಅಧಿಕಾರಿ ಉಷಾ ಕಲ್ಯಾಣಿ ಸ್ವಾಗತಿಸಿದರು. ಮೇಲ್ವಿಚಾರಾದ ಗೀತಾ ಶೋಭಾ ವಂದಿಸಿದರು. ಸೇವಾ ಪ್ರತಿನಿಧಿ ಜಮುನಾ ರಾಣಿ ಕಾರ್ಯಕ್ರಮದ ನಿರೂಪಸಿದರು. ಶಿಬಿರದಲ್ಲಿ ನೇತ್ರ ತಪಾಸಣೆ, ಮಧುಮೇಹ, ರಕ್ತದೊತ್ತಡ ತಪಾಸಣೆ ನಡೆಸಲಾಯಿತು. ಅಗತ್ಯವಿದ್ದವರಿಗೆ ಇಸಿಜಿ ಸೌಲಭ್ಯ ಇತ್ತು. ಸಾಮಾನ್ಯ ಕಾಯಿಲೆಗಳ ಬಗ್ಗೆ ಗ್ರಾಮಸ್ಥರು ತಮಗಿದ್ದ ಅನುಮಾನಗಳನ್ನು ವೈದ್ಯರ ಬಳಿ ಪರಿಹರಿಸಿಕೊಂಡರು. ಸುಮಾರು 200 ಹೆಚ್ಚು ಮಂದಿ ಶಿಬಿರದ ಉಪಯೋಗ ಪಡೆದುಕೊಂಡರು.

# ಮೇಕೆದಾಟು ಯೋಜನೆ ಪ್ರಾರಂಭಕ್ಕೆ ಕನ್ನಡಾಂಬೆ ರಕ್ಷಣಾ ವೇದಿಕೆ ಒತ್ತಾಯ




ಮೈಸೂರು : ಮೇಕೆದಾಟು ಯೋಜನೆಯನ್ನು ಶೀಘ್ರದಲ್ಲೇ ಅನುಷ್ಠಾನ ಮಾಡಬೇಕೆಂದು ಆಗ್ರಹಿಸಿ ಕನ್ನಡಾಂಬೆ ರಕ್ಷಣಾ ವೇದಿಕೆ ಕಾರ್ಯಕರ್ತರು ವೇದಿಕೆ ರಾಜ್ಯಾಧ್ಯಕ್ಷ ರಾಜಶೇಖರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.

ಮಂಗಳವಾರ ಬೆಳಗ್ಗೆ ಹಳೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಜಮಾಯಿಸಿ ನಾನಾ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ವೇದಿಕೆ ರಾಜ್ಯಾಧ್ಯಕ್ಷ ಬಿ.ಬಿ.ರಾಜಶೇಖರ್ ಮಾತನಾಡಿ, ರಾಮನಗರ ಜಿಲ್ಲೆಯ ಕನಕಪುರ ತಾಲೂಕಿನ ಮೇಕೆದಾಟು ಬಳಿ ಕಾವೇರಿ ಮತ್ತು ಅರ್ಕಾವತಿ ನದಿಗಳ ಸಂಗಮದ ಬಳಿ ಮೇಕೆದಾಟು ಅಣೆಕಟ್ಟು ನಿರ್ಮಿಸಲು ಸರ್ಕಾರ ಉದ್ದೇಶಿಸಿದೆ. ಈ ಡ್ಯಾಂ ನಿರ್ಮಾಣವಾದಲ್ಲಿ ಸುಮಾರು 47 ಟಿಎಂಸಿ ನೀರನ್ನು ಸಂಗ್ರಹಿಸಿ, ಬೆಂಗಳೂರು ನಗರಕ್ಕೆ ಕುಡಿಯುವ ನೀರು ಒದಗಿಸಬಹದು ಹಾಗೂ 400 ಮೆಗಾವ್ಯಾಟ್ ಜಲವಿದ್ಯುತ್ ಉತ್ಪಾದಿಸಬಹುದು. ಇದು ಯೋಜನೆಯ ಮುಖ್ಯ ಗುರಿಯಾಗಿದೆ. ತಮಿಳುನಾಡಿಗೆ ಹೆಚ್ಚುವರಿಯಾಗಿ ಸಮುದ್ರಕ್ಕೆ ಹರಿದು ಹೋಗುವ ನೀರನ್ನು ಸಂಗ್ರಹಿಸಿ ಮೇಕೆದಾಟು ಡ್ಯಾಂ ನಿರ್ಮಿಸಿ ನೀರನ್ನು ಬಳಸಿಕೊಳ್ಳುವುದು ಕನ್ನಡಿಗರ ಹಕ್ಕು. ಇದರಿಂದ ಬೇಸಿಗೆಯಲ್ಲಿ ಬೆಂಗಳೂರಿನ ನೀರಿನ ಸಮಸ್ಯೆಗೆ ಇದು ಶಾಶ್ವತ ಪರಿಹಾರವಾಗಲಿದ್ದು, ತಮಿಳುನಾಡಿಗೆ ಬಿಡಬೇಕಾದ ನೀರಿನ ಪ್ರಮಾಣಕ್ಕೂ ಯಾವುದೇ ತೊಂದರೆಯಾಗುವುದಿಲ್ಲ. ಕೂಡಲೇ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮೇಕೆದಾಟು ಯೋಜನೆಯನ್ನು ಕೈಗೆತ್ತಿಕೊಂಡು ಕಾಮಗಾರಿ ಪ್ರಾರಂಭಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಕನ್ನಡಾಂಬೆ ರಕ್ಷಣಾ ವೇದಿಕೆಯ ರಾಜ್ಯ ಖಜಾಂಚಿ ನಂಜುಂಡ, ಪದಾಧಿಕಾರಿಗಳಾದ ಹರೀಶ್, ಕಿಕ್ಕೇರಿ ಕಿರಣ, ಹೊನ್ನೇಗೌಡ, ತಾರಾ ಜಿ, ವತ್ಸಲ, ರಶ್ಮಿ ಸಿಂಗ್, ನಾಗರಾಜ್ ಇತಿ, ಕಿರಣ, ರವಿಗೌಡ, ಶೋಭಾ, ಸೋಮಶೇಖರ್, ಬೆಟ್ಟೆಗೌಡ, ಇಂದ್ರಮ್ಮ, ಶಶಿಕಲಾ, ದಿವ್ಯಾ ರಾಣಿ, ವಿಷ್ಣು, ಗಿರಿಜಾ, ಸಿಂಧುವಳ್ಳಿ ಶಿವಕುಮಾರ್, ಮಹೇಂದ್ರ, ರವಿಕಾಂತ, ಹೇಮಾವತಿ ಇತರರು ಇದ್ದರು.

# ಜೂ.10ರಿಂದ ಪಿರಮಿಡ್ ಧ್ಯಾನ



ಮೈಸೂರು: ದಿ ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟಿ ಮೂವ್ಮೆಂಟ್ ವತಿಯಿಂದ ಜೂ. 10 ಮತ್ತು 11 ರಂದು ನಗರದ ಸರಸ್ವತಿಪುರಂನ ಬಂದಂತಮ್ಮ ಕಾಳಮ್ಮ ಸಮುದಾಯ ಭವನದಲ್ಲಿ ಪಿರಮಿಡ್ ಧ್ಯಾನ ಕುರಿತ ಕಾರ್ಯಕ್ರಮ ನಡೆಯಲಿದೆ ಎಂದು ಪಿರಮಿಡ್ ಧ್ಯಾನ ಮಾಸ್ಟರ್ ಅರುಣ್ ಕುಮಾರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಡಾ. ಸುಭಾಷ್ ಪತ್ರೀಜಿ ಅವರ ಆಶೀರ್ವಾದದೊಡನೆ ಈ ಕಾರ್ಯಕ್ರಮ ನಡೆಯಲಿದೆ. ಎರಡೂ ದಿನದ ಬೆಳಗ್ಗೆ 9 ರಿಂದ ರಾತ್ರಿ 9 ರವರೆಗೆ ನಡೆಯಲಿದೆ. ಧ್ಯಾನಾಸಕ್ತರು, ಸಾರ್ವಜನಿಕರು ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಗೆ ದೂ. 9141779799 ನ್ನು ಸಂಪರ್ಕಿಸಬಹುದಾಗಿದೆ ಎಂದರು. ಶ್ವೇತಾ ಅರುಣ್ ಕುಮಾರ್, ಎಂ. ಎಸ್. ಮಂಜೇಗೌಡ, ಚಂಪಕಮಾಲಾ ಹಾಗೂ ಅರುಣಕುಮಾರಿ ಇದ್ದರು.

# ಉತ್ತಮ ಆರೋಗ್ಯಕ್ಕೆ ಪರಿಸರ ಸಂರಕ್ಷಣೆ ಅಗತ್ಯ



ಮೈಸೂರು: ಭವಿಷ್ಯದ ಪೀಳಿಗೆಯು ಉತ್ತಮ ಆರೋಗ್ಯ ಹೊಂದಲು ಪರಿಸರ ಸಂರಕ್ಷಣೆ ಅಗತ್ಯ ಎಂದು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಹೇಳಿದರು.

ಚಿಗುರು ಸಾಹಿತ್ಯ ಬಳಗ, ವಾಸುದೇವ ಮಹಾರಾಜ್ ಫೌಂಡೇಶನ್‌ನಿಂದ ಇಲ್ಲಿನ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಭೂಮಿ, ಗಾಳಿ, ನೀರನ್ನು ಗೌರವದಿಂದ ಕಾಣಬೇಕು. ಇವುಗಳ ಸುರಕ್ಷತೆ, ಸ್ವಚ್ಛತೆಗೆ ಆದ್ಯತೆ ನೀಡುವುದರಿಂದ ಮಾಲಿನ್ಯ ತಡೆಯಬಹುದು. ಮನುಕುಲವನ್ನು ರಕ್ಷಿಸಬಹುದು ಎಂದರು.

ಹಿರಿಯ ಸಮಾಜ ಸೇವಕ ರಘುರಾಂ ವಾಜಪೇಯಿ ಮಾತನಾಡಿ, ಈಗಾಗಲೇ ಭೂಮಿ ವಿಷಮಯ ಪರಿಸ್ಥಿತಿಯತ್ತ ಸಾಗಿದೆ. ಹುಲ್ಲುಗಾವಲುಗಳನ್ನು ಲೇಔಟ್ ಮಾಡುವ ಭರದಲ್ಲಿ ನಾಶ ಮಾಡುತ್ತಿದ್ದೇವೆ. ನದಿಗಳನ್ನು ಕಲುಷಿತಗೊಳಿಸುತ್ತಿದ್ದೇವೆ. ವಾಯು ಮಾಲಿನ್ಯಕ್ಕೂ ಕಾರಣರಾಗುತ್ತಿದ್ದೇವೆ. ಇದನ್ನು ಸರಿಪಡಿಸದಿದ್ದರೆ ಮುಂದಿನ ಪೀಳಿಗೆ ನಮಗೆ ಶಾಪ ಹಾಕುವುದು ತಪ್ಪ ಎಂದರು.

ಗರ್ಭಧಾರಣಾ ತಜ್ಞ ಡಾ.ಸಿ.ಶರತ್‌ಕುಮಾರ್, ಕರ್ನಾಟಕ ಸುಗಮ ಸಂಗೀತ ಪರಿಷತ್ ನಗರ ಘಟಕದ ಅಧ್ಯಕ್ಷ ನಾಗರಾಜ್ ವಿ.ಭೈರಿ ಅವರಿಗೆ ಲೇಖಕಿ ಬಿ.ಕೆ. ಮೀನಾಕ್ಷಿ ಅವರು ಪರಿಸರ ಸಂರಕ್ಷಣಾ ಪ್ರಶಸ್ತಿ ಪ್ರದಾನ ಮಾಡಿದರು. ಫೌಂಡೇಶನ್ ಅಧ್ಯಕ್ಷ ಎಂ.ವಿ.ನಾಗೇಂದ್ರ ಬಾಬು ರಚಿಸಿದ ಭಿತ್ತಿಚಿತ್ರವನ್ನು ಸಮಾಜ ಸೇವಕ ಕೆ. ರಘುರಾಂ ವಾಜಪೇಯಿ ಬಿಡುಗಡೆ ಮಾಡಿದರು. ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾ ಘಟಕದ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅಧ್ಯಕ್ಷತೆ ವಹಿಸಿದ್ದರು. ಲಕ್ಷ್ಮಿನರಸಿಂಹ ಸ್ವಾಮಿ ದೇವಸ್ಥಾನ ಸಿಇಒ ಕೆ. ಆರ್.ಯೋಗಾನರಸಿಂಹನ್, ಸುಯೋಗ್ ಆಸ್ಪತ್ರೆ ಅಧ್ಯಕ್ಷ ಎಸ್.ಪಿ.ಯೋಗಣ್ಣ, ಬಳಗದ ಅಧ್ಯಕ್ಷ ಎನ್.ಅನಂತ ಹಾಜರಿದ್ದರು.

# ಜೂ.13, 14ರಂದು ರೈಸ್-2026 ಸಮ್ಮೇಳನ




ಮೈಸೂರು: ವಿಕಸಿತ ಭಾರತ 2047ಕ್ಕಾಗಿ ನವೋದ್ಯಮ ಮತ್ತು ಉದ್ಯಮಶೀಲತೆಯಿಂದ ಚಾಲಿತ ಬೆಳವಣಿಗೆ ಎಂಬ ಧ್ಯೇಯವಾಕ್ಯದೊಂದಿಗೆ ಜೂ.13, 14ರಂದು ಬೆಂಗಳೂರಿನಲ್ಲಿ ಎರಡು ದಿನಗಳ ರೈಸ್-2026 ಸಮ್ಮೇಳನ ಆಯೋಜಿಸಿರುವುದಾಗಿ ಸಿಎಫ್‌ಟಿಆರ್‌ಐ ನಿರ್ದೇಶಕ ಡಾ. ಗಿರಿಧರ್ ಪರ್ವತಂ ತಿಳಿಸಿದರು.

ಈ ಸಂಬಂಧ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ದೇಶದ ಆರ್ಥಿಕ ಪ್ರಗತಿ, ತಂತ್ರಜ್ಞಾನ ವರ್ಗಾವಣೆ ಹಾಗೂ ನವೋದ್ಯಮಗಳಿಗೆ (ಸ್ಟಾರ್ಟ್‌ಅಪ್) ಉತ್ತೇಜನ ನೀಡುವ ಸಲುವಾಗಿ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಳಿ ಅಂಗಸಂಸ್ಥೆಗಳಾದ ಸಿಎಸ್‌ಐಆರ್, ರಾಷ್ಟ್ರೀಯ ಏರೋಸ್ಪೇಸ್ ಪ್ರಯೋಗಾಲಯ, ಸಿಎಫ್‌ಟಿಆರ್‌ಐ ಸಂಯುಕ್ತ ಆಶ್ರಯದಲ್ಲಿ ಸಂಶೋಧನೆ, ಕೈಗಾರಿಕೆ, ಸ್ಟಾರ್ಟ್‌ಅಪ್ ಮತ್ತು ಉದ್ಯಮಶೀಲತೆ (ರೈಸ್) ಸಮಾವೇಶವನ್ನು ಜೂ.13 ಹಾಗೂ 14ರಂದು ಬೆಂಗಳೂರಿನ ಹೆಚ್‌ಎಎಲ್ ವಿಎಂ ಘಾಟ್ಗೆ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿದೆ. ಸಮಾವೇಶವನ್ನು ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಭೂ ವಿಜ್ಞಾನಗಳ ಖಾತೆ ರಾಜ್ಯ ಸಚಿವ ಡಾ.ಜಿತೇಂದ್ರ ಸಿಂಗ್ ಉದ್ಘಾಟಿಸಲಿದ್ದಾರೆ. ಸಿಎಸ್‌ಐಆರ್ ಮಹಾನಿರ್ದೇಶಕಿ, ಡಿಎಸ್‌ಐಆರ್ ಕಾರ್ಯದರ್ಶಿ ಡಾ.ಎನ್.ಕಲೈಸೆಲ್ವಿ ಗೌರವ ಅತಿಥಿಯಾಗಿ ಭಾಗವಹಿಸಲಿದ್ದಾರೆ. 14ರಂದು ಸಮಾರೋಪ ಸಮಾರಂಭ ನಡೆಯಲಿದ್ದು, ಕೇಂದ್ರ ಸಚಿವ ಪ್ರಹ್ಲಾದ ಜೋಷಿ, ಸಂಸದ ತೇಜಸ್ವಿ ಸೂರ್ಯ ಭಾಗವಹಿಸಲಿದ್ದಾರೆ ಎಂದರು.

ವಿಕಸಿತ ಭಾರತ 2047ಕ್ಕಾಗಿ ನವೋದ್ಯಮ ಮತ್ತು ಉದ್ಯಮಶೀಲತೆಯಿಂದ ಚಾಲಿತ ಬೆಳವಣಿಗೆ ಎಂಬ ಧ್ಯೇಯವಾಕ್ಯದೊಂದಿಗೆ ನಡೆಯಲಿರುವ ಈ ಎರಡು ದಿನಗಳ ರಾಷ್ಟ್ರೀಯ ಸಮಾವೇಶ ಸಂಶೋಧನಾ ಸಂಸ್ಥೆಗಳು, ಕೈಗಾರಿಕೆಗಳು, ಸ್ಟಾರ್ಟ್‌ಅಪ್‌ಗಳು, ಶೈಕ್ಷಣಿಕ ಸಂಸ್ಥೆಗಳು, ನೀತಿ ನಿರೂಪಕರು, ಹೂಡಿಕೆದಾರರು ಹಾಗೂ ವಿದ್ಯಾರ್ಥಿಗಳನ್ನು ಒಂದೇ ವೇದಿಕೆಗೆ ಕರೆತಂದು, ನವೋದ್ಯಮ ಆಧಾರಿತ ಆರ್ಥಿಕ ಬೆಳವಣಿಗೆ ಮತ್ತು ತಾಂತ್ರಿಕ ಸ್ವಾವಲಂಬನೆಯನ್ನು ಉತ್ತೇಜಿಸುವ ಉದ್ದೇಶ ಹೊಂದಿದೆ. ತಂತ್ರಜ್ಞಾನ ಪ್ರದರ್ಶಕರು ತಮ್ಮ ಅತ್ಯಾಧುನಿಕ ಆವಿಷ್ಕಾರ ಹಾಗೂ ಅನುಷ್ಠಾನಗೊಳ್ಳಬಹುದಾದ ತಂತ್ರಜ್ಞಾನಗಳನ್ನು ಪ್ರದರ್ಶಿಸಲಿದ್ದಾರೆ. ಗೋಷ್ಠಿಯಲ್ಲಿ ವಿಜ್ಞಾನಿಗಳಾದ ಪ್ರೊ.ಆರ್.ಎಸ್.ಮಾಚೆ, ಡಾ.ವಿಕಾಸ್‌ಸಿಂಗ್ ಚೌಹಾನ್, ಡಾ.ಎ.ಎ.ಇನಾಮ್ದಾರ್, ಎಂ.ವಿ.ರಘುನಂದನ್, ಡಾ. ರಾಮಪ್ರಸಾದ್.ಟಿ.ಆರ್, ಡಾ.ಆರ್.ಸುಹಾಸ್, ಅರುಣ್‌ಕುಮಾರ್ ಇದ್ದರು.

# ಹುಲಿ ದಾಳಿ ಕುರಿ ಸಾವು

ಗುಂಡ್ಲುಪೇಟೆ: ತಾಲ್ಲೂಕಿನ ಹೆಗ್ಗಡಹಳ್ಳಿ ಗ್ರಾಮದ ನಟರಾಜು ಎಂಬುವವರು ಗ್ರಾಮದ ಹೊರವಲಯದಲ್ಲಿ ಇರುವ ಕೆರೆಯ



ಬಳಿ ಕುರಿಗಳನ್ನು ಮೇಯಿಸುವ ಸಂದರ್ಭದಲ್ಲಿ ಹುಲಿ ಒಂದು ಕುರಿಯನ್ನು ಎಳೆದೊಯ್ಯಲು ಯತ್ನಿಸಿದಾಗ ಕುರಿಗಾಯಿ ನಟರಾಜ್ ಚೀರಿಕೊಂಡಿದ್ದು ನಂತರ ಕುರಿ ಬಿಟ್ಟು ಹುಲಿ ಪರಾರಿಯಾಗಿರುವ ಘಟನೆ ನಡೆದಿದೆ.

ಗ್ರಾಮಕ್ಕೆ ಹೊಂದಿಕೊಂಡಿರುವಂತೆ ಘಟನೆ ನಡೆದಿದ್ದು ಗ್ರಾಮಸ್ಥರು ಆತಂಕಕ್ಕೆ ಒಳಗಾಗಿದ್ದಾರೆ, ಅರಣ್ಯ ಇಲಾಖೆ ಹುಲಿ ಸೆರೆಗೆ ಕಾರ್ಯಾಚರಣೆ ನಡೆಸಬೇಕು ಅಲ್ಲದೆ, ಕುರಿ ಕಳೆದುಕೊಂಡ ನಟರಾಜು ಗೆ ಸೂಕ್ತ ಪರಿಹಾರ ನೀಡಬೇಕು ಎಂದು ಗ್ರಾಮದ ಗುರುಸ್ವಾಮಿ ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಶ್ರದ್ಧಾಂಜಲಿ ಸಭೆ

# ಅರಸು ಮೊಮ್ಮಗ ಸೂರಜ್ ಹೆಗಡೆ ನಿಧನಕ್ಕೆ ಕಾಂಗ್ರೆಸ್ ಸಂತಾಪ




ಮೈಸೂರು: ನೂರಾರು ಜನರಿಗೆ ಬಿ ಫಾರಂ ಕೊಟ್ಟು ಬೆಳೆಯಲು ಅವಕಾಶ ಕೊಟ್ಟ ಡಿ.ದೇವರಾಜ ಅರಸು ಅವರ ಮೊಮ್ಮಗ ಸೂರಜ್ ಹೆಗಡೆ ಅವರಿಗೆ ಯಾರೂ ಕೈ ಹಿಡಿಯಲಿಲ್ಲ ಎನ್ನುವ ಬೇಸರ ಸದಾ ಅವರಿಗಿತ್ತು ಎಂದು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್ ಬೇಸರ ವ್ಯಕ್ತಪಡಿಸಿದರು.

ನಗರದ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ನಡೆದ ಶ್ರದ್ಧಾಂಜಲಿ ಸಭೆಯಲ್ಲಿ ಮಾತನಾಡಿದ ಅವರು,ಸೂರಜ್ ಹೆಗಡೆ ಅವರ ತಾತಾ ಡಿ.ದೇವರಾಜ ಅರಸು ಅವರು ರಾಜ್ಯಕ್ಕೆ ಹಾಗೂ ದೇಶಕ್ಕೆ ಮಾದರಿಯಾಗುವಂತೆ ರಾಜಕಾರಣ ಮಾಡಿದವರು. ಡಿ.ದೇವರಾಜ ಅರಸು ಅವರಿಂದ ಸಹಾಯ ಪಡೆದು ಅಧಿಕಾರ ಪಡೆದುಕೊಂಡ ರಾಜಕಾರಣಿಗಳು ಮನಸ್ಸು ಮಾಡಿದ್ದರೆ ಸೂರಜ್ ಹೆಗಡೆರನ್ನು ಶಾಸನ ಸಭೆಗೆ ಕಳುಹಿಸಬಹುದಾಗಿತ್ತು. ಅವರ ತಾತನಿಗಾದರೂ ಋಣ ತೀರಿಸಲು ಸಾಧ್ಯವಾಗಲಿಲ್ಲ. ಕಡೆ ಪಕ್ಷ ಮೊಮ್ಮಗನಿಗೆ ಸಹಾಯ ಮಾಡುವ ಮೂಲಕವಾದರೂ ಅವರ ಋಣ ತೀರಿಸಬಹುದಾಗಿತ್ತು ಎಂದು ತಿಳಿಸಿದರು.

ನನಗೂ ಸೂರಜ್ ಅವರಿಗೂ ಬಹಳ ಹತ್ತಿರದ ಒಡನಾಟಗಳಿದ್ದವು. 2019ರ ಚುನಾವಣೆಯಲ್ಲಿ ನಾನು ಹಾಗೂ ಸೂರಜ್ ಹೆಗಡೆ ಟಿಕೆಟ್ ಆಕಾಂಕ್ಷಿಗಳಾಗಿದ್ದೆವು. ಟಿಕೆಟ್ ಕೇಳುವ ಸಂದರ್ಭದಲ್ಲಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ನಮ್ಮಿಬ್ಬರಲ್ಲಿ ಯಾರಿಗಾದರೂ ಟಿಕೆಟ್ ನೀಡಿ. ಒಬ್ಬರಿಗೊಬ್ಬರು ಸಹಮತವಿದೆ ಎಂದು ಹೇಳಿದ್ದೆವು. ಆದರೆ ದುರಾದೃಷ್ಟವಶಾತ್ ಆ ಬಾರಿ ಇಬ್ಬರಿಗೂ ಟಿಕೆಟ್ ಸಿಗದೆ ವಿಜಯ್ ಶಂಕರ್ ಅವರಿಗೆ ಟಿಕೆಟ್ ಸಿಕ್ಕಿತು ಎಂದು ಸ್ಮರಿಸಿದರು.

ಪಕ್ಷಕ್ಕಾಗಿ ದುಡಿಯುತ್ತಿರುವವರ ಸಾವು ಹೆಚ್ಚಾಗುತ್ತಿದೆ. ನಗರ ಹಾಗೂ ಗ್ರಾಮಾಂತರ ಮಟ್ಟದಲ್ಲಿ 10 ವರ್ಷದಲ್ಲಿ 50 ಜನ ತೀರಿಹೋಗಿದ್ದಾರೆ. ಈಗಲೂ ಎಷ್ಟೋ ಕಾಂಗ್ರೆಸ್ ಕಾರ್ಯಕರ್ತರು ನಾನಾ ಆರೋಗ್ಯದ ಸಮಸ್ಯೆಗಳಿಂದ ಬಳಲುತ್ತಿದ್ದಾರೆ ಮತ್ತು ಸಾಯುತ್ತಿದ್ದಾರೆ. ಹೀಗಾಗಿ ಪಕ್ಷದಲ್ಲಿ ಎಮರ್ಜೆನ್ಸಿ ಫಂಡ್ ಸ್ಥಾಪಿಸಬೇಕು. ಎಂದು ಮನವಿ ಮಾಡಿದರು.

ಮೈಸೂರು ಕಾಂಗ್ರೆಸ್ ತುರ್ತು ನಿಧಿಗೆ ಕೆಲವು ಪದಾಧಿಕಾರಿಗಳು ಸುಮಾರು 3,25,000 ದೇಣಿಗೆಯನ್ನು ಘೋಷಣೆ ಮಾಡಿದರು. ಕೆಪಿಸಿಸಿಯ ಟ್ರೈನಿಂಗ್ ಸೆಂಟರ್ ಗೆ ಸೂರಜ್ ಹೆಗ್ಡೆ ಹೆಸರು ಇಡಬೇಕು ಎಂದು ಆಗ್ರಹಸಿದರು.

ನಗರಾಧ್ಯಕ್ಷರಾದ ಆರ್.ಮೂರ್ತಿ ಮಾತನಾಡಿ ಸೂರಜ್ ಹೆಗ್ಡೆ ಸುಮಾರು 20 ವರ್ಷ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಕೆಲಸ ಮಾಡಿದ್ದಾರೆ , ಅವರಿಗೆ ಕಳೆದ 2 ವರ್ಷಗಳಿಂದ ಹೃದಯ ಸಮಸ್ಯೆ ಇತ್ತು ಕಳೆದ 3 ತಿಂಗಳಿಂದ ಅವರ ಆರೋಗ್ಯ ಕ್ಷೀಣಿಸಿತ್ತು ಆದರೂ ಅವರು ಎಡಬಿಡದೆ ಕೆಲಸ ಮಾಡುತ್ತಿದ್ದರು ಎಂದರು. ಮೈಸೂರಿನಲ್ಲಿ ನೂತನವಾಗಿ ನಿರ್ಮಾಣವಾಗುತ್ತಿರುವ ಕಾಂಗ್ರೆಸ್ ಭವನಕ್ಕೆ ಗೌಪ್ಯವಾಗಿ 1 ಲಕ್ಷದ 80 ಸಾವಿರ ನೀಡಿ ನಮ್ಮ ತಾತ ದೇವರಾಜ ಅರಸು ಅವರ ಕಂಡ ಕನಸು ನನಸಾಗಬೇಕು ಎಂದು ಹೇಳಿಕೊಂಡಿದ್ದರು ಎಂದರು.

ನಗರ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಎಂ.ಶಿವಣ್ಣ, ಉಪಾಧ್ಯಕ್ಷರಾದ ಶಿವಪ್ರಸಾದ್, ಎಡತಲೆ ಮಂಜುನಾಥ್ , ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಲತಾ ಚಿಕ್ಕಣ್ಣ, ಮುಖಂಡರಾದನ ಪ್ರೇಮ ಶಂಕರ್, ಮಾಜಿ ಮೇಯರ್ ಮೋದಮಣಿ, ಚಾಮರಾಜ ಕ್ಷೇತ್ರದ ಬ್ಲಾಕ್ ಅಧ್ಯಕ್ಷ ಮಂಚೇಗೌಡನಕೊಪ್ಪಲಿನ ರವಿ, ಕಾರ್ಯದರ್ಶಿ ಈಶ್ವರ್ ಚಕ್ಕಡಿ, ಗಿರೀಶ್, ಡೈರಿ ವೆಂಕ್ಟೇಶ್, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ಚಂದನ್ ಕುಮಾರ್, ನಾಗೇಶ್, ಎಂ.ಕೆ.ಅಶೋಕ್, ಸಿದ್ದಯ್ಯ, ಡಾ.ನಾಗರಾಜ್, ಮೋಹನ್, ರಾಹುಲ್ ಕುಂಬರಹಳ್ಳಿ, ಸಂತೋಷ್ ಮಳಿಯೂರ್, ಚಿಕ್ಕಣ್ಣ, ಸುನಂದ್ ಕುಮಾರ್ ಇತರರು ಇದ್ದರು.

# ಚಿನ್ನಾಭರಣ ಪ್ರದರ್ಶನದ ಪೋಸ್ಟರ್ ಅನಾವರಣ




ಮೈಸೂರು: ಪಾರಸ್ ಪೃಥ್ವಿ ಜ್ಯುವೆಲರ್ಸ್ ವತಿಯಿಂದ ವಿಜಯನಗರದ ಕೊಡಗುಗೌಡ ಸಮಾಜದಲ್ಲಿ ಆಯೋಜಿಸಿರುವ ಜೂ.19ರಿಂದ 21ರವರೆಗೆ ರಾಯಲ್ ಟ್ರೇಸರ್ ಹೆಸರಿನ ಚಿನ್ನ, ಬೆಳ್ಳಿ ವಸ್ತು ಪ್ರದರ್ಶನದ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ವಿಜಯನಗರದ ಜಗನ್ನಾಥ ಶೈಣೈ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪೋಸ್ಟರ್ ಬಿಡುಗಡೆ ಮಾಡಿದ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಮಾತನಾಡಿ, ತುಂಬಾ ಸಂತೋಷದಿಂದ ಪೃಥ್ವಿ ಜ್ಯುವೆಲರ್ಸ್ ಅಭರಣಗಳ ಪ್ರದರ್ಶನದ ಭಿತ್ತಿ ಪತ್ರವನ್ನು ಬಿಡುಗಡೆ ಮಾಡಿದ್ದೇನೆ. ನಮ್ಮ ಅಸ್ಥಿತ್ವವನ್ನು ಭೂಮಿಯಲ್ಲದೇ ಬೇರೆಲ್ಲೂ ಇಡಲು ಸಾಧ್ಯವಿಲ್ಲ. ಅಂತಹ ಪೃಥ್ವಿ ಹೆಸರಿನ ಪ್ರದರ್ಶನ ಮಾಡುತ್ತಿರುವುದು ಸಂತಸ ಸಂಗತಿಯಾಗಿದೆ. ಹೇಮಾನಂದೀಶ್ ನಿರಂತರವಾಗಿ ಒಂದಿಲ್ಲೊಂದು ಕಾರ್ಯಕ್ರಮದಲ್ಲಿ ಸಂಚರಿಸುತ್ತಿರುತ್ತಾರೆ. ಅಂತಹವರು ರಾಜಕೀಯಕ್ಕೆ ಬರಬೇಕಿದೆ. ನಮ್ಮ ಪತಿಯವರು ನಮ್ಮನ್ನು ಬರೀ ಪುಸ್ತಕಕ್ಕೆ ಸೀಮಿತಗೊಳಿಸಿದ್ದರಿಂದ ನಾನು ವಿವಿಗೆ ಸೀಮಿತವಾಗಿ ಕೆಲಸ ಮಾಡಿದೆ ಎಂದು ಹೇಳಿದರು.

ಇಲ್ಲಿ ಭಾಗವಹಿಸಿರುವ ಎಲ್ಲರೂ ಬಂಗಾರಿಯರೇ ಆಗಿದ್ದು, ಇಂತಹವರೆಲ್ಲರೂ ಸೇರಿ ಭಿತ್ತಿಪತ್ರ ಬಿಡುಗಡೆ ಮಾಡಿರುವುದರಿಂದ ಮತ್ತಷ್ಟು ಚಿನ್ನದ ವ್ಯಾಪಾರ ಆಗಲಿದೆ. ಚಿನ್ನದ ಬಳಕೆ ನಿನ್ನೆ ಮೊನ್ನೆಯದಲ್ಲ ಕಂಚಿನ ಯುಗದಿಂದಲೂ ಚಿನ್ನದ ಬಳಕೆಯ ಇತಿಹಾಸವನ್ನು ದಾಖಲೆಯಲ್ಲಿ ಗಮನಿಸಬಹುದಾಗಿದೆ. ಹನುಮಂತ ಸೀತೆಯ ಭೇಟಿ ಖಚಿತತೆಯಲ್ಲೂ ಚೂಡಾಮಣಿ, ಖಡ್ಗದಂತಹ ವಸ್ತುಗಳ ಮೂಲಕ ಪರಿಚಯ ಮಾಡಿಕೊಳ್ಳುತ್ತಿದ್ದದ್ದು ಕಾಣಬಹುದಾಗಿದೆ. ಆಯಾ ಕಾಲಘಟಕ್ಕೆ ಅನುಗುಣವಾದ ಚಿನ್ನದ ಬಳಕೆ ಮಾಡುತ್ತಿದ್ದೇವೆ. ನಮ್ಮ ತನವನ್ನು ನಾವು ಉಳಿಸಿಕೊಳ್ಳಲು ಚಿನ್ನವನ್ನು ಉಳಿಸಿಕೊಳ್ಳಬೇಕಿದೆ. ದೇಶದ ಮಾತ್ರವಲ್ಲದೆ ಬೇರೆ ದೇಶಗಳಲ್ಲಿಯೂ ಚಿನ್ನದ ಗಟ್ಟಿಯನ್ನು ಇಟ್ಟುಕೊಂಡು ಬೇಡಿಕೆ ಸೃಷ್ಠಿಸುವ ಕಾಲಘಟ್ಟದಲ್ಲಿ ನಾವಿದ್ದೇವೆ ಎಂದು ಹೇಳಿದರು.

ಕೊಡಗು ಸಮಾಜದಲ್ಲಿ ನಡೆಯುವ ಆಭರಣ ಪ್ರದರ್ಶನ ಮತ್ತು ಮಾರಾಟದಲ್ಲಿ ಟೆಂಪಲ್ ಜ್ಯುವಲರಿ, ಟರ್ಕಿ ಜ್ಯುವಲರಿ, ಫ್ಯೂಜನ್ ಜ್ಯುವಲರಿ, ಇಟಾಲಿಯನ್ ಜ್ಯುವಲರಿ ಸೇರಿ 10ಕ್ಕೂ ಹೆಚ್ಚು ಬಗೆ ಹಾಗೂ 6ಸಾವಿರ ವಿಧವಾದ ಆಭರಣಗಳ ಮಾರಾಟ ಇರಲಿದೆ. ಪೃಥ್ವಿ ಜ್ಯುವೆಲರ್ಸ್ ನ ಸಂಸ್ಥಾಪಕ ಭದ್ರಿ, ಸಹ ಸಂಸ್ಥಾಪಕಿ ಭಾರ್ಗವಿ ಭದ್ರೀಶ್, ಕೊಳಲು ನಾಗರಾಜಪ್ಪ, ಹೇಮಾಲಕ್ಷ್ಮಣ್, ವೀಣಾ ಆಶೋಕ್, ಡಾ.ಯೋಗಿತ, ತೀರ್ಥಸ್ವಾಮಿ, ಪುಷ್ಕರಣಿ ಶಾಲೆಯ ಮುಖ್ಯಸ್ಥೆ ಸ್ವರೂಪಿಣಿ, ಉಷಾ ನರಸಿಂಹ, ಶೋಭಾ ರಮೇಶ್ ಇನ್ನಿತರರು ಉಪಸ್ಥಿತರಿದ್ದರು.

> ಇಂದಿನ ದಿನಗಳಲ್ಲಿ ಹೂಡಿಕೆಗೆ ಒಂದು ಒಳ್ಳೆ ಕ್ಷೇತ್ರ ಎಂದರೆ ಚಿನ್ನಾಭರಣ ಎಂಬಂತೆ ಆಗಿದೆ. ಇಂದು ಷೇರು ಮಾರುಕಟ್ಟೆ ಸೇರಿ ವಿವಿಧ ಮಾರುಕಟ್ಟೆಗಳ ಮಾದರಿಯಲ್ಲೇ ಚಿನ್ನಾಭರಣ ಸಹ ಮಹಿಳೆಯರಿಗೆ ಇಷ್ಟವಾದ ಕ್ಷೇತ್ರವಾಗಿದೆ. ಅಂತಹ ಕ್ಷೇತ್ರ ಮೂರು ದಿನಗಳ ಎಲ್ಲರನ್ನೂ ಸೆಳೆಯಲಿದೆ.
>
> – **ಭಾರ್ಗವಿ ಭದ್ರೀಶ್**
> ಪೃಥ್ವಿ ಜ್ಯುವೆಲರ್ಸ್

> ಇಂದು ಭೂಮಿಗೆ ಹೆಚ್ಚು ಹೂಡಿಕೆ ಮಾಡುವ ರೀತಿಯಲ್ಲೇ ಚಿನ್ನಾಭರಣದ ಮೇಲೂ ಹೆಚ್ಚು ಹೂಡಿಕೆ ನಡೆಯುತ್ತಿದೆ. ಮೈಸೂರು ಭಾಗದಲ್ಲಿ ಮೊದಲ ವಸ್ತುಪ್ರದರ್ಶನ ಮಾಡಲಾಗುತ್ತಿದೆ. ಆತ್ಯಾಕರ್ಷಕ ಡೈಮೆಂಡ್ ಪ್ರದರ್ಶನದಲ್ಲಿರಲಿವೆ. ಜನತೆಗೆ ಕೈಗೆಟಕುವ ದರದಲ್ಲಿ ಚಿನ್ನಾಭರಣ ಮಾರಾಟ ಮಾಡಲಾಗುತ್ತಿದೆ. ನಾಲ್ಕೈದು ದೇಶದ ವಿವಿಧ ಬಗೆಯ ಆಭರಣಗಳು ಪ್ರದರ್ಶನದಲ್ಲಿ ಇರಲಿವೆ. ಶೇ.3ರಷ್ಟು ವೆಸ್ಟೇಜಸ್ ನಿಂದ ಪ್ರಾರಂಭಗೊಳ್ಳಲಿದೆ. ಎಕ್ಸ್ ಚೇಂಜ್ ಮೇಳ ಸಹ ನಡೆಯಲಿದ್ದು ಅದನ್ನು ಸದುಪಯೋಗ ಪಡಿಸಿಕೊಳ್ಳಿ.
>
> –**ಭದ್ರೀಶ್**
> ಪೃಥ್ವಿ ಜ್ಯುವೆಲರ್ಸ್ ಸಂಸ್ಥಾಪಕ

# ಬಹುತ್ವ, ಬಂಧುತ್ವದ ಮೇಲೆ ದಾಳಿ

## ಹಿರಿಯ ಪತ್ರಕರ್ತ ಶಿವಸುಂದರ್ ಕಳವಳ | 'ಈದ್ ಸೌಹಾರ್ದ ಕೂಟ



ಚಾಮರಾಜನಗರದ ಜೋಡಿರಸ್ತೆಯಲ್ಲಿರುವ ವರ್ತಕರ ಭವನದಲ್ಲಿ ಜಮಾತೆ ಇಸ್ಲಾಮಿ ಹಿಂದ್ ಹಾಗೂ ಪ್ರಗತಿಪರ ಸಂಘಟನೆಗಳ ಸಹಯೋಗದಲ್ಲಿ ಭಾನುವಾರ ಆಯೋಜಿಸಲಾಗಿದ್ದ 'ಈದ್ ಸೌಹಾರ್ದ ಕೂಟ ಹಾಗೂ ಬಹುಭಾಷಾ ಕವಿಗೋಷ್ಠಿ' ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಹಾಗೂ ಚಿಂತಕ ಶಿವಸುಂದರ್ ಪಾಲ್ಗೊಂಡು ಮಾತನಾಡಿದರು.

ಭಾರತದ ಬಹುತ್ವ ಮತ್ತು ಬಂಧುತ್ವದ ಮೇಲೆ ದಿನನಿತ್ಯ ದಾಳಿಗಳು ನಡೆಯುತ್ತಿದ್ದು, ನಾವಿಂದು ಅತ್ಯಂತ ಕೆಟ್ಟ ಕಾಲಘಟ್ಟದಲ್ಲಿ ಬದುಕುತ್ತಿದ್ದೇವೆ ಎಂದು ಅವರು ತೀವ್ರ ಆತಂಕ ವ್ಯಕ್ತಪಡಿಸಿದರು.

### ಮತದಾರರ ಪರಿಷ್ಕರಣೆ ಹೆಸರಿನಲ್ಲಿ ಅನ್ಯಾಯ

ಮತದಾರರ ಪರಿಷ್ಕರಣೆ ಪ್ರಕ್ರಿಯೆಯು ಅನ್ಯಾಯದ ಪರಮಾವಧಿಯಾಗಿದೆ ಎಂದು ಕಳವಳ ವ್ಯಕ್ತಪಡಿಸಿದ ಶಿವಸುಂದರ್, ಚುನಾವಣಾ ಆಯೋಗಕ್ಕೆ ನಾಗರಿಕರ ಪೌರತ್ವವನ್ನು ಪ್ರಶ್ನಿಸುವ ಯಾವುದೇ ಅಧಿಕಾರವಿಲ್ಲ ಎಂದು ಸ್ಪಷ್ಟಪಡಿಸಿದರು. ದಲಿತರು, ಆದಿವಾಸಿಗಳು, ಅಸಂಘಟಿತ ಕಾರ್ಮಿಕರು ಹಾಗೂ ಮುಸಲ್ಮಾನರನ್ನು ಮತದಾರರ ಪಟ್ಟಿಯಿಂದ ಹೊರಗಿಡುವ ಷಡ್ಯಂತ್ರಗಳು ನಡೆಯುತ್ತಿವೆ. ಮುಸ್ಲಿಮರನ್ನು ಬಾಂಗ್ಲಾ ವಲಸಿಗರೆಂದು ಬಿಂಬಿಸಿ ಸಾಂವಿಧಾನಿಕ ಹಕ್ಕುಗಳಿಂದ ವಂಚಿತರನ್ನಾಗಿಸುವ ಯತ್ನಗಳು ಸಾಗುತ್ತಿದ್ದು, ಈ ಕುರಿತು ಪ್ರತಿಯೊಬ್ಬ ನಾಗರಿಕನೂ ಎಚ್ಚೆತ್ತುಕೊಳ್ಳುವುದು ಇಂದಿನ ತುರ್ತು ಅಗತ್ಯವಾಗಿದೆ ಎಂದರು.

### ಪರಿಸರ ಪ್ರೇಮಿಗೆ ಸನ್ಮಾನ ಹಾಗೂ ಗಣ್ಯರ ಉಪಸ್ಥಿತಿ

ಚಾಮರಾಜನಗರದಲ್ಲಿ ಸಾಲುಮರಗಳನ್ನು ನೆಟ್ಟು ಪೋಷಿಸುತ್ತಿರುವ ಪರಿಸರ ಪ್ರೇಮಿ ಸಿ.ಎಂ. ವೆಂಕಟೇಶ್ ಅವರನ್ನು ವೇದಿಕೆಯಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆ. ವೆಂಕಟರಾಜು ವಹಿಸಿದ್ದರು. ಪ್ರಾಸ್ತಾವಿಕವಾಗಿ ಜಮಾತೆ ಇಸ್ಲಾಮಿ ಹಿಂದ್ ವಲಯ ಸಂಚಾಲಕ ಯು. ಅಬ್ದುಸ್ಸಲಾಮ್ ಮಾತನಾಡಿದರು. ಬಳಿಕ ಶಿವ ಸುಂದರ್ ಅವರ ಅಧ್ಯಕ್ಷತೆಯಲ್ಲಿ ಬಹುಭಾಷಾ ಕವಿಗೋಷ್ಠಿಯೂ ಜರುಗಿತು. ಕಾರ್ಯಕ್ರಮದಲ್ಲಿ ಮದೀನಾ ಮಸೀದಿಯ ಅಧ್ಯಕ್ಷ ನಯೀಮ್ ಉಲ್ ಹಕ್, ಕಾರ್ಯದರ್ಶಿ ವಸೀಂಪಾಶಾ, ಪರಿಸರವಾದಿ ಪುಣಜನೂರು ದೊರೆಸ್ವಾಮಿ, ವರ್ತಕರ ಸಂಘದ ಅಧ್ಯಕ್ಷ ಎನ್. ಶಂಕರ್, ಡಾ. ಪಿ. ವೀರಭದ್ರ ನಾಯಕ, ವಕೀಲ ಕೆ.ಎಂ. ಶ್ರೀನಿವಾಸಮೂರ್ತಿ, ಹಿರಿಯ ಪತ್ರಕರ್ತ ಎ. ಡಿ'ಸಿಲ್ವ, ಜಮಾತೆ ಇಸ್ಲಾಮಿ ಹಿಂದ್ ಸಂಚಾಲಕ ಝೈನುಲ್ ಅಬೀದಿನ್ ಹಾಗೂ ಮುಹಮ್ಮದ್ ಅಲಿ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

### ಸಂವಿಧಾನದ ಮೇಲೆ ಮನುವಾದದ ಹೇರಿಕೆ

ಡಾ. ಬಿ.ಆರ್. ಅಂಬೇಡ್ಕರ್ ಅವರು ನೀಡಿದ ಸಂವಿಧಾನದ ಮೇಲೆ ಸಾವರ್ಕರ್ ಅವರ ಮನುವಾದವನ್ನು ವ್ಯವಸ್ಥಿತವಾಗಿ ಹೇರಲಾಗುತ್ತಿದೆ ಎಂದು ಶಿವಸುಂದರ್ ಆರೋಪಿಸಿದರು. ಹಿಂದೂಯೇತರ ಸಮುದಾಯಗಳನ್ನು ಎರಡನೇ ದರ್ಜೆಯ ಪ್ರಜೆಗಳಂತೆ ಕಾಣಲಾಗುತ್ತಿದ್ದು, ಶ್ರೇಣೀಕೃತ ವ್ಯವಸ್ಥೆಯಲ್ಲಿ ಮಹಿಳೆಯರು ಹಾಗೂ ದಲಿತರನ್ನು ಅಡಿಯಾಳಾಗಿ ನೋಡುವ ಮನಸ್ಥಿತಿ ಇಂದಿಗೂ ಜೀವಂತವಾಗಿದೆ. ಬೌದ್ಧ ಧರ್ಮದಿಂದ ಹಿಡಿದು ಅನೇಕ ದಲಿತ ಮತ್ತು ಶೂದ್ರ ಸಮಾಜ ಸುಧಾರಕರು ಸಮಾನತೆ ಹಾಗೂ ಘನತೆಯ ಬದುಕನ್ನು ಪ್ರತಿಪಾದಿಸಿದ್ದಾರೆ. ಆದರೆ, ಮನುಷ್ಯರನ್ನು ಕೀಳಾಗಿ ಕಾಣುವ ವ್ಯವಸ್ಥೆಯನ್ನು ಧರ್ಮ ಎಂದು ಕರೆಯಲು ಸಾಧ್ಯವಿಲ್ಲ. ಸಾವರ್ಕರ್ ಸಿದ್ಧಾಂತದ ವಿರುದ್ಧ ಪ್ರಬಲವಾದ ಪ್ರತಿರೋಧ ಒಡ್ಡದಿದ್ದರೆ ದೇಶದಲ್ಲಿ ಯಾವುದೇ ಸಕಾರಾತ್ಮಕ ಬದಲಾವಣೆ ಅಸಾಧ್ಯ ಎಂದು ಅವರು ಎಚ್ಚರಿಸಿದರು.

### ಅಪಪ್ರಚಾರ ತಡೆಗೆ 'ಮಸೀದಿ ದರ್ಶನ'

ಕಾರ್ಯಕ್ರಮದಲ್ಲಿ ಮಾತನಾಡಿದ ಜಮಾತೆ ಇಸ್ಲಾಮಿ ಹಿಂದ್‌ನ ರಾಜ್ಯ ಕಾರ್ಯದರ್ಶಿ ಅಕ್ಬರ್ ಆಲಿ ಉಡುಪಿ ಅವರು, ಮುಸ್ಲಿಮರು ಹಾಗೂ ಮಸೀದಿಗಳ ಕುರಿತು ಸಮಾಜದಲ್ಲಿರುವ ತಪ್ಪು ಕಲ್ಪನೆ ಮತ್ತು ಅಪಪ್ರಚಾರಗಳನ್ನು ಹೋಗಲಾಡಿಸಲು 'ಮಸೀದಿ ದರ್ಶನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಇಸ್ಲಾಂ ಧರ್ಮ, ನಮಾಜ್ ಹಾಗೂ ಮಸೀದಿಗಳ ನೈಜ ಚಿತ್ರಣವನ್ನು ಸಮಾಜಕ್ಕೆ ಪರಿಚಯಿಸುವ ಮೂಲಕ ಸಮುದಾಯಗಳ ನಡುವಿನ ಅನುಮಾನಗಳನ್ನು ಬಗೆಹರಿಸುವ ಕೆಲಸವನ್ನು ಸಂಘಟನೆಯು ನಿರಂತರವಾಗಿ ಮಾಡುತ್ತಿದೆ ಎಂದು ವಿವರಿಸಿದರು.

# ಪರಿಸರ ಸಂರಕ್ಷಣೆ ಎಲ್ಲರ ಜವಾಬ್ದಾರಿ



ಚಾಮರಾಜನಗರ, ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದ್ದು, ಮುಂದಿನ ಪೀಳಿಗೆಗೆ ಆರೋಗ್ಯಕರ ಮತ್ತು ಸುರಕ್ಷಿತ ಪರಿಸರವನ್ನು ಉಳಿಸಿ ಬೆಳೆಸುವುದು ಪ್ರತಿಯೊಬ್ಬರ ಆದ್ಯ ಕರ್ತವ್ಯ ಎಂದು ನ್ಯಾಯಾಧೀಶೆ ಎಂ. ಕಾವ್ಯಶ್ರೀ ಹೇಳಿದರು.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶ, ಚಾಮರಾಜನಗರ, ವನ್ಯಜೀವಿ ವಲಯ ಕೊಳ್ಳೇಗಾಲ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ತಾಲೂಕು ಕಾನೂನು ಸೇವಾ ಸಮಿತಿ ಕೊಳ್ಳೇಗಾಲ ಇವರ ಸಂಯುಕ್ತ ಆಶ್ರಯದಲ್ಲಿ ಆಯೋಜಿಸಿದ್ದ ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪರಿಸರ ಮಾಲಿನ್ಯ, ವಾಯು ಮಾಲಿನ್ಯ, ಜಲಮಾಲಿನ್ಯ ಹಾಗೂ ಅರಣ್ಯ ಮತ್ತು ವನ್ಯಜೀವಿಗಳ ನಾಶವು ಮುಂದಿನ ಪೀಳಿಗೆಗೆ ಅಪಾರ ಹಾನಿಯನ್ನುಂಟು ಮಾಡಲಿದ್ದು, ಪ್ರತಿಯೊಬ್ಬರೂ ವೈಯಕ್ತಿಕ ಜವಾಬ್ದಾರಿಯೊಂದಿಗೆ ಪರಿಸರ ಸಂರಕ್ಷಣೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಶುದ್ಧ ಗಾಳಿ, ಶುದ್ಧ ಕುಡಿಯುವ ನೀರು ಹಾಗೂ ಪೌಷ್ಟಿಕ ಆಹಾರದ ಬಳಕೆಯಿಂದ ಉತ್ತಮ ಆರೋಗ್ಯವನ್ನು ಕಾಪಾಡಿಕೊಳ್ಳಬಹುದಾಗಿದೆ. ವಿದ್ಯಾರ್ಥಿಗಳು ಉತ್ತಮ ಪ್ರಜೆಗಳಾಗಿ ಬೆಳೆಯುವ ಜೊತೆಗೆ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು. ಕಾರ್ಯಕ್ರಮದ ಅಂಗವಾಗಿ ಜಕ್ಕಳ್ಳಿ ಆಟದ ಮೈದಾನ, ಮೊರಾರ್ಜಿ ದೇಸಾಯಿ ವಸತಿ ಶಾಲೆ ಹಾಗೂ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಯ ಆವರಣದಲ್ಲಿ ಒಟ್ಟು 60 ಗಿಡಗಳನ್ನು ನೆಡಲಾಯಿತು. ಈ ಸಂದರ್ಭದಲ್ಲಿ ಹಿರಿಯ ಅರಣ್ಯ ವೀಕ್ಷಕರಾದ ಮುಕುಂದ ಹಾಗೂ ಗೋವಿಂದ ಅವರನ್ನು ಸನ್ಮಾನಿಸಲಾಯಿತು. ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಟಿ.ಸಿ. ಶ್ರೀಕಾಂತ್, ಹಿರಿಯ ಸಿವಿಲ್ ನ್ಯಾಯಾಧೀಶೆ ಸುನೀತಾ, ಅಪರ ಸಿವಿಲ್ ನ್ಯಾಯಾಧೀಶ ಎಂ. ರಂಜಿತ್ ಕುಮಾರ್, ಪ್ರಾಂಶುಪಾಲ ಮಹೇಶ್ ಕೆ., ವಲಯ ಅರಣ್ಯಾಧಿಕಾರಿ ವಾಸು ಬಿ.ಎಸ್.,ಅನಂತರಾಮು ಅರಣ್ಯ ಇಲಾಖೆ ಅಧಿಕಾರಿ,ಶಿಕ್ಷಕರು, ಸಿಬ್ಬಂದಿ, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಜಿಲ್ಲಾಧಿಕಾರಿ ಆದೇಶ ಉಲ್ಲಂಘಿಸಿದ 06 ಟಿಪ್ಪರ್ ಲಾರಿಗಳು ವಶ, ಪ್ರಕರಣ ದಾಖಲು



ಗುಂಡ್ಲುಪೇಟೆ : ಪಟ್ಟಣದ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಾದ ಎನ್. ಜಯಕುಮಾರ್ ರವರು ದಿನಾಂಕ: □ 09-06-2026 ರಂದು ಬೆಳಿಗ್ಗೆ 08:10 ರಲ್ಲಿ ಗುಂಡ್ಲುಪೇಟೆ ಪಟ್ಟಣದ ಕೆ.ಎಸ್.ಆರ್.ಟಿ.ಸಿ. ನಿಲ್ದಾಣದ ಮುಖ್ಯ ರಸ್ತೆಯಲ್ಲಿ ಇರುವ ದೊಡ್ಡಹುಂಡಿ ಭೋಗಪ್ಪ, ಶ್ರೀ ಮದ್ದಾನೇಶ್ವರ ಹಾಗೂ ಪದವಿ ಶಿಕ್ಷಣ ಕಾಲೇಜುಗಳ ಮಾರ್ಗವಾಗಿ ಮೈಸೂರು ಕಡೆಗೆ ಹೋಗುತ್ತಿದ್ದ ಟಿಪ್ಪರ್ ಲಾರಿಗಳು, ಚಾಮರಾಜನಗರ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ದಂಡಾಧಿಕಾರಿಗಳು ಚಾಮರಾಜನಗರ ಜಿಲ್ಲೆರವರ ಆದೇಶ ಉಲ್ಲಂಘಿಸಿ ಸಂಚರಿಸುತ್ತಿದ್ದ 1) ಕೆಎ-09 ಎಎ-1259 2) ಕೆಎ 10 ಬಿ 0517 3) ಕೆಎ-10 ಬಿ-0902 4) ಕೆಎಲ್ -42 ಈ-5002 5) ಕೆಎ -10 ಬಿ2-16666) 6) ಕೆಎ 10 ಬಿ 0881 ನಂಬರಿನ ಟಿಪ್ಪರ್ ಲಾರಿಗಳು ಮತ್ತು ಆರೋಪಿಗಳನ್ನು ವಶಪಡಿಸಿಕೊಂಡು ಗುಂಡ್ಲುಪೇಟೆ ಠಾಣಾ ಮೊ.ಸಂ:177/2026 ರಲ್ಲಿ ಪ್ರಕರಣ ದಾಖಲು ಮಾಡಿ ಮುಂದಿನ ಕ್ರಮ ಕೈಗೊಂಡಿರುತ್ತದೆ.


ಈ ಕಾರ್ಯಕ್ಕೆ ಮಾನ್ಯ ಪೊಲೀಸ್ ಅಧೀಕ್ಷಕರಾದ ಮುತ್ತುರಾಜ್.ಎಂ, ಐಪಿಎಸ್., ರವರು ಪ್ರಶಂಸನೆ ವ್ಯಕ್ತಪಡಿಸಿ, ಮುಂದಿನ ದಿನಗಳಲ್ಲಿಯೂ ಸಹ ಇನ್ನೂ ಹೆಚ್ಚಿನ ಅಕ್ರಮಗಳನ್ನು ಪತ್ತೆ ಹಚ್ಚಿ ನಿಗ್ರಹಿಸುವಂತೆ ಸೂಚನೆಗಳನ್ನು ನೀಡಿರುತ್ತಾರೆ.

# ದೈಹಿಕ ಶಿಕ್ಷಕ ಸಿದ್ದಶೆಟ್ಟಿಗೆ ಸನ್ಮಾನ

ಗುಂಡ್ಲುಪೇಟೆ : ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಕ್ರೀಡಾ ಕೂಟದ ವತಿಯಿಂದ ಏರ್ಪಡಿಸಿದ್ದ ಕುಸ್ತಿ ಪಂದ್ಯಾವಳಿಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನ ಗಳಿಸಿದ್ದ ಗುಂಡ್ಲುಪೇಟೆ ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಶಾಲೆ ಯ ದೈಹಿಕ ಶಿಕ್ಷಕ ಸಿದ್ದಶೆಟ್ಟಿ ಅವರನ್ನು ಗಡಿನಾಡು ರಕ್ಷಣಾ ಸೇನೆ ವತಿಯಿಂದ ಶಾಲು ಹಾರ ಹಾಕಿ ಫಲಕ ನೀಡಿ ಅಭಿನಂದಿಸಲಾಯಿತು.

ಈ ಸರಳ ಕಾರ್ಯದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಟಿ ಸ್ವಾಮಿ ಅವರು ಮಾತನಾಡಿ ವಿಜೇತ ಸಿದ್ದಶೆಟ್ಟಿ ಅವರನ್ನು ಅಭಿನಂದಿಸಿ ನಮ್ಮ ತಾಲ್ಲೂಕಿಗೆ ಕೀರ್ತಿ ತಂದಿದ್ದಾರೆ. ಇವರ ಕ್ರೀಡಾಸಕ್ತಿಯನ್ನ ಮೆಚ್ಚುವಂತಹ ಕಾರ್ಯ ಆಗಿದೆ. ಗಡಿನಾಡು ರಕ್ಷಣಾ ಸೇನೆಯ ಇಂತಹ ಕಾರ್ಯವನ್ನು ಶ್ಲಾಘಿಸಿದರು. ಈ ಸಂಧರ್ಭದಲ್ಲಿ ಕ್ಷೇತ್ರ ಸಮನ್ವಯ ಅಧಿಕಾರಿಗಳಾದ ಡಾ ಸರೋಜಮ್ಮ , ಮುಖ್ಯ ಶಿಕ್ಷಕರಾದ ದೊಡ್ಡಬಸವಯ್ಯ , ಎಸ್ ಡಿ ಎಂ ಸಿ ಅಧ್ಯಕ್ಷರಾದ ಮೋಹನ್ ಕುಮಾರ್ , ಗಡಿನಾಡು ರಕ್ಷಣಾ ಸೇನೆಯ ರಾಜ್ಯ ಅಧ್ಯಕ್ಷರಾದ ಮುನೀರ್ , ಗೌರವ ಅಧ್ಯಕ್ಷರಾದ ಆರ್ ಡಿ ಉಲ್ಲಾಸ್ , ರಾಜ್ಯ ಯುವ ಘಟಕದ ಅಧ್ಯಕ್ಷರಾದ ಇಲಿಯಾಜ್ , ತಾಲ್ಲೂಕು ಅಧ್ಯಕ್ಷರಾದ ಅಬ್ದುಲ್ ರಶೀದ್ , ತಾಲ್ಲೂಕು ಉಪಾಧ್ಯಕ್ಷ ಮಂಜುನಾಥ್ , ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕರು ಸುಭಾಷ್ ಮಾಡ್ರಹಳ್ಳಿ , ರಾಜು ಹೊನ್ನಶೆಟ್ಟರಹುಂಡಿ , ಕಾಳಿಂಗಸ್ವಾಮಿ ಸಿದ್ದಾರ್ಥ ನಿರೂಪಣೆ ಮಾಡಿದರು. ಶಿಕ್ಷಕ ವರ್ಗದವರು ಹಾಗೂ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ಕ್ರೀಡಾಂಗಣದಲ್ಲಿ ಯೋಗಭ್ಯಾಸಕ್ಕೆ ಆಗ್ರಹ



ಮೈಸೂರು: ಯೋಗಕ್ಕೆ ಅಂತಾರಾಷ್ಟ್ರೀಯ ಮನ್ನಣೆ ದೊರೆಯುತ್ತಿರುವ ಈ ದಿನಗಳಲ್ಲಿ ನಗರದ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿರುವ ವಸತಿ ನಿಲಯದಲ್ಲಿ ಯೋಗಾಭ್ಯಾಸ ಆರಂಭಿಸಬೇಕು ಎಂದು ಅಂತಾರಾಷ್ಟ್ರೀಯ ಯೋಗ ತರಬೇತುದಾರ ಎಂ.ಆರ್. ಕಿಶೋರ್ ಆಗ್ರಹಿಸಿದರು.

ನಗರದಲ್ಲಿ ಸುವರ್ಣ ಬೆಳಕು ಫೌಂಡೇಷನ್ ವತಿಯಿಂದ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಇಲ್ಲಿ ವಿಶೇಷ ತರಬೇತಿ ಪಡೆದ ಯೋಗ ಶಿಕ್ಷಕರನ್ನು ನೇಮಕ ಮಾಡಿದಲ್ಲಿ ವಿದ್ಯಾರ್ಥಿಗಳಿಗೆ ತಾಂತ್ರಿಕ ಹಾಗೂ ಸ್ಪರ್ಧಾತ್ಮಕ ತರಬೇತಿ ದೊರೆಯಲಿದೆ. ಇದರಿಂದಾಗಿ ಗ್ರಾಮೀಣ ವಿದ್ಯಾರ್ಥಿಗಳು ಸಹಾ ಯೋಗಾಭ್ಯಾಸ ಕ್ಷೇತ್ರದಲ್ಲಿ ಹೆಸರು ಮಾಡಲು ಸಾಧ್ಯವಾಗುತ್ತದೆ. ಇದರೊಡನೆ ವಿಶ್ವಮಟ್ಟದಲ್ಲಿ ಯೋಗಾಸನ ಸ್ಪರ್ಧೆಗಳಲ್ಲಿ ದೇಶಕ್ಕೆ ಹೆಚ್ಚು ಪದಕ ತರುವಂತಾಗುತ್ತದೆ ಎಂದರು. ಇದೇ ವೇಳೆ ಕ್ರೀಡೆಯಲ್ಲಿ ಕೇವಲ ದೈಹಿಕ ದಂಡನೆ ಮಾಡುತ್ತಿದ್ದು, ಮಾನಸಿಕ ಸಾಮರ್ಥ್ಯ ಹೆಚ್ಚಲು ಯೋಗಾಸನ ನೆರವಾಗುತ್ತದೆ. ಇದರಿಂದಾಗಿ ಕ್ರೀಡಾ ಕ್ಷೇತ್ರಗಳಲ್ಲಿಯೂ ಉತ್ತಮ ಸಾಧನೆ ಸಾಧ್ಯವಾಗುತ್ತದೆ ಎಂದರು. ಹುಚ್ಚೆಗೌಡ, ಅನಂತು ಇದ್ದರು.

# ಸುಳ್ಳು ಸುದ್ದಿ ವಿರುದ್ಧ ಕ್ರಮಕ್ಕೆ ಆಗ್ರಹ



ಮೈಸೂರು: ಸಚಿವ ಸತೀಶ್ ಜಾರಕಿಹೊಳಿ ಮಾಜಿ ಸಿಎಂ ಸಿದ್ದರಾಮಯ್ಯ ವಿರುದ್ಧ ಸಹಿ ಸಂಗ್ರಹಿಸುತ್ತಿದ್ದಾರೆ ಎಂಬ ಸುಳ್ಳು ಸುದ್ದಿ ಹರಡಿರುವವರ ವಿರುದ್ಧ ಪೊಲೀಸರು ಕೂಡಲೇ ಕಠಿಣ ಕ್ರಮ ಕೈಗೊಳ್ಳಬೇಕೆಂದು ಕರ್ನಾಟಕ ರಾಜ್ಯ ನಾಯಕರ ಯುವ ಸೇನೆ ರಾಜ್ಯಾಧ್ಯಕ್ಷ ದೇವರಾಜ್ ಟಿ. ಕಾಟೂರು ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸತೀಶ್ ಜಾರಕಿಹೊಳಿ ಅವರು ಸಿದ್ದರಾಮಯ್ಯ ಅವರ ಬೆಂಬಲಕ್ಕೆ ಸದಾ ನಿಂತಿದ್ದಾರೆ. ಆದರೆ ಇದನ್ನು ಸಹಿಸದವರು ಈ ರೀತಿ ಅಸೂಯೆಯಿಂದ ಗೊಂದಲ ಸೃಷ್ಟಿಸಿ, ಇವರಿಬ್ಬರ ನಡುವೆ ಒಡಕುಂಟು ಮಾಡಲು ಹಾಗೂ ಸಮಾಜಕ್ಕೆ ತಪ್ಪು ಸಂದೇಶ ಕಳುಹಿಸಲು ಯತ್ನಿಸುತ್ತಿದ್ದಾರೆಂದು ದೂರಿದರು.

ಈ ಹಿಂದೆ ಸಿದ್ದರಾಮಯ್ಯ ಅವರನ್ನು ಜೆಡಿಎಸ್ ಪಕ್ಷದಿಂದ ಉಚ್ಚಾಟನೆ ಮಾಡಿ, ಉಪ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದಾಗ ಅವರ ಬೆನ್ನಿಗೆ ನಿಂತವರು ಸಿದ್ದರಾಮಯ್ಯ ಅವರು. ಇವರಿಗಾಗಿ ಸತೀಶ್ ಜಾರಕಿಹೊಳಿ ಎಲ್ಲ ತ್ಯಾಗ ಮಾಡಿದ್ದಾರೆ. ಇದಲ್ಲದೆ, ಈ ಹಿಂದೆ ಡಾ.ಜಿ. ಪರಮೇಶ್ವರ್ ಅವರು ಸೋಲಲು ಸಿದ್ದರಾಮಯ್ಯ ಅವರೇ ಕಾರಣ ಎಂದು ಸಹಾ ಅಪಪ್ರಚಾರ ಮಾಡಿದ್ದರು. ಈಗ ಜಾರಕಿಹೊಳಿ ಅಹಿಂದ ಚಳವಳಿಯ ಉತ್ತರಾಧಿಕಾರಿ ಆಗಲಿದ್ದಾರೆ ಎಂಬ ಕಾರಣದಿಂದಾಗಿ ಅವರನ್ನು ತುಳಿಯಲು ಹಾಗೂ ನಾಯಕ ಸಮುದಾಯವನ್ನು ದಮನ ಮಾಡಲು ಈಗ ಹುನ್ನಾರ ನಡೆದಿದೆ. ಹೀಗಾಗಿ ಪೊಲೀಸರು ಕಿಡಿಗೇಡಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು. ಈ ನಿಟ್ಟಿನಲ್ಲಿ ಜೂ. 13 ರಂದು ಬೆಳಗ್ಗೆ 11ಕ್ಕೆ ನಗರದ ಪುರಭವನ ಬಳಿಯ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆ ಬಳಿ ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

ಮುಖಂಡರಾದ ಎಸ್.ಆರ್. ರವಿಕುಮಾರ್, ಶಿವಕುಮಾರಸ್ವಾಮಿ, ಎಂ. ಸೋಮಣ್ಣ, ಪರಶಿವಮೂರ್ತಿ, ಪಿ. ಸಿದ್ದರಾಜು, ಜೋಗಯ್ಯ ಇದ್ದರು.

## ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಸಂಸ್ಕೃತಿ ಚಿಂತಕರಾದ ಸುರೇಶ್ ಎನ್. ಋಗ್ವೇದಿ ಬಣ್ಣನೆ

# ಮಾಸ್ತಿ ಎಂದರೆ ಕನ್ನಡದ ಆಸ್ತಿ: ಪತ್ರಿಕೋದ್ಯಮಕ್ಕೆ ಖಾದ್ರಿ ಶಾಮಣ್ಣ ಕೊಡುಗೆ ಅಪಾರ



ಚಾಮರಾಜನಗರ: "ಕನ್ನಡ ಸಾಹಿತ್ಯ ಪರಂಪರೆಗೆ ಬಹು ದೊಡ್ಡ ಶಕ್ತಿ ನೀಡಿದವರು ಮಾಸ್ತಿ ವೆಂಕಟೇಶ ಅಯ್ಯಂಗಾರ್. ಮಾಸ್ತಿ ಎಂದರೆ ಕನ್ನಡದ ಆಸ್ತಿ, ಮಾಸ್ತಿ ಎಂದರೆ ಕನ್ನಡದ ಸಂಪತ್ತು ಹಾಗೂ ಸಾಹಿತ್ಯ," ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹಾಗೂ ಸಂಸ್ಕೃತಿ ಚಿಂತಕರಾದ ಸುರೇಶ್ ಎನ್. ಋಗ್ವೇದಿ ಅವರು ಬಣ್ಣಿಸಿದರು.

ನಗರದ ಆದಿಶಕ್ತಿ ದೇವಸ್ಥಾನದ ಬಳಿ ಇರುವ ಪುರಾತನ ಪುಟ್ಟಮ್ಮಣ್ಣಿ ಉದ್ಯಾನವನದ ಮಂಟಪದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಮತ್ತು ಖಾದ್ರಿ ಶಾಮಣ್ಣ ಅವರ ಕೊಡುಗೆಗಳ ಕುರಿತ ಉಪನ್ಯಾಸ ಹಾಗೂ ಗಾಯನ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

### ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಅನನ್ಯ ಸಾಹಿತ್ಯ ಸೇವೆ

ಮಾಸ್ತಿ ಅವರು 123ಕ್ಕೂ ಹೆಚ್ಚು ಕೃತಿಗಳನ್ನು ರಚಿಸುವ ಮೂಲಕ ನಾಡಿನ ಪ್ರಸಿದ್ಧ ಸಾಹಿತಿಗಳಿಗೆ ಮತ್ತು ಕವಿಗಳಿಗೆ ಆದರ್ಶಪ್ರಾಯರಾಗಿದ್ದಾರೆ. ಜಿಲ್ಲಾಧಿಕಾರಿಯಾಗಿ ಸೇವೆ ಸಲ್ಲಿಸಿ, ಆಡಳಿತದಲ್ಲಿನ ಬಿಡುವಿನ ನಡುವೆಯೂ ಸಾಹಿತ್ಯವನ್ನು ಅಪ್ಪಿಕೊಂಡ ಅವರ ಸರಳ ವ್ಯಕ್ತಿತ್ವ ಅನನ್ಯವಾದದ್ದು. ಆಡಳಿತದಲ್ಲಿ ಅತ್ಯಂತ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿದ ಮಾಸ್ತಿಯವರ ನಿಷ್ಠೆಯನ್ನು ಗುರುತಿಸಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು 'ರಾಜ ಸೇವಾಸಕ್ತ' ಎಂಬ ಬಿರುದು ನೀಡಿ ಗೌರವಿಸಿದ್ದರು. 'ಸಣ್ಣ ಕಥೆಗಳ ಜನಕ' ಎಂದೇ ಖ್ಯಾತರಾಗಿದ್ದ ಮಾಸ್ತಿಯವರ ಕಥೆ ಹೇಳುವ ಶೈಲಿ ಅತ್ಯದ್ಭುತವಾಗಿತ್ತು. ಕಾದಂಬರಿ, ನಾಟಕ, ವಿಮರ್ಶೆ, ಪ್ರಬಂಧ, ಧಾರ್ಮಿಕ ಕೃತಿಗಳು, ಅನುವಾದ, ಸಂಪಾದಕೀಯ ಲೇಖನಗಳು ಹಾಗೂ ಕವಿತೆಗಳ ಮೂಲಕ ಕನ್ನಡವನ್ನು ಶ್ರೀಮಂತಗೊಳಿಸಿದ ಅವರು, 1929ರಲ್ಲಿ ಬೆಳಗಾವಿಯಲ್ಲಿ ನಡೆದ 15ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು ಎಂದು ಸುರೇಶ್ ಋಗ್ವೇದಿ ಸ್ಮರಿಸಿದರು.

### ಜ್ಞಾನಪೀಠ ಪುರಸ್ಕೃತರ ಸ್ಮರಣೆ ಹಾಗೂ ಉದ್ಘಾಟನೆ

ಕಾರ್ಯಕ್ರಮವನ್ನು ಉದ್ಘಾಟಿಸಿದ ತಮಿಳು ಸಂಘದ ಅಧ್ಯಕ್ಷ ಜಗದೀಶನ್ ಅವರು ನಾಡದೇವತೆ ತಾಯಿ ಭುವನೇಶ್ವರಿಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ಕಥೆ, ಕವನ ಹಾಗೂ ಕಾದಂಬರಿಗಳನ್ನು ಅದ್ಭುತವಾಗಿ ರಚಿಸುತ್ತಿದ್ದ ಬಹುಮುಖ ಸಾಹಿತಿ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ 'ಚಿಕವೀರ ರಾಜೇಂದ್ರ' ಕೃತಿಗೆ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಲಭಿಸಿರುವುದು ಕನ್ನಡ ಸಾಹಿತ್ಯ ಲೋಕಕ್ಕೆ ಹೆಮ್ಮೆಯ ವಿಚಾರ ಎಂದು ಕೊಂಡಾಡಿದರು.

### ನಗರದಾದ್ಯಂತ ವಾರ್ಡ್‌ವಾರು 'ಸಾಹಿತ್ಯ ಸಂಭ್ರಮ'

ಇದೇ ವೇಳೆ ಮುಂದಿನ ಯೋಜನೆಗಳ ಕುರಿತು ಮಾಹಿತಿ ನೀಡಿದ ರಾಷ್ಟ್ರ ಯುವ ಪ್ರಶಸ್ತಿ ಪುರಸ್ಕೃತರೂ ಆಗಿರುವ ಸುರೇಶ್ ಋಗ್ವೇದಿ ಅವರು, ಕನ್ನಡ ಸಾಹಿತ್ಯ ಪರಿಷತ್ತು ನಗರದ ಎಲ್ಲ 31 ವಾರ್ಡ್‌ಗಳಲ್ಲೂ ವಿಶೇಷ ಸಾಹಿತ್ಯಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ ಎಂದು ತಿಳಿಸಿದರು. ಅಲ್ಲದೆ, ಪ್ರತಿ ತಿಂಗಳು ಇತಿಹಾಸ ಪ್ರಸಿದ್ಧ ಪುಟ್ಟಮ್ಮಣ್ಣಿ ಉದ್ಯಾನವನದ ಮಂಟಪದಲ್ಲಿ ವಿವಿಧ ಸಂಘಟನೆಗಳ ಸಹಕಾರದೊಂದಿಗೆ 'ಸಾಹಿತ್ಯ ಸಂಭ್ರಮ' ಕಾರ್ಯಕ್ರಮವನ್ನು ನಿರಂತರವಾಗಿ ನಡೆಸಲು ಯೋಜನೆ ರೂಪಿಸಲಾಗಿದೆ ಎಂದರು.

### ಗಾಯನ ಹಾಗೂ ಗಣ್ಯರ ಉಪಸ್ಥಿತಿ

ಕಾರ್ಯಕ್ರಮದಲ್ಲಿ ಜನಪದ ಗಾಯಕರಾದ ರವಿಚಂದ್ರಪ್ರಸಾದ್ ಕಹಳೆ ಹಾಗೂ ಶಿವಲಿಂಗಮೂರ್ತಿ ಅವರು ಇಂಪಾದ ಕನ್ನಡ ಗೀತೆಗಳ ಗಾಯನವನ್ನು ಪ್ರಸ್ತುತಪಡಿಸಿ ಸಭಿಕರ ಗಮನ ಸೆಳೆದರು. ಈ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಪ್ರಮುಖರಾದ ಪದ್ಮ ಪುರುಷೋತ್ತಮ್, ಬಿ.ಕೆ. ಆರಾಧ್ಯ, ಮಂಜುಳಾ, ನಾಗವೇಣಿ, ಪುಷ್ಪಲತಾ, ರಾಜೇಶ್, ಮಹೇಶ್ ಹಾಗೂ ಪ್ರಸಾದ್ ಸೇರಿದಂತೆ ಹಲವು ಸಾಹಿತ್ಯಾಸಕ್ತರು ಉಪಸ್ಥಿತರಿದ್ದರು.

# ಹೈನುಗಾರಿಕೆಯಿಂದ ಗ್ರಾಮೀಣ ರೈತರ ಬದುಕು ವೃದ್ಧಿ



ಚಾಮರಾಜನಗರ ಜಿಲ್ಲೆಯಲ್ಲಿ ಹೈನುಗಾರಿಕೆಯನ್ನು ನೆಚ್ಚಿಕೊಂಡ ಗ್ರಾಮಾಂತರ ಪ್ರದೇಶದ ರೈತರು ಉತ್ತಮ ಅಭಿವೃದ್ಧಿ ಹೊಂದುತ್ತಿದ್ದು, ಈ ನಿಟ್ಟಿನಲ್ಲಿ 'ಚಾಮುಲ್' ದೊಡ್ಡ ಕ್ರಾಂತಿಯನ್ನೇ ಮಾಡುತ್ತಿದೆ. ಪ್ರತಿದಿನ ಜಿಲ್ಲೆಯಲ್ಲಿ ಮೂರು ಲಕ್ಷ ಲೀಟರ್‌ಗೂ ಹೆಚ್ಚು ಹಾಲು ಸಂಗ್ರಹಣೆಯಾಗುತ್ತಿದೆ ಎಂದು ಚಾಮುಲ್ ನಿರ್ದೇಶಕರು ಹಾಗೂ ವೆಂಕಟಯ್ಯನಛತ್ರ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾದ ಎಚ್.ಎಸ್. ಬಸವರಾಜು ತಿಳಿಸಿದರು. ಗ್ರಾಮದ ಡೇರಿ ಸಭಾಂಗಣದಲ್ಲಿ ನಡೆದ ವೆಂಕಟಯ್ಯನಛತ್ರ ಹಾಲು ಉತ್ಪಾದಕರ ಸಹಕಾರ ಸಂಘದ 2025-26ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. 1978ರಲ್ಲಿ ಸ್ಥಾಪನೆಗೊಂಡ ಈ ಸಂಘವು ಕಳೆದ 48 ವರ್ಷಗಳಿಂದ ರೈತರ ಶ್ರೇಯೋಭಿವೃದ್ಧಿಗಾಗಿ ನಿರಂತರವಾಗಿ ದುಡಿಯುತ್ತಿದೆ. ಈ ವರ್ಷ ಬರೋಬ್ಬರಿ 3.28 ಕೋಟಿ ರೂಪಾಯಿ ಮೌಲ್ಯದ ಹಾಲು ಮಾರಾಟ ಮಾಡಿ ಉತ್ತಮ ವಹಿವಾಟು ನಡೆಸಿದ್ದು, 9,94,782 ರೂಪಾಯಿಗಳ ನಿವ್ವಳ ಲಾಭ ಗಳಿಸಿದೆ. ಇದರಲ್ಲಿ 4,50,849 ರೂಪಾಯಿಗಳನ್ನು ಹಾಲು ಉತ್ಪಾದಕ ರೈತರಿಗೆ ಬೋನಸ್ ರೂಪದಲ್ಲಿ ವಿತರಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದರು.

**ಸಂಘದ ವಿನೂತನ ಉಪಕ್ರಮಗಳು, ಪಾರದರ್ಶಕತೆ**

ಸಂಘದ ಆಡಳಿತ ಮಂಡಳಿಯ ಅತ್ಯುತ್ತಮ ನಿರ್ವಹಣೆ, ನೌಕರರ ಶ್ರಮ ಹಾಗೂ ಸದಸ್ಯರು ಸರಬರಾಜು ಮಾಡುತ್ತಿರುವ ಗುಣಮಟ್ಟದ ಹಾಲಿನಿಂದಾಗಿ ಡೇರಿ ನಿರಂತರ ಲಾಭದತ್ತ ಸಾಗಲು ಸಾಧ್ಯವಾಗಿದೆ. ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಉಚಿತವಾಗಿ ಕ್ಯಾಲೆಂಡರ್ ವಿತರಿಸಲಾಗುತ್ತಿದೆ. ಅಲ್ಲದೆ, ಜಾನುವಾರುಗಳು ನಿತ್ರಾಣಗೊಂಡಾಗ ರೈತರಿಗೆ ಎದುರಾಗುತ್ತಿದ್ದ ಸಂಕಷ್ಟವನ್ನು ಅರಿತು ಡೇರಿಯ ವತಿಯಿಂದಲೇ 'ಹಸು ಎತ್ತುವ ಯಂತ್ರ'ವನ್ನು ಖರೀದಿಸಲಾಗಿದೆ. ಇದನ್ನು ಸಂಘದ ಸದಸ್ಯರಿಗೆ ದಿನಕ್ಕೆ ಕೇವಲ 50 ರೂಪಾಯಿ ಹಾಗೂ ಇತರರಿಗೆ 100 ರೂಪಾಯಿಗಳ ರಿಯಾಯಿತಿ ಬಾಡಿಗೆ ದರದಲ್ಲಿ ಒದಗಿಸಲಾಗುತ್ತಿದೆ ಎಂದು ಬಸವರಾಜು ವಿವರಿಸಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಚಾಮುಲ್ ನಿರ್ದೇಶಕ ಸದಾಶಿವಮೂರ್ತಿ ಅವರು, ಜಿಲ್ಲೆಯಲ್ಲಿಯೇ ಆರ್ಥಿಕ ವರ್ಷದ ಪ್ರಥಮ ವಾರ್ಷಿಕ ಮಹಾಸಭೆಯನ್ನು ಸೆಪ್ಟೆಂಬರ್‌ವರೆಗೆ ಕಾಯದೆ ಜೂನ್ ತಿಂಗಳಲ್ಲೇ ಆಯೋಜಿಸುವ ಮೂಲಕ ವೆಂಕಟಯ್ಯನಛತ್ರ ಡೇರಿಯು ಆಡಳಿತದಲ್ಲಿ ಪಾರದರ್ಶಕತೆ ಮೆರೆದು ಇತರ ಸಂಘಗಳಿಗೆ ಮಾದರಿಯಾಗಿದೆ ಎಂದು ಪ್ರಶಂಸಿಸಿದರು.

**ಜಾನುವಾರುಗಳ ವಿಮೆ, ಪೋಷಣೆ ಬಗ್ಗೆ ಕಿವಿಮಾತು**

ರೈತರು ತಮ್ಮ ರಾಸುಗಳನ್ನು ಮಕ್ಕಳಂತೆ ಜೋಪಾನ ಮಾಡಬೇಕು ಎಂದು ಸಲಹೆ ನೀಡಿದ ಸದಾಶಿವಮೂರ್ತಿ ಅವರು, ಜಾನುವಾರುಗಳಿಗೆ ವಿಮೆ ಮಾಡಿಸುವುದು ಹಾಗೂ ಅದರ ನಂತರದ ಆರೈಕೆ ಅತ್ಯಂತ ಮಹತ್ವದ್ದಾಗಿದೆ ಎಂದರು. ವಿಮೆಯ ಗುರುತಿಗಾಗಿ ರಾಸುಗಳ ಕಿವಿಗೆ ಹಾಕಿರುವ ಓಲೆಯನ್ನು ಕಳೆದುಕೊಳ್ಳದಂತೆ ಎಚ್ಚರವಹಿಸಬೇಕು. ಒಂದು ವೇಳೆ ಓಲೆ ಬಿದ್ದು ಹೋದರೆ ತಕ್ಷಣವೇ ಡೇರಿಯ ಅಧಿಕಾರಿಗಳಿಗೆ ಮಾಹಿತಿ ನೀಡಿ ಹೊಸದನ್ನು ಹಾಕಿಸಿಕೊಳ್ಳಬೇಕು. ಇದರಿಂದ ಜಾನುವಾರುಗಳು ಆಕಸ್ಮಿಕವಾಗಿ ಮರಣ ಹೊಂದಿದಾಗ ಯಾವುದೇ ಅಡೆತಡೆಯಿಲ್ಲದೆ ವಿಮೆ ಮೊತ್ತವನ್ನು ಪಡೆದುಕೊಳ್ಳಲು ರೈತರಿಗೆ ಅನುಕೂಲವಾಗುತ್ತದೆ ಎಂದು ಅವರು ಮಾರ್ಗದರ್ಶನ ನೀಡಿದರು. ಮಹಾಸಭೆಯಲ್ಲಿ ಸಂಘಕ್ಕೆ ಅತಿ ಹೆಚ್ಚು ಹಾಲು ಪೂರೈಸಿದ ರೈತರಾದ ಎಚ್.ಎಸ್. ಮಲ್ಲು, ಎ.ಎನ್. ಮಹೇಶ್ ಮತ್ತು ಶಿವರಾಜು ಅವರನ್ನು ವಿಶೇಷ ಬಹುಮಾನ ನೀಡಿ ಗೌರವಿಸಲಾಯಿತು. ಸಂಘದ ಮುಖ್ಯ ಕಾರ್ಯನಿರ್ವಾಹಕ ಪಿ. ಪುನೀತ್ ಕುಮಾರ್ ಅವರು ವಾರ್ಷಿಕ ವರದಿಯನ್ನು ಮಂಡಿಸಿ ಸಭೆಯ ಅನುಮೋದನೆ ಪಡೆದುಕೊಂಡರು. ಈ ಸಂದರ್ಭದಲ್ಲಿ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಎಚ್.ಎಂ. ಬಸವಣ್ಣ, ಚಾಮುಲ್ ಸಹಾಯಕ ವಿಸ್ತರಣಾಧಿಕಾರಿ ಭಾಗ್ಯರಾಜ್, ಸಂಘದ ನಿರ್ದೇಶಕರಾದ ಶಿವರಾಜು, ಕೃಷ್ಣಗೌಡ, ಎಸ್.ಮಹದೇವಸ್ವಾಮಿ, ಬಿ.ಎನ್.ನಾಗರಾಜು, ಸಿ. ಸಂಪತ್ ಕುಮಾರ್, ಬಂಗಾರು, ಮಹದೇವಸ್ವಾಮಿ, ಮಹದೇವಯ್ಯ, ಎ.ಬಿ. ರೇಣುಕಾ, ಭಾಗ್ಯಮ್ಮ, ಸಿಬ್ಬಂದಿಗಳಾದ ಮನೋಹರ, ಮನು, ಸುನಂದ ಹಾಗೂ ಅಪಾರ ಸಂಖ್ಯೆಯಲ್ಲಿ ಹಾಲು ಉತ್ಪಾದಕ ರೈತ ಸದಸ್ಯರು ಉಪಸ್ಥಿತರಿದ್ದರು.

# ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಯಶಸ್ಸಿಗೆ ಸಹಕರಿಸಿ



ಚಾಮರಾಜನಗರ: ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯ ಯಶಸ್ಸಿಗೆ ಮತದಾರರು ಸಹರಿಸುವಂತೆ ಮತದಾರರ ನೊಂದಣಾಧಿಕಾರಿ ಹಾಗೂ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕ ರಾದ ಡಾ. ವಸುಂಧರ ಹೆಗ್ಡೆ ಅವರು ತಿಳಿಸಿದರು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಆಹಾರ ಇಲಾಖೆ ಉಪನಿರ್ದೇಶಕರ ಕಚೇರಿ ಕೊಠಡಿಯಲ್ಲಿಂದು ನಡೆದ ಪತ್ರಿಕಾ ಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಅವರು ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್.ಐ.ಆರ್) ಚಾಮರಾಜನಗರ ತಾಲೂಕಿನಲ್ಲಿಯೂ ಕೈಗೊಳ್ಳಲಾಗುತ್ತಿದೆ ಎಂದರು. ಮತದಾರರ ಪಟ್ಟಿ ಸಿದ್ದಪಡಿಸುವಿಕೆಯಲ್ಲಿ ಮತದಾರರ ಪಟ್ಟಿಯಲ್ಲಿ ಎಲ್ಲ ಅರ್ಹ ನಾಗರಿಕರು ಸೇರ್ಪಡೆಗೊಂಡಿರುವುದನ್ನು ಹಾಗೂ ಅರ್ಹರು ಮತದಾರರ ಪಟ್ಟಿಯಿಂದ ಕೈಬಿಡದಿರುವುದನ್ನು ಖಚಿತಪಡಿಸಿಕೊಳ್ಳಲು, ಮುಕ್ತ, ನಿಷ್ಪಕ್ಷಪಾತ ಚುನಾವಣೆ ನಡೆಸಲು ಮತದಾರರ ಪಟ್ಟಿಯ ವಿಶ್ವಾರ್ಹತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಅಗತ್ಯವಾಗಿರುವ ಹಿನ್ನೆಲೆಯಲ್ಲಿ ಚುನಾವಣಾ ಆಯೋಗವು ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ನಡೆಸುತ್ತಿದೆ ಎಂದು ಹೇಳಿದರು.

ದಿನಾಂಕ 01-10-2026 ಅನ್ನು ಅರ್ಹತಾ ದಿನಾಂಕ ಎಂದು ಪರಿಗಣ ಸಿ ವಿಶೇಷ ಸಮಗ್ರ ಪರಿಷ್ಕರಣೆ ಕಾರ್ಯವನ್ನು ಕೈಗೊಳ್ಳಲಾಗುತ್ತದೆ. ಜೂನ್ 30 ರಿಂದ ಜುಲೈ 29ರವರೆಗೆ ಬೂತ್ ಮಟ್ಟದ ಅಧಿಕಾರಿಗಳು (ಬಿ.ಎಲ್.ಒ) ಮನೆ ಮನೆಗೆ ಭೇಟಿ ನೀಡಲಿದ್ದಾರೆ. ಮತಗಟ್ಟೆಗಳ ಪುನರ್ ವಿಂಗಡಣೆ ಜುಲೈ 29ರೊಳಗೆ ನಡೆಯಲಿದೆ. ಕರಡು ಮತದಾರರ ಪಟ್ಟಿಯನ್ನು ಆಗಸ್ಟ್ 5ರಂದು ಪ್ರಕಟಿಸಲಾಗುತ್ತದೆ. ಆಗಸ್ಟ್ 5 ರಿಂದ ಸೆಪ್ಟೆಂಬರ್ 4ರವರೆಗೆ ಹಕ್ಕು ಆಕ್ಷೇಪಣೆಗಳ ಸಲ್ಲಿಕೆಗೆ ಅವಕಾಶವಿದೆ. ಆಗಸ್ಟ್ 5 ರಿಂದ ಅಕ್ಟೋಬರ್ 3ರವರೆಗೆ ಹಕ್ಕು ಆಕ್ಷೇಪಣೆಗಳನ್ನು ವಿಲೇವಾರಿ ಮಾಡಲಾಗುತ್ತದೆ. ಅಕ್ಟೋಬರ್ 7ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಿಸಲಾಗುತ್ತದೆ ಎಂದು ವಿವರಿಸಿದರು.

ಚಾಮರಾಜನಗರ ತಾಲೂಕು ತಹಶೀಲ್ದಾರ್ ಬಿ. ಗಿರಿಜಾ ಅವರು ಪತ್ರಿಕಾ ಗೋಷ್ಠಿಯಲ್ಲಿ ಇದ್ದರು.

# ಚಿತ್ರ ಬ್ರಹ್ಮ ಪುಟ್ಟಣ್ಣ ಕಣಗಾಲ್ ಕೊಡುಗೆ ಅಪಾರ



ಚಾಮರಾಜನಗರ: ಕನ್ನಡ ಚಿತ್ರರಂಗದ ನಿರ್ದೇಶಕ ಸ್ಥಾನಕ್ಕೆ ವಿಶ್ವಖ್ಯಾತಿ ತಂದು ಕೊಟ್ಟವರು ಪುಟ್ಟಣ್ಣ ಕಣಗಾಲ್.ಇವರ ಚಿಂತನೆ, ದೂರದೃಷ್ಟಿ, ಸೃಜನಶೀಲತೆ,ಹೊಸ ರೂಪದ ಯೋಚನೆ, ವಿಶ್ವ ಶ್ರೇಷ್ಠ ನಿರ್ದೇಶಕರನ್ನಾಗಿ ಮಾಡಿ ಕನ್ನಡಿಗರು ಹೆಮ್ಮೆಪಡುವಂತೆ ಮಾಡಿದವರು ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ಸಂಸ್ಕೃತಿ ಚಿಂತಕರಾದ ಸುರೇಶ್ ಎನ್ ಋಗ್ವೇದಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಸಂಸ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ಚಿತ್ರ ಬ್ರಹ್ಮ ಪುಟ್ಟಣ್ಣ ಕಣಗಾಲ್ ರವರ ಕೊಡುಗೆಗಳು ಕುರಿತು ಮಾತನಾಡುತ್ತಾ ಪುಟ್ಟಣ್ಣ ಕಣಗಾಲ್ ಕಾದಂಬರಿ ಆಧಾರಿತ ಚಿತ್ರಗಳನ್ನು ನಿರ್ಮಿಸಿ ವಿಶೇಷ ಶೈಲಿಯ ಮೂಲಕ ನಿರ್ದೇಶನ ನೀಡಿದವರು. ಇವರ ಚಿತ್ರಗಳಲ್ಲಿ ಕಲೆ,ಸಾಹಿತ್ಯ, ಭಾವನಾತ್ಮಕತೆ, ಮಾನವೀಯ ಸಂಬಂಧಗಳು, ಸಾಮಾಜಿಕ ಕಾಳಜಿ, ಆಳವಾದ ಮಹಿಳಾ ಪ್ರಾಧಾನ್ಯತೆ ಮುಂತಾದ ದೃಷ್ಟಿಕೋನದ ಮೂಲಕ ಕನ್ನಡ ಚಿತ್ರಗಳನ್ನು ನಿರ್ದೇಶಿಸಿ ಕನ್ನಡ ಚಿತ್ರರಂಗ ಶಾಶ್ವತವಾಗಿ ಉಳಿಯುವಂತೆ ಮಾಡಿದವರು. ಇವರ ಚಿತ್ರಗಳಾದ ಬೆಳ್ಳಿಮೋಡ, ಗೆಜ್ಜೆಪೂಜೆ, ನಾಗರಹಾವು, ಶರಪಂಜರ,ಶುಭ ಮಂಗಳ, ಸಾಕ್ಷಾತ್ಕಾರ, ಅಮೃತಘಳಿಗೆ, ಮಸಣದ ಹೂವು ಚಿತ್ರಗಳು ಕಣಗಾಲ್ ರವರನ್ನು ವಿಶ್ವಖ್ಯಾತಿ ತಂದುಕೊಟ್ಟವು. ಕನ್ನಡದಲ್ಲಿ 24 ಚಿತ್ರಗಳ ನಿರ್ದೇಶನ ಮಾಡಿ ಹಿಂದಿ ಮತ್ತು ಮಲಯಾಳಂ ಗಳಲ್ಲೂ ನಿರ್ದೇಶನ ಮಾಡಿ ಪ್ರಸಿದ್ಧರಾದವರು. ಇವರ ಪ್ರತಿ ಚಿತ್ರದಲ್ಲೂ ಮಹಿಳಾ ಪ್ರಾಧಾನ್ಯತೆಗೆ ಹೆಚ್ಚು ಒತ್ತು ನೀಡಲಾಗಿದೆ.ಕನ್ನಡ ಚಿತ್ರರಂಗಕ್ಕೆ ಅಪಾರ ನಟರನ್ನು ನೀಡಿದ ಕೀರ್ತಿ ಪುಟ್ಟಣ್ಣ ಕಣಗಾಲ್ ರವರಿಗೆ ಸಲ್ಲುತ್ತದೆ. ಕನ್ನಡ ಚಿತ್ರರಂಗದ ದಿಗ್ಗಜರಾದ ವಿಷ್ಣುವರ್ಧನ್, ಅಂಬರೀಷ್,ಶ್ರೀನಾಥ್, ರಾಮಕೃಷ್ಣ, ಶ್ರೀಧರ್, ಜೈ ಜಗದೀಶ್ ಹಾಗೂ ಕಲ್ಪನಾ,ಆರತಿ, ಪದ್ಮಾವಾಸಂತಿ, ಅಪರ್ಣ ಮುಂತಾದ ನಟರನ್ನು ಚಿತ್ರರಂಗದ ಮೂಲಕ ಕನ್ನಡ ಚಿತ್ರರಂಗಕ್ಕೆ ನೀಡಿದ ಶಿಲ್ಪಿ. ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಕಣಗಾಲ್ ಗ್ರಾಮದಲ್ಲಿ ಜನಿಸಿದ ಪುಟ್ಟಣ್ಣನವರ ಸ್ಮಾರಕವನ್ನು ನಿರ್ಮಿಸುವ ನಿರ್ಧಾರ ಕೈಗೊಂಡಿರುವ ಸರ್ಕಾರಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾದ ಎಲ್ ಸುರೇಶ್ ಮಾತನಾಡಿ ಪುಟ್ಟಣ್ಣ ಕಣಗಾಲ್ ನಿರ್ದೇಶನದ ಸಾಕ್ಷಾತ್ಕಾರ ಚಿತ್ರವನ್ನು ನಿರ್ಮಾಣ ಮಾಡಿದವರುಕೃಷ್ಣ ಚಿತ್ರಮಂದಿರದ ಮಾಲೀಕರಾಗಿದ್ದ ಮಲ್ಲಿಕ್ ರವರು ಚಾಮರಾಜನಗರದವರುಎಂಬುದು ಸಂತೋಷವಾದುದು. ಪುಟ್ಟಣ್ಣ ಕಣಗಾಲ್ ರವರನ್ನು ನಿರ್ದೇಶಕರ ಬ್ರಹ್ಮ ಎಂದು ಕರೆಯಲಾಗಿದೆ.ಅವರ ಪ್ರತಿ ಚಿತ್ರಗಳಲ್ಲೂ ಕಲಾವಿದರಿಂದ ಶ್ರೇಷ್ಠ ಮಟ್ಟದ ನಟನೆಯನ್ನು ಹೊರ ತರುವ ಮೂಲಕ ಶಾಶ್ವತವಾದ ನಟರನ್ನು ರೂಪಿಸಿದ ಕೀರ್ತಿ ಪುಟ್ಟಣ್ಣ ಕಣಗಾಲ್ ರವರಿಗೆ ಸಲ್ಲುತ್ತದೆ. ಅವರ ರಂಗನಾಯಕಿ ಚಿತ್ರದಲ್ಲಿ ಅಪೂರ್ವವಾದ ಪಾತ್ರಗಳ ಸೃಷ್ಟಿಯ ಜೊತೆಗೆ ಮಸಣದ ಹೂವು,ಶರಪಂಜರ,ಎಡಕಲ್ಲು ಗುಡ್ಡದಮೇಲೆ ಚಿತ್ರಗಳು ಕನ್ನಡಿಗರ ಮನದಲ್ಲಿ ಶಾಶ್ವತವಾಗಿ ಉಳಿದಿದೆ.

ಪ್ರಾಸ್ತಾವಿಕವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ಬಿಕೆ ಆರಾಧ್ಯ ಪುಟ್ಟಣ್ಣ ಕಣಗಾಲ್ ರವರ ಜೀವನ ಪ್ರಶಸ್ತಿ ಗೌರವ ಹಾಗೂ ಅವರ ಸಾಧನೆಗಳ ಕುರಿತು ಪರಿಚಯ ಮಾಡಿಕೊಟ್ಟರು. ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ಎಲ್ ಶಿವಲಿಂಗ ಮೂರ್ತಿ ರವರು ಪುಟ್ಟಣ್ಣ ಕಣಗಾಲ್ ನಿರ್ದೇಶನದ ಚಿತ್ರಗಳ ಗೀತೆಗಳನ್ನು ಹಾಡಿದರು. ಕಾರ್ಯಕ್ರಮದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಸರಸ್ವತಿ, ಉಮೇಶ್,ರಾಜೇಶ್,ಹನುಮಂತ ನಾಯಕ, ಮಂಜುನಾಥ್, ವೆಂಕಟೇಶ್, ರಘು ಮುಂತಾದವರು ಉಪಸ್ಥಿತರಿದ್ದರು.

# ದಲಿತರ ಕಡಗಣನೆ ಖಂಡಿಸಿ ಜೂ.11ಕ್ಕೆ ಸಮಾವೇಶ

ಮೈಸೂರು: ರಾಜ್ಯ ಕಾಂಗ್ರೆಸ್ ಹಿರಿಯ ದಲಿತ ರಾಜಕಾರಣಿಗಳನ್ನು ಸದಾ ಕಡೆಗಣಿಸುತ್ತಿರುವುದನ್ನು ಖಂಡಿಸಿ ಜೂ. 11 ರಂದು ಬೆಳಗ್ಗೆ 10.30ಕ್ಕೆ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದಲಿತರ ಬೃಹತ್ ಸಮಾವೇಶ ಆಯೋಜಿಸಲಾಗುತ್ತಿದೆ. ಇದೇ ವೇಳೆ ಡಿ.ಕೆ. ಶಿವಕುಮಾರ್ ಅವರ ಸರ್ಕಾರ ಸುಸೂತ್ರವಾಗಿ ನಡೆಯಬೇಕೆಂದರೆ ದಲಿತರನ್ನು ಅಗೌರವದಿಂದ ನಡೆಸಿಕೊಳ್ಳಬಾರದು ಎಂದು ಮಾಜಿ ಮೇಯರ್ ಪುರುಷೋತ್ತಮ್ ಎಚ್ಚರಿಸಿದರು.

ನಗರದಲ್ಲಿ ಅಶೋಕಪುರಂ ದಲಿತ ಸಂಘಟನೆ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಸಮಾವೇಶ ಕಾಂಗ್ರೆಸ್ ಧೋರಣೆಗೆ ಎಚ್ಚರಿಕೆಯ ಸಂದೇಶವಾಗಲಿದೆ. ನಾವೆಲ್ಲ ಯಾವುದೇ ಪಕ್ಷದಲ್ಲಿದ್ದರೂ ಪ್ರಜಾಪ್ರಭುತ್ವ, ಅಸಾಮಾನತೆ, ದಲಿತರಿಗೆ ಅನ್ಯಾಯದ ವಿಷಯದ ಪ್ರಶ್ನೆ ಬಂದಾಗ ಒಗ್ಗೂಡುತ್ತೇವೆ. ಹಳೇ ಮೈಸೂರು ಭಾಗಕ್ಕೆ ಓರ್ವ ದಲಿತರನ್ನು ಸಚಿವರನ್ನಾಗಿಸಬೇಕು, ಜಿಲ್ಲಾ ಉಸ್ತುವಾರಿ ನೀಡಬೇಕೆಂಬ ಕೂಗನ್ನು ಈ ಸರ್ಕಾರ ಕಡೆಗಣಿಸಿರುವುದು ಸರಿಯಲ್ಲ. ಈ ಭಾಗದ ಪ್ರಮುಖ ನಾಯಕರಾದ ಡಾ.ಎಚ್.ಸಿ. ಮಹದೇವಪ್ಪ ಅವರನ್ನು ಪರಿಗಣಿಸಬೇಕಾಗಿತ್ತು. ಡಾ.ಎಚ್.ಸಿ. ಮಹದೇವಪ್ಪ ಅವರನ್ನು ಕಡೆಗಣಿಸಿರುವುದು ಖಂಡನೀಯ. ಇದರಿಂದ ಹಳೇ ಮೈಸೂರು ಭಾಗದಲ್ಲಿ ಸಮುದಾಯಕ್ಕೆ ಪ್ರಾತಿನಿಧ್ಯ ಇಲ್ಲವಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಸದಸ್ಯರಾದ ಮಹೇಶ್, ನಾಗರಾಜ್, ರಮೇಶ್, ಪುಟ್ಟರಾಜು, ಮಂಜು ಇದ್ದರು.

# ಪ್ರಾದೇಶಿಕ ಪಕ್ಷಗಳ ಮುಗಿಸುವ ಯತ್ನ

## ಬಿಜೆಪಿ ವಿರುದ್ಧ ಕೆಪಿಸಿಸಿ ವಕ್ತಾರ ಎಂ. ಲಕ್ಷ್ಮಣ್ ಗಂಭೀರ ಆರೋಪ

ಮೈಸೂರು: ದೇಶದ ಎಲ್ಲಾ ರಾಜ್ಯಗಳ ಪ್ರಾದೇಶಿಕ ಪಕ್ಷಗಳನ್ನು ವ್ಯವಸ್ಥಿತವಾಗಿ ಮುಗಿಸುವ ಹುನ್ನಾರವನ್ನು ಕೇಂದ್ರ ಬಿಜೆಪಿ ಮಾಡುತ್ತಿದೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಗಂಭೀರ ಆರೋಪ ಮಾಡಿದ್ದಾರೆ.

ನಗರದ ಜಲದರ್ಶಿನಿಯಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ತಮಿಳುನಾಡಿನಲ್ಲಿ ಎಐಡಿಎಂಕೆಯನ್ನು ಮುಗಿಸಿದರು, ಒಡಿಶಾದಲ್ಲಿ ಬಿ.ವಿ. ಪಟ್ನಾಯಕ್ ಸಹಾಯ ಪಡೆದು ಆ ಪಕ್ಷವನ್ನು ಪೂರ್ಣವಾಗಿ ಮುಗಿಸಿದರು ಹಾಗೂ ಮಹಾರಾಷ್ಟ್ರದಲ್ಲಿ ಶಿವಸೇನೆಯನ್ನು ನಾಲ್ಕು ಭಾಗಗಳಾಗಿ ಒಡೆದರು ಎಂದು ವಾಗ್ದಾಳಿ ನಡೆಸಿದರು. ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಪಕ್ಷದವರನ್ನು ಒಡೆದು ತಮ್ಮತ್ತ ಸೆಳೆಯುವ ಪ್ರಯತ್ನ ನಡೆಯುತ್ತಿದೆ. ಇದೇ ರೀತಿ ಜೆಡಿಎಸ್ ಪಕ್ಷವನ್ನು ಕೇವಲ ಮೂರು ತಿಂಗಳಲ್ಲಿ ಸಂಪೂರ್ಣವಾಗಿ ಮುಳುಗಿಸುವ ಕೆಲಸವನ್ನು ಬಿಜೆಪಿ ಮಾಡಲಿದೆ. ಈ ಹಿನ್ನೆಲೆಯಲ್ಲಿ ಅತೃಪ್ತರಿಗೆ ತಮ್ಮ ಮನೆ ಬಾಗಿಲು ತೆರೆದಿರುತ್ತದೆ ಎಂದು ಡಿ.ಕೆ. ಶಿವಕುಮಾರ್ ಅವರು ಹೇಳಿಕೆ ನೀಡಿದ್ದಾರೆ ಎಂದರು.

**ಜೆಡಿಎಸ್‌ಗೆ ಮರ್ಮಾಘಾತ ಹಾಗೂ ದೇವೇಗೌಡರಿಗೆ ಅಪಮಾನ**

ರಾಜ್ಯಸಭಾ ಚುನಾವಣೆಗೆ ಅಭ್ಯರ್ಥಿ ಘೋಷಣೆಯಲ್ಲಿ ಬಿಜೆಪಿ ತಡರಾತ್ರಿವರೆಗೂ ಕಾದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರಿಗೆ ಮರ್ಮಾಘಾತ ನೀಡಿದೆ. ರಾಜ್ಯದ ಜನತೆ ದೇವೇಗೌಡರ ಹೆಸರನ್ನು ನಿರೀಕ್ಷಿಸುತ್ತಿದ್ದರು. ಆದರೆ, ನಾಡಿನ ಮುತ್ಸದ್ದಿ ರಾಜಕಾರಣಿಗೆ ಬಿಜೆಪಿ ತೀವ್ರ ಅವಮಾನ ಮಾಡಿದೆ. ಕಳೆದ ಒಂದು ವರ್ಷದಿಂದ ಕಾಂಗ್ರೆಸ್ ಅನ್ನು ಬೈಯಲು ದೇವೇಗೌಡರನ್ನು ಬಳಸಿಕೊಂಡರು. ವೀಲ್ ಚೇರ್‌ನಲ್ಲಿ ಕುಳಿತು ರಾಜ್ಯ ಮತ್ತು ದೇಶದ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದ ಅವರು, ಬಿಜೆಪಿ ಹಾಗೂ ಮೋದಿಯನ್ನು ಹೊಗಳುತ್ತಿದ್ದರು. ಆದರೂ ಅವರಿಗೆ ರಾಜ್ಯಸಭಾ ಸ್ಥಾನ ನೀಡದೆ ವಂಚಿಸಲಾಗಿದೆ. ಹತ್ತು ದಿನಗಳ ಹಿಂದೆಯೇ ಕೋರ್ ಕಮಿಟಿ ಸಭೆ ನಡೆಸಿ ದೇವೇಗೌಡರ ಹೆಸರು ಶಿಫಾರಸ್ಸು ಮಾಡಿರುವುದಾಗಿ ಹೇಳಿದ್ದ ಬಿಜೆಪಿ ನಾಯಕರು, ಅಂತಿಮವಾಗಿ ಪಟ್ಟಿಯಲ್ಲಿ ಇರದಿದ್ದ ನಾಗರಾಜ್ ಅವರಿಗೆ ಟಿಕೆಟ್ ನೀಡಿದ್ದಾರೆ. ಇದು ದೇವೇಗೌಡರನ್ನು ಮುಟ್ಠಾಳರನ್ನಾಗಿ ಮಾಡುವ ಷಡ್ಯಂತ್ರವಲ್ಲವೇ ಎಂದು ಲಕ್ಷ್ಮಣ್ ಪ್ರಶ್ನಿಸಿದರು. ವಯಸ್ಸಿನ ಕಾರಣ ನೀಡುವುದಾಗಿದ್ದರೆ ಮುಂಚೆಯೇ ಹೇಳಬಹುದಿತ್ತು, ಆಗ ಕಾಂಗ್ರೆಸ್ ಪಕ್ಷವೇ ಅವರ ಹಿರಿತನಕ್ಕೆ ಗೌರವ ಕೊಟ್ಟು ರಾಜ್ಯಸಭೆಗೆ ಕಳುಹಿಸುವ ಬಗ್ಗೆ ಆಲೋಚಿಸುತ್ತಿತ್ತು ಎಂದರು.



### ಕಾಂಗ್ರೆಸ್‌ನತ್ತ ಜೆಡಿಎಸ್ ನಾಯಕರ ಒಲವು

ರಾಜ್ಯದಲ್ಲಿ ಮುಂದಿನ ದಿನಗಳಲ್ಲಿ ಜೆಡಿಎಸ್‌ನ ಬಹುತೇಕ ನಾಯಕರು ಮತ್ತೆ ಕಾಂಗ್ರೆಸ್ ಸೇರ್ಪಡೆಯಾಗಲಿದ್ದಾರೆ. ರಾಜ್ಯ ಸರ್ಕಾರವು ಪ್ರಮುಖ ಗ್ಯಾರಂಟಿಗಳನ್ನು ನೀಡಿದ್ದು, ಎಲ್ಲಾ ತಾಲೂಕುಗಳಲ್ಲಿ ಯುವ ಸಮೂಹವನ್ನು ಒಗ್ಗೂಡಿಸಲು 10 ಸಾವಿರ ಕೋಟಿ ಅನುದಾನ ಮೀಸಲಿಡುವ ಪ್ರಯತ್ನಗಳು ನಡೆಯುತ್ತಿವೆ. ಇನ್ನು ಹತ್ತು ದಿನಗಳಲ್ಲಿ ಖಾತೆ ಹಂಚಿಕೆ ಪ್ರಕ್ರಿಯೆ ಕೂಡ ಪೂರ್ಣಗೊಳ್ಳಲಿದೆ ಎಂದು ಲಕ್ಷ್ಮಣ್ ವಿವರಿಸಿದರು.
ಮೈಸೂರು ಜಿಲ್ಲೆಯಲ್ಲಿ 1,01,902 ಎಸ್‌ಐಆರ್ (ಖಖಖ) ಮ್ಯಾಪಿಂಗ್ ಬಾಕಿ ಉಳಿದಿದ್ದು, ಪ್ರಸ್ತುತ ಶೇ.96.36ರಷ್ಟಿರುವ ಮ್ಯಾಪಿಂಗ್ ಅನ್ನು ಶೇ.99ಕ್ಕೆ ತಲುಪಿಸುವಂತೆ ಜಿಲ್ಲಾಧಿಕಾರಿಗಳಿಗೆ ಮನವಿ ಮಾಡುವುದಾಗಿ ತಿಳಿಸಿದರು.

### ಮೂರು ತಿಂಗಳಲ್ಲಿ ಎಚ್.ಡಿ.ಕುಮಾರಸ್ವಾಮಿ ಮಾಜಿ

ಕೇಂದ್ರದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರನ್ನು ಮಂತ್ರಿ ಮಾಡಿ, ಯಾವುದೇ ಕೆಲಸ ಮಾಡದಂತೆ ಕಟ್ಟಿಹಾಕಲಾಗಿದೆ. ಎಚ್‌ಎಂಟಿ, ಭದ್ರಾವತಿ ಸ್ಟೀಲ್ ಕಂಪನಿಯಂತಹ ಕಾರ್ಖಾನೆಗಳು ಮುಚ್ಚಿ ಹೋಗುತ್ತಿವೆ. ಇವುಗಳನ್ನು ಉಳಿಸುವ ನಿಟ್ಟಿನಲ್ಲಿ ಒಂದೇ ಒಂದು ಸಭೆಯನ್ನೂ ನಡೆಸಿಲ್ಲ. ಕುಮಾರಸ್ವಾಮಿ ಅವರು ಜೆಡಿಎಸ್ ಪಕ್ಷವನ್ನು ಬಿಜೆಪಿಗೆ ಅಡವಿಟ್ಟಿದ್ದು, ನೂರಕ್ಕೆ ನೂರರಷ್ಟು ಕೇವಲ ಮೂರು ತಿಂಗಳಲ್ಲಿ ಅವರನ್ನು ಮಂತ್ರಿ ಸ್ಥಾನದಿಂದ ಕೆಳಗಿಳಿಸುವ ಕೆಲಸವನ್ನು ಬಿಜೆಪಿ ಮಾಡಲಿದೆ. ತಂದೆಯ ಗೌರವಕ್ಕಿಂತ ಸಚಿವ ಸ್ಥಾನವೇ ಮುಖ್ಯವಾಯಿತೇ ಎಂದು ಅವರು ಹರಿಹಾಯ್ದರು. ಕೇಂದ್ರ ಬಿಜೆಪಿಗೆ ಡಿಎಂಕೆ ಹಾಗೂ ಟಿಎಂಸಿಯ 20 ಸಂಸದರು ಬೆಂಬಲ ಸೂಚಿಸಿದರೆ ರಾಜ್ಯ ರಾಜಕೀಯದ ಚಿತ್ರಣವೇ ಬದಲಾಗಲಿದ್ದು, ಮಂತ್ರಿ ಸ್ಥಾನವನ್ನು ಕಿತ್ತು ಮನೆಗೆ ಕಳುಹಿಸಲಾಗುತ್ತದೆ ಎಂದು ಹೇಳಿದರು.

### ಮೇಕೆದಾಟು ಯೋಜನೆಗೆ ಕೇಂದ್ರದ ತಡೆಯೇ ಅಡ್ಡಿ

ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್‌ನಲ್ಲಿ ತಮಿಳುನಾಡು ಅರ್ಜಿ ಸಲ್ಲಿಸಿದ್ದು, ತಿಂಗಳಿಗೆ 170 ಟಿಎಂಸಿ ನೀರು ಬಿಟ್ಟು ಉಳಿದ ನೀರನ್ನು ರಾಜ್ಯದ ಬಳಕೆಗೆ ಮುಕ್ತ ಅವಕಾಶ ನೀಡಲಾಗಿದೆ. ಆದರೆ, ಈ ಯೋಜನೆ ಜಾರಿಗೆ ಡಿಪಿಆರ್ ಹಾಗೂ ಪರಿಸರ ನಿಯಂತ್ರಣ ಮಂಡಳಿಯಿಂದ ಕೇಂದ್ರದ ಬಿಜೆಪಿ ಸರ್ಕಾರ ಅನುಮತಿ ನೀಡಬೇಕಿದೆ. ಕೇಂದ್ರ ಸರ್ಕಾರ ಇಂದು ಅನುಮತಿ ನೀಡಿದರೆ, ನಾಳೆಯೇ ಯೋಜನೆಯನ್ನು ಜಾರಿಗೊಳಿಸಲಾಗುವುದು. ಪ್ರಹ್ಲಾದ್ ಜೋಶಿ ಸೇರಿದಂತೆ ಹಲವು ಬಿಜೆಪಿ ಸಂಸದರು ಉದ್ದೇಶಪೂರ್ವಕವಾಗಿ ಮೇಕೆದಾಟು ಯೋಜನೆಯನ್ನು ತಡೆಯುತ್ತಿದ್ದಾರೆ ಎಂದು ಅವರು ಕಿಡಿಕಾರಿದರು.

# 21ರಂದು ಅರಮನೆ ಆವರಣದಲ್ಲಿ ಅಂತರಾಷ್ಟ್ರೀಯ ಯೋಗ

ಮೈಸೂರು: ಜಿಲ್ಲಾಡಳಿತದ ವತಿಯಿಂದ ಜೂನ್ 21 ರಂದು ಮೈಸೂರು ಅರಮನೆ ಆವರಣದಲ್ಲಿ 12 ನೇ ಅಂತರಾಷ್ಟ್ರೀಯ ದಿನಾಚರಣೆಯನ್ನು ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಜನರು ಯೋಗವನ್ನು ಯೋಗದಿನಕ್ಕೆ ಮಾತ್ರ ಮೀಸಲಿಡದೆ ಯೋಗಾಭ್ಯಾಸವನ್ನು ಪ್ರತಿ ದಿನ ಅಳವಡಿಸಿಕೊಳ್ಳಬೇಕು. ಯೋಗದ ವಿವಿಧ ಆಸನಗಳಿಂದ ದೇಹದ ಎಲ್ಲಾ ಸ್ನಾಯು ಹಾಗೂ ನರಗಳಿಗೆ ವ್ಯಾಯಾಮ ನೀಡಿ ಆರೋಗ್ಯಯುತ ಜೀವನಕ್ಕೆ ಸಹಾಯಕವಾಗುತ್ತದೆ ಎಂದರು.

ಜೂ.21 ರಂದು ಬೆಳಿಗ್ಗೆ 6 ರಿಂದ 8ರವರೆಗೆ ವಿವಿಧ ಆಸನಗಳನ್ನು ಪ್ರದರ್ಶಿಸಲಾಗುವುದು. ಜಿಲ್ಲೆಯ ವಿವಿಧ ಯೋಗ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು. ಕಾರ್ಯಕ್ರದಲ್ಲಿ ಯಾವುದಾದರೂ ಹೊಸತನವನ್ನು ತರಬಯಿಸಿದರೆ, ಈ ಕುರಿತು ಮುಕ್ತವಾಗಿ ಚರ್ಚಿಸುವಂತೆ ತಿಳಿಸಿದರು.



ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಅರಮನೆ ಆವರಣದ ಸ್ವಚ್ಛತೆ, ಕುಡಿಯುವ ನೀರು, ಅರಮನೆ ಮಂಡಳಿ ವತಿಯಿಂದ ವೇದಿಕೆ, ಧ್ವನಿವರ್ಧಕ, ಪೊಲೀಸ್ ಇಲಾಖೆಯಿಂದ ಬಂದೋಬಸ್ತ್ ವ್ಯವಸ್ಥೆ ಮಾಡಬೇಕು ಎಂದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ: ರೇಣುಕಾ ದೇವಿ ಅವರು ಮಾತನಾಡಿ ಈಗಾಗಲೇ ಯೋಗದಿನವನ್ನು ಪ್ರತಿದಿನ ಅಭ್ಯಾಸ ಮಾಡಲು ದಿನನಿತ್ಯ ಯೋಗ ಯೋಜನೆಯಡಿ ಜೂನ್ 22 ರಿಂದ ಒಂದು ವರ್ಷ 365 ದಿನ ಜನರಿಗೆ ಆನ್ಲೈನ್ ಮೂಲಕ ಲಿಂಕ್ ಒದಗಿಸಲಾಗುವುದು.

ಯೋಗ ಫೆಡರೇಷನ್ ಮುಖ್ಯಸ್ಥ ಶ್ರೀಹರಿ ಮಾತನಾಡಿ ಮೈಸೂರನ್ನು ಯೋಗ ಹಬ್ ಮಾಡಲು ಜೂನ್ 21 ರಂದು 120 ಸ್ಥಳಗಳಲ್ಲಿ ಯೋಗ ಪ್ರದರ್ಶನ ನೀಡಲು ಯೋಜಿಸಲಾಗಿದೆ. 1200 ತರಬೇತುದಾರರೊಂದಿಗೆ 1,20, 000 ಜನರು ಭಾಗವಹಿಸುವಂತೆ ಮಾಡಲು ಉದ್ದೇಶಿಸಲಾಗಿದೆ ಎಂದರು. ಇದೇ ಸಂರ್ಭದಲ್ಲಿ ಯೋಗ ದಿನದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಸಭೆಯಲ್ಲಿ ಸಹಾಯಕ ಪೊಲೀಸ್ ಆಯುಕ್ತ ರಾಘವೇಂದ್ರ, ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕ ಪ್ರಭು ಉಪಸ್ಥಿತರಿದ್ದರು.

# ಕೆಂಡಗಣ್ಣ ಎಂಎಲ್‌ಸಿ ಆಗಲಿ

ಮೈಸೂರು: ರಾಜ್ಯದ ಅಹಿಂದ ಮುಖಂಡರಲ್ಲೊಬ್ಬರಾದ ಹಾಗೂ ವಿಶ್ವಕರ್ಮ ಜಾಗೃತಿ ವೇದಿಕೆ ಅಧ್ಯಕ್ಷರಾದ ಕೆಂಡಗಣ್ಣ ವಿಶ್ವಕರ್ಮ ಕಾಂಗ್ರೆಸ್ ಪಕ್ಷದಲ್ಲಿ ನಿಷ್ಠೆಯಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಪಕ್ಷ ಹೆಚ್ಚು ಸ್ಥಾನ ಗಳಿಸಲು ಹಾಗೂ ಸಮುದಾಯಕ್ಕೆ ಪ್ರಾತಿನಿಧ್ಯ ನೀಡುವ ಕಾರಣದಿಂದ ಎಂಎಲ್ಸಿ ಮಾಡುವಂತೆ ವಿಶ್ವಕರ್ಮ ಜಾಗೃತಿ ವೇದಿಕೆಯ ಪ್ರಧಾನ ಕಾರ್ಯದರ್ಶಿ ಟಿ.ಎ. ಸಿದ್ದರಾಜು ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇವರು ಕಾಂಗ್ರೆಸ್ ವಿರುದ್ಧ ಟೀಕೆ ಮಾಡಿದವರಿಗೆ ತಕ್ಕ ಉತ್ತರ ನೀಡುತ್ತಿದ್ದಾರೆ. ಜೊತೆಗೆ ಪಕ್ಷಕ್ಕೆ ಯುವ ನಾಯಕರ ಅಗತ್ಯವಿದ್ದು, ಇವರನ್ನು ಎಂಎಲ್ಸಿ ಮಾಡಬೇಕು. ತಪ್ಪಿದಲ್ಲಿ ಯಾವುದಾದರೊಂದು ನಿಗಮ, ಮಂಡಳಿಗೆ ಅಧ್ಯಕ್ಷರನ್ನಾಗಿಸಬೇಕೆಂದು ಕೋರಿದರು. ಸಮುದಾಯದ ಮುಖಂಡರಾದ ಸತೀಶ್, ಮಹಾಂತೇಶ್ ಬಡಿಗೇರ್, ಮೂರ್ತಿ, ಮಂಜು, ಸಿದ್ದೇಶ್, ನಾಗರಾಜು ಇದ್ದರು.



ಮರಿಯಾಲ ಶ್ರೀ ಮುರುಘರಾಜೇಂದ್ರಸ್ವಾಮಿ ವಿದ್ಯಾಸಂಸ್ಥೆಯಲ್ಲಿ ಗಿಡ ನೆಟ್ಟು ಪರಿಸರ ದಿನ ಆಚರಣೆ

# ಪರಿಸರ ಉತ್ತಮವಾಗಿದ್ದರೆ ಆರೋಗ್ಯವಂತ ಜೀವನ ಸಾಧ್ಯ

ಚಾಮರಾಜನಗರ: ನಮ್ಮ ಸುತ್ತಮುತ್ತಲಿನಲ್ಲಿ ಉತ್ತಮ ಪರಿಸರ ಹಾಗು ಮರ ಗಿಡಗಳನ್ನು ಬೆಳೆಸಿದ್ದರೆ ಶುದ್ದ ಗಾಳಿ ಸಿಗುತ್ತದೆ.ಇದರಿಂದ ಆರೋಗ್ಯವಂತ ಜೀವನ ಮಾಡಲು ಸಾಧ್ಯವಿದೆ. ಹೀಗಾಗಿ ಪ್ರತಿಯೊಬ್ಬರು ಗಿಡಗಳನ್ನು ನೆಟ್ಟು ಪೋಷಣೆ ಮಾಡಿ, ಮುಂದಿನ ಪೀಳಿಗೆಗೆ ಹಸಿರಿನ ಪರಿಸರವನ್ನು ನೀಡೋಣ ಎಂದು ಚಾ.ನಗರ ಅರಣ್ಯ ಇಲಾಖೆಯ ಉಪ ವಲಯ ಅರಣಾಧಿಕಾರಿ ಆರ್.ಚಂದ್ರಕುಮಾರ್ ತಿಳಿಸಿದರು.

ನಗರದ ಸಮೀಪದ ಮರಿಯಾಲದ ಶ್ರೀ ಮುರುಘರಾಜೇಂದ್ರ ಸ್ವಾಮಿ ವಿದ್ಯಾ ಸಂಸ್ಥೆಯ ಅವರಣದಲ್ಲಿ ವಿಶ್ವ ಪರಿಸರ ದಿನ ದ ಅಂಗ ವಾಗಿ ಗಿಡ ನೆಟ್ಟು ಪರಿಸರ ದಿನಾಚರಣೆಗೆ ಚಾಲನೆ ನೀಡಿ ಮಾತನಾಡಿದರು. ಪರಿಸರ ಸಂರಕ್ಷಣೆ ನಮ್ಮೆಲ್ಲರ ಧ್ಯೇಯವಾಗಬೇಕು. ಉತ್ತಮವಾದ ಪರಿಸರ ಇರುವುದರಿಂದ ನಮಗೆ ಒಳ್ಳೆಯ ಗಾಳಿ ಮತ್ತು ವಾತಾವರಣವನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಹಾಗಾಗಿ ಪರಿಸರವನ್ನು ಉಳಿಸುವ ನಿಟ್ಟಿನಲ್ಲಿ ನಾವೆಲ್ಲರೂ ಕಾರ್ಯ ಪ್ರವೃತ್ತರಾಗಬೇಕು. ವಿದ್ಯಾರ್ಥಿ ದಿಸೆಯಿಂದ ಗಿಡಗಳನ್ನು ಸಂರಕ್ಷಣೆ ಮಾಡುವ ಮತ್ತು ಪರಿಸರವನ್ನು ಉಳಿಸುವ ಬಗ್ಗೆ ಜಾಗೃತಿ ಮೂಡಬೇಕಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದೊಂದು ಗಿಡಗಳನ್ನು ನೆಟ್ಟು ಸಂರಕ್ಷಣೆ ಮಾಡುವ ಪರಿಪಾಠ ಬೆಳೆಸಿಕೊಂಡು ನಮ್ಮ ಸುತ್ತಮುತ್ತಲಿನ ಹಸಿರಿನ ವಾತಾವರಣ ನಿರ್ಮಾಣವಾಗುತ್ತದೆ. ಶುದ್ದವಾದ ಗಾಳಿ ಬೆಳಕು,ನೀರು ದೊರೆಯುತ್ತದೆ ಎಂದರು.



ಶ್ರೀ ಮುರುಘರಾಜೇಂದ್ರಸ್ವಾಮಿ ವಿದ್ಯಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಇಮ್ಮಡಿ ಮುರುಘರಾಜೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿ ಮಾತನಾಡಿ, ನಾಡು ಬೆಳೆದಂತೆ ಕಾಡು ನಾಶವಾಗುತ್ತದೆ. ಕಾಡು ನಾಶವಾದರೆ, ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಬೆಟ್ಟ ಗುಡ್ಡಗಳನ್ನು ಹೊಡೆದು ಕೈಗಾರಿಕರಣ ಮಾಡಲಾಗುತ್ತಿದೆ. ಇದರಿಂದ ನಮ್ಮ ಪರಿಸರದ ಮೇಲೆ ದುಷ್ಪರಿಣಾಮ ಬೀರುತ್ತದೆ. ಗಿಡ ಮರಗಳನ್ನು ನಾಶ ಮಾಡುವುದರಿಂದ ಮಳೆ ಇಲ್ಲದಂತಾಗುತ್ತದೆ. ಪರಿಸರ ನಾಶವಾಗಿ, ನಾವು ವಾಸಿಸುವ ಪ್ರದೇಶದಲ್ಲಿ ಉತ್ತಮ ಗಾಳಿ ಯೇ ಇಲ್ಲದಂತಾಗುತ್ತದೆ. ನಮ್ಮ ಪೂರ್ವಿಕರು ಊರುಮುಂದೆ ಒಂದು ಕೆರೆ, ಸುತ್ತಲು ಮರ ಗಿಡಗಳನ್ನು ನೆಟ್ಟು ಸಂರಕ್ಷಣೆ ಮಾಡುತ್ತಿದ್ದರು. ಇತರರೊಟ್ಟಿಗೆ ಅರಳಿಮರ, ಮೇವಿನ ಮರ, ಹೊಂಗೆ ಗಿಡಗಳನ್ನು ಹಾಕಿ ಉತ್ತಮ ಗಾಳಿ ಪಡೆದುಕೊಳ್ಳುತ್ತಿದ್ದರು. ಹೀಗಾಗಿ ಯಾವುದೇ ರೀತಿಯ ಖಾಯಿಲೆ ಇಲ್ಲದೇ ನೂರು ವರ್ಷಗಳ ಬದುಕುತ್ತಿದ್ದರು. ಈಗ ಇದೆಲ್ಲವು ಹೋಗಿ ನಮ್ಮ ಪರಿಸರವೇ ಮಾರಕವಾಗುತ್ತಿವೆ. ಹೀಗಾಗಿ ಪ್ರತಿಯೊಬ್ಬರು ಪರಿಸರ ಸಂರಕ್ಷಣೆ ಮತ್ತು ಮುಂದಿನ ಪೀಳಿಗೆಗೆ ಪರಿಸರವನ್ನು ಉಳಿಸುವ ಕೆಲಸವನ್ನು ನಾವೆಲ್ಲ ಸೇರಿ ಮಾಡೋಣ ಎಂದರು. ನಮ್ಮ ಸಂಸ್ಥೆಯಲ್ಲಿರುವ ಸಾವಿರ ವಿದ್ಯಾರ್ಥಿಗಳಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯು ಒಂದೊಂದು ಗಿಡವನ್ನು ನೆಟ್ಟರೆ ಪ್ರತಿ ವರ್ಷಕ್ಕೂ ಒಂದು ಸಾವಿರ ಗಿಡವನ್ನು ನಾವು ಬೆಳೆಸಬಹುದು ಎಂಬ ಮಾಹಿತಿಯನ್ನು ನೀಡಿದರು. ಮಕ್ಕಳಿಗೆ ಪರಿಸರದ ಮಹತ್ವವನ್ನು ತಿಳಿಸಿಕೊಟ್ಟರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿದ್ಯಾಸಂಸ್ಥೆಯ ಆಡಳಿತಾಧಿಕಾರಿಯೂ ಆದ ವಕೀಲ ಕೆ.ಎಂ. ಮಲ್ಲಿಕಾರ್ಜುನಪ್ಪ ವಹಿಸಿದ್ದರು. ಶ್ರೀ ಮುರುಘರಾಜೇಂದ್ರಸ್ವಾಮಿ ಕಾಲೇಜಿನ ಪ್ರಾಂಶುಪಾಲರಾದ ಮಹದೇವಸ್ವಾಮಿ ಪಿ, ವಿದ್ಯಾಸಂಸ್ಥೆಯ ಎಲ್ಲಾ ಶಾಲೆಯ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ವರ್ಗದವರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಸಂಕ್ಷಿಪ್ತ ಸುದ್ದಿ

### ಉಪ ಲೋಕಾಯುಕ್ತರಿಂದ ಸ್ವಯಂ ಪ್ರೇರಿತ ದೂರು ದಾಖಲು

**ರಾಮನಗರ:** ಹಾರೋಹಳ್ಳಿ ತಾಲ್ಲೂಕಿನ ಹಲಗೇಗೌಡನ ಕೆರೆಯ ಹತ್ತಿರದ ಕಾರ್ಖಾನೆಗಳಿಂದ ತ್ಯಾಜ್ಯ ನೀರನ್ನು ಬಿಡುಗಡೆ ಮಾಡುವುದರಿಂದ ಕಲುಷಿತಗೊಂಡಿರುವ ಬಗ್ಗೆ ಉಪಲೋಕಾಯುಕ್ತ ನ್ಯಾಯಮೂರ್ತಿಗಳಾದ ಕೆ.ಎನ್. ಫಣೀಂದ್ರ ಅವರು ಸ್ವಯಂಪ್ರೇರಿತ ದೂರು ದಾಖಲಿಸಿದ್ದಾರೆ.

ಪ್ರತಿವಾದಿಗಳಾದ ಬೆಂಗಳೂರು ದಕ್ಷಿಣ ಜಿಲ್ಲೆಯ (ರಾಮನಗರ) ಹಾರೋಹಳ್ಳಿ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಅಪೂರ್ವ ಹಾಗೂ ಹಾರೋಹಳ್ಳಿ ತಾಲ್ಲೂಕಿನ ಚೀಲೂರು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಮಹೇಶ್ ಅವರು ಅಗತ್ಯ ಕ್ರಮಗಳನ್ನು ತೆಗೆದುಕೊಂಡು ತಮ್ಮ ವರದಿಗಳನ್ನು ಸಲ್ಲಿಸುವಂತೆ ಸೂಚಿಸಿದ್ದಾರೆ.

### ಅರ್ಜಿ ಆಹ್ವಾನ

**ರಾಮನಗರ:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಬೆಂಗಳೂರು ದಕ್ಷಿಣ ಜಿಲ್ಲೆಯ ರಾಮನಗರ ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ 10 ಅಂಗನವಾಡಿ ಕಾರ್ಯಕರ್ತೆ ಹಾಗೂ 115 ಅಂಗನವಾಡಿ ಸಹಾಯಕಿಯರ ಹುದ್ದೆಗಳನ್ನು ಗೌರವಧನದ ಆಧಾರದ ಮೇಲೆ ಭರ್ತಿ ಮಾಡಲು ಅರ್ಹ ಸ್ಥಳೀಯ ಮಹಿಳಾ ಅಭ್ಯರ್ಥಿಗಳು ಹಾಗೂ ಲಿಂಗತ್ವ ಅಲ್ಪಸಂಖ್ಯಾತ ಮಹಿಳಾ ಅಭ್ಯರ್ಥಿಗಳಿಂದ ಆಫ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ನಿಗಧಿತ ಅರ್ಜಿ ನಮೂನೆಯನ್ನು ರಾಮನಗರದ ಕಂದಾಯಭವನದ ಮೂರನೇ ಮಹಡಿಯಲ್ಲಿರುವ ಕೊಠಡಿ ಸಂಖ್ಯೆ: 301/ಎ ಶಿಶು ಅಭಿವೃದ್ಧಿ ಯೋಜನಾ ಕಚೇರಿಯಲ್ಲಿ ಪಡೆದು ಜುಲೈ 9ರ ಸಂಜೆ 5.30ರೊಳಗೆ ಅರ್ಹ ಹಾಗೂ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಅಂಗನವಾಡಿ ಕಾರ್ಯಕರ್ತೆ ಹುದ್ದೆಗೆ ಪಿ.ಯು.ಸಿ ಉತ್ತೀರ್ಣರಾಗಿರಬೇಕು ಹಾಗೂ ಸಹಾಯಕಿ ಹುದ್ದೆಗೆ ಎಸ್.ಎಸ್.ಎಲ್.ಸಿ ಅಥವಾ ತತ್ಸಮಾನ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಹೆಚ್ಚಿನ ಮಾಹಿತಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ, ಕಂದಾಯ ಭವನ, 2ನೇ ಮಹಡಿ, ರೂಂ.ನಂ. 301/ಎ, ರಾಮನಗರ. ದೂ.ಸಂಖ್ಯೆ: 7259124543 ಅನ್ನು ಸಂಪರ್ಕಿಸುವಂತೆ ರಾಮನಗರದ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಇಂದು ರಾಷ್ಟ್ರ ವ್ಯಾಪ್ತಿಯ ಜಾಗೃತಿ ಅಭಿಯಾನ

**ರಾಮನಗರ:** ಆದಾಯ ತೆರಿಗೆ ಇಲಾಖೆ, ಕರ್ನಾಟಕ ಮತ್ತು ಗೋವಾ ತೆರಿಗೆ ಇಲಾಖೆ ವತಿಯಿಂದ ಬೆಂಗಳೂರು ವ್ಯಾಪ್ತಿಯ ಆದಾಯ ತೆರಿಗೆ 3ರ ಪ್ರಧಾನ ಆಯುಕ್ತರು ಹಾಗೂ ರಾಮನಗರ ಆದಾಯ ತೆರಿಗೆ ಇಲಾಖೆ ವತಿಯಿಂದ ಪ್ರಾರಂಭ್–2026 ಎಂಬ ಆದಾಯ ತೆರಿಗೆ ಕಾಯ್ದೆ–2025 ರಾಷ್ಟ್ರ ವ್ಯಾಪ್ತಿಯ ಜಾಗೃತಿ ಅಭಿಯಾನವನ್ನು ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ 2026ರ ಜೂ. 10ರ ಬುಧವಾರ ಬೆಳಿಗ್ಗೆ 3.30ಕ್ಕೆ ಆಯೋಜಿಸಲಾಗಿದೆ ಎಂದು ರಾಮನಗರದ ಆದಾಯ ತೆರಿಗೆ ಇಲಾಖೆಯ ಪ್ರಕಟಣೆ ತಿಳಿಸಿದೆ.

### 10-11 ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ

**ರಾಮನಗರ:** ಚನ್ನಪಟ್ಟಣ ನಗರಕ್ಕೆ ಶಿಂಷಾ ನದಿ ಮೂಲದಿಂದ ಹಾಗೂ ಬಿ.ಡಬ್ಲ್ಯೂ.ಎಸ್. ಎಸ್.ಬಿ ಬ್ಯಾಕ್‌ವಾಷ್‌ನಿಂದ ಕುಡಿಯುವ ನೀರು ಸರಬರಾಜಾಗುತ್ತಿದ್ದು, ಕೊಳವೆ ಮಾರ್ಗದ ತುರ್ತು ದುರಸ್ಥಿ ಕಾಮಗಾರಿಯನ್ನು ಜೂ. 10ರಂದು ಕೈಗೊಳ್ಳಲು ಉದ್ದೇಶಿಸಲಾಗಿದೆ.

ಆದ್ದರಿಂದ ಚನ್ನಪಟ್ಟಣ ನಗರಕ್ಕೆ ಜೂ. 10 ಮತ್ತು 11 ರಂದು ಕುಡಿಯುವ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುತ್ತದೆ.

ಆದ್ದರಿಂದ ಸಾರ್ವಜನಿಕರು ಚನ್ನಪಟ್ಟಣ ನಗರಸಭೆ ಹಾಗೂ ಜಲಮಂಡಳಿಯವರೊಂದಿಗೆ ಸಹಕರಿಸುವಂತೆ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಚನ್ನಪಟ್ಟಣ ಉಪವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಶೇಷ ಸಮಗ್ರ ಮತದಾರರ ಪರಿಷ್ಕರಣೆ

# ಬಾಕಿ ಮ್ಯಾಪಿಂಗ್ ಶೀಘ್ರವೇ ಪೂರ್ಣಗೊಳಿಸಿ: ಡಿಸಿ

**ಮಂಡ್ಯ:** ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಾದ್ಯಂತ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಖಖಖ) ಪ್ರಕ್ರಿಯೆಯು ನಡೆಯುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಮ್ಯಾಪಿಂಗ್ ಕಾರ್ಯವು ಈಗಾಗಲೇ ಶೇಕಡಾ 96.59 ಪ್ರಗತಿಯನ್ನು ಕಂಡಿದ್ದು, ಉಳಿದ ಬಾಕಿ ಮ್ಯಾಪಿಂಗ್ ಅನ್ನು ಶೀಘ್ರವೇ ಪೂರ್ಣಗೊಳಿಸುವಂತೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಮಂಗಳವಾರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ವಿಶೇಷ ಸಮಗ್ರ ಪರಿಷ್ಕರಣೆ ಸಂಬಂಧ ಮ್ಯಾಪಿಂಗ್ ಪ್ರಗತಿ ಹಾಗೂ ಗ್ರಾಮ ಪಂಚಾಯತಿ ಸಾರ್ವಜನಿಕ ಚುನಾವಣೆ–2026ರ ಗ್ರಾಮ ಪಂಚಾಯಿತಿ ಸದಸ್ಯ ಸ್ಥಾನಗಳ ಮೀಸಲಾತಿ ಕುರಿತು ನಡೆದ ಸಭೆಯಲ್ಲಿ ಮಾತನಾಡಿದರು.



ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ತೆರಳಿ ದೋಷರಹಿತವಾಗಿ ಮಾಹಿತಿ ಸಂಗ್ರಹಿಸಬೇಕು. ಕರ್ತವ್ಯದಲ್ಲಿ ಲೋಪ ಎಸಗುವ ಅಥವಾ ಗೈರಾಗುವ ಅಧಿಕಾರಿಗಳ ವಿರುದ್ಧ ಕ್ರಮ ಕ?ಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

ಈಗಾಗಲೇ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆಗಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದ್ದು, ಬೂತ್ ಮಟ್ಟದ ಅಧಿಕಾರಿಗಳಿಗೆ ಬಗ್ಗೆ ತರಬೇತಿ ನೀಡಲಾಗುತ್ತದೆ. ಬೂತ್ ಮಟ್ಟದ ಅಧಿಕಾರಿಗಳು ತರಬೇತಿಯಲ್ಲಿ ಮಾಡುವ ಕೆಲಸ ಕಾರ್ಯಗಳಿಗೆ ಮಾಹಿತಿ ನೀಡಲು ತಿಳಿಸಿದರು.

ಯಾವುದೇ ಒಬ್ಬ ಅರ್ಹ ಮತದಾರರು ಮತಪಟ್ಟಿಯಿಂದ ಹೊರ ಗುಳಿಯಬಾರದು, ಅನರ್ಹರ ಹೆಸರು ಮತಪಟ್ಟಿಯಲ್ಲಿ ಸೇರಿರಬಾರದು ಎಂಬುದು ಎಸ್‌ಐಆರ್ ಪ್ರಮುಖ ಉದ್ದೇಶವಾಗಿದೆ ಎಂದು ಅವರು ಹೇಳಿದರು.

ಜನಸಾಮಾನ್ಯರಲ್ಲಿ ಎಸ್‌ಐಆರ್ ಬಗ್ಗೆ ತಪ್ಪು ಭಾವನೆ ಇದೆ. ಅವರಿಗೆ ಎಸ್‌ಐಆರ್ ಉದ್ದೇಶವನ್ನು ಮನವರಿಕೆ ಮಾಡಿಕೊಟ್ಟು ಎಸ್‌ಐಆರ್ ಬಗ್ಗೆ ಇರುವ ತಪ್ಪು ಭಾವನೆಯನ್ನು ಹೋಗಲಾಡಿಸಬೇಕು ಎಂದು ತಿಳಿಸಿದ ಜಿಲ್ಲಾಧಿಕಾರಿಗಳು ಮತದಾರರ ಪಟ್ಟಿಯ ಪರಿಷ್ಕರಣೆಯನ್ನು ಅತ್ಯಂತ ಪಾರದರ್ಶಕವಾಗಿ ಮತ್ತು ವ್ಯವಸ್ಥಿತವಾಗಿ ಪೂರ್ಣಗೊಳಿಸಲು ಅಗತ್ಯ ಕ್ರಮವಹಿಸಬೇಕು ಎಂದು ಅವರು ಜಿಲ್ಲಾಧಿಕಾರಿಗಳು ತಿಳಿಸಿದರು.

ವಿಶೇಷ ಪರಿಷ್ಕರಣೆಯು ಕರಡು ಮತದಾರರ ಪಟ್ಟಿಯನ್ನು ಪರಿಶೀಲಿಸಿ, ಮೃತರು ಹಾಗೂ ಸ್ಥಳಾಂತರಗೊಂಡವರ ಹೆಸರನ್ನು ತೆಗೆದುಹಾಕಲು ಮತ್ತು ಅರ್ಹರನ್ನು ಸೇರಿಸಲು ಕೈಗೊಳ್ಳಲಾಗಿರುವ ಪ್ರಕ್ರಿಯೆಯಾಗಿದೆ ಎಂದು ಅವರು ತಿಳಿಸಿದರು.

ಬೂತ್ ಮಟ್ಟದ ಅಧಿಕಾರಿಗಳು ಮನೆಗೆ ಭೇಟಿ ನೀಡಿದ ಸಂದರ್ಭದಲ್ಲಿ ನೀಡಿದ ನಮೂನೆಯನ್ನು ಭರ್ತಿ ಮಾಡಿ ಮತದಾರರು ಕಡ್ಡಾಯವಾಗಿ ಬೂತ್ ಮಟ್ಟದ ಅಧಿಕಾರಿಗಳಿಗೆ ಸಲ್ಲಿಸಬೇಕು. ಅಧಿಕಾರಿಗಳು ಭರ್ತಿ ಮಾಡಿದ ನಮೂನೆಯ ಒಂದು ಪ್ರತಿಗೆ ಸ್ವೀಕೃತಿ ನೀಡುತ್ತಾರೆ. ಜೊತೆಗೆ ಮತದಾರರು ಭರ್ತಿ ಮಾಡಿದ ನಮೂನೆಯನ್ನು ಆನ್‌ಲೈನ್ ಮೂಲಕವೂ ಅಪ್‌ಲೋಡ್ ಮಾಡಬಹುದು ಎಂದು ತಿಳಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿಗಳಾದ ಬಿ.ಸಿ. ಶಿವನಂದಾಮೂರ್ತಿ ಅವರು ಮಾತನಾಡಿ ಮನೆ–ಮನೆಗೆ ಭೇಟಿ ಹಂತದ ಸಂದರ್ಭದಲ್ಲಿ ಬೂತ್ ಮಟ್ಟದ ಅಧಿಕಾರಿಗಳು ಪ್ರತಿ ಮನೆಗೆ ಭೇಟಿ ನೀಡಿ, ಪೂರ್ವ ಮಾಹಿತಿಯುಳ್ಳ ಗಣತಿ ನಮೂನೆಯನ್ನು ದ್ವಿಪ್ರತಿಯಲ್ಲಿ ವಿತರಿಸಿ, ಅವುಗಳನ್ನು ಭರ್ತಿ ಮಾಡಲು ಮಾರ್ಗದರ್ಶನ ನೀಡಬೇಕು ಎಂದು ತಿಳಿಸಿದ ಅವರು ಭರ್ತಿ ಮಾಡಿದ ನಮೂನೆಯನ್ನು ಮತದಾರರಿಂದ ಪಡೆದುಕೊಳ್ಳಬೇಕು ಎಂದು ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ (ಅಭಿವೃದ್ಧಿ) ಪಿ. ಲಕ್ಷ್ಮಿ, ಮಂಡ್ಯ ಉಪ ವಿಭಾಗಧಿಕಾರಿ ಶಿವಮೂರ್ತಿ ಹಾಗೂ ಎಲ್ಲಾ ತಾಲ್ಲೂಕಿನ ತಹಶೀಲ್ದಾರ್ ಸಭೆಯಲ್ಲಿ ಹಾಜರಿದ್ದರು.

## ಮಂಡ್ಯದಲ್ಲಿ ಜೂನ್ 10ರಂದು ಪ್ರೊ.ಬಿ.ಕೃಷ್ಣಪ್ಪ ಜನ್ಮದಿನೋತ್ಸವ

**ಮಂಡ್ಯ:** ಕರ್ನಾಟಕ ದಲಿತ ಸಂಘರ್ಷ ಸಮಿತಿ ವತಿಯಿಂದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಪ್ರೊ.ಬಿ.ಕೃಷ್ಣಪ್ಪ ಅವರ ಜನ್ಮದಿನೋತ್ಸವ ಹಾಗೂ ಪ್ರೊ.ಬಿ.ಕೆ. ಪ್ರಶಸ್ತಿ ಪ್ರದಾನ ಸಮಾರಂಭವನ್ನು ಜೂ.10ರಂದು ಬೆಳಗ್ಗೆ 11 ಗಂಟೆಗೆ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಲಾಗಿದೆ ಎಂದು ಸಮಿತಿಯ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂ.9ರಂದು ಬೆಳಗ್ಗೆ 11 ಜಿಲ್ಲಾಧಿಕಾರಿ ಕಚೇರಿ ಬಳಿಯ ರಸ್ತೆಯ ಪಕ್ಕದಲ್ಲಿ ಗಿಡ ನೆಡುವ ಕಾರ್ಯಕ್ರಮ ಆಯೋಜಿಸಲಾಗಿದೆ. ಎಂದರು.

ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಕುಮಾರ ಉದ್ಘಾಟಿಸುವರು, ವಿಚಾರವಾದಿ ಎಂ.ಗೋಪಿನಾಥ್ ಮುಖ್ಯ ಭಾಷಣ ಮಾಡುವರು. ನಾಲ್ವಡಿ ಒಡೆಯರ್ ಹಳಗೂ ಪ್ರೊ.ಬಿ.ಕೃಷ್ಣಪ್ಪ ಭಾವಚಿತ್ರಕ್ಕೆ ಸಮಿತಿಯ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ ಪುಷ್ಪಾರ್ಚನೆ ಮಾಡುವರು. ಸಮಿತಿಯ ಜಿಲ್ಲಾಧ್ಯಕ್ಷ ಬಿ.ಆನಂದ ಅಧ್ಯಕ್ಷತೆ ವಹಿಸುವರು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ರೇಷ್ಮೆ ಇಲಾಖೆಯ ಉಪನಿರ್ದೇಶಕ ಡಾ.ಸುಂದರ್‌ರಾಜ್, ಸಮಿತಿಯ ವಿಭಾಗೀಯ ಸಂಚಾಲಕ ಕೆ.ಎಂ.ಅನಿಲ್‌ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಈಚಗೆರೆ ನಾಗರಾಜ್, ಸಂಘಟನಾ ಕಾರ್ಯದರ್ಶಿಗಳಾದ ಸುರೇಶ್‌ಕುಮಾರ್, ವೆಂಕಟೇಶ್, ಸಿದ್ದಯ್ಯ, ಸಂಪನ್ಮೂಲ ವ್ಯಕ್ತಿ ಶರಾವತಿ ಅಶ್ವಥ್, ಸುಧಾ ಶ್ರೀಕಂಠು, ತಾಲೂಕು ಅಧ್ಯಕ್ಷರಾದ ವಿಮಲನಂದೀಶ್, ಪುಟ್ಟಲಿಂಗಯ್ಯ, ಕುಮಾರ್ ಭಾಗವಹಿಸುವರು ಎಂದು ವಿವರಿಸಿದರು.

ನಿವೃತ್ತ ಎಎಸ್‌ಪಿ ಗಂಗಾಧರಸ್ವಾಮಿ, ತಂಗಳಗೆರೆ ಮೊರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲ ಗುರುಮೂರ್ತಿ ದೊಡ್ಡಕೊತ್ತಗೆರೆ, ಸಮಿತಿಯ ಮಹಿಳಾ ಜಿಲ್ಲಾಧ್ಯಕ್ಷೆ ಸುಶ್ಮಿತ ಜಿ.ಹೊಸಹಳ್ಳಿ, ತಾಲೂಕು ಅಧ್ಯಕ್ಷ ಮುತ್ತುರಾಜ್ ನಗರಕೆರೆ ಹಾಗೂ ಕರ್ನಾಟಕದಲಿತ ನೌಕರರ ಒಕ್ಕೂಟದ ಜಿಲ್ಲಾಧ್ಯಕ್ಷ ಸಿ.ಅಶ್ವತ್ ಚೋಕನಹಳ್ಳಿ ಅವರಿಗೆ ಪ್ರೊ.ಬಿ.ಕೆ ಪ್ರಶಸ್ತಿ ನೀಡಿ ಗೌರವಿಸಲಾಗುವುದು ಎಂದು ಮಾಹಿತಿ ನೀಡಿದರು. ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಬಿ.ಆನಂದ, ಮಹಿಳಾ ಜಿಲ್ಲಾಧ್ಯಕ್ಷೆ ಸುಶ್ಮಿತಾ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಈಚಗೆರೆ ನಾಗರಾಜ್, ಚಂದ್ರು ಇದ್ದರು.




## ಪರಿಸರದ ಸಮತೋಲನಕ್ಕೆ ಶೇ.35 ರಷ್ಟು ಅರಣ್ಯ ಅಗತ್ಯ




**ಚನ್ನಪಟ್ಟಣ:** ಗಿಡ ನೆಟ್ಟು ಅರಣ್ಯ ಬೆಳಸಿ ಪರಿಸರದ ಸಮತೋಲನ ಕಾಪಾಡದಿದ್ದರೆ ಮುಂದೆ ಜನರು ಬೆನ್ನಿಗೆ ಆಮ್ಲಜನಕ ಕಟ್ಟಿಕೊಂಡು ಉಸಿರಾಡುವ ಪರಿಸ್ಥಿತಿ ನಿರ್ಮಾಣ ಆಗುತ್ತದೆ ಎಂದು ತಾಲೂಕಿನ ವಲಯ ಅರಣ್ಯಾಧಿಕಾರಿ ಮಲ್ಲೇಶ್‌ಅವರು ಆತಂಕ ವ್ಯಕ್ತಪಡಿಸಿದರು.

ಕಸ್ತೂರಿ ಕರ್ನಾಟಕ ಜನಪರ ವೇದಿಕೆ, ಸಾಂಗತ್ಯದಲ್ಲಿಪಟ್ಟಣದಎಂ.ಜಿ.ರಸ್ತೆಯಲ್ಲಿಎಪಿಎಂಸಿ ಮಾರುಕಟ್ಟೆ ಸನಿಹದ ಬಡಾಮಕಾನ್‌ನಲ್ಲಿರುವ ಜೀನಿಯಸ್ ಇಂಟರ್ ನ್ಯಾಷನಲ್ ಸ್ಕೂಲ್ ಒಡೆತನದ ಬ್ರೈನಿ ಸ್ಟಾರ್ ಹೋಲಿಸ್ಟಿಕ್ ಮಾಂಟೆಸ್ಸರಿಯ ಸಹಯೋಗದೊಂದಿಗೆ ಮಂಗಳವಾರ ಆಯೋಜಿಸಲಾಗಿದ್ದ ವಿಶ್ವ ಪರಿಸರದ ದಿನಾಚರಣೆಯಲ್ಲಿ ಶಾಲಾ ಮಕ್ಕಳ ಪೋಷಕರ ಸ್ವಹಸ್ತದಿಂದ ಗಿಡನೆಟ್ಟು ಅದು ಮರವಾಗುವವರೆಗೆ ಪೋಷಿಸುವ ಸಂಕಲ್ಪ ಸ್ವೀಕರಿಸುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದು ತಾಲೂಕಿನಲ್ಲಿ 25 ಕ್ಕೂ ಹೆಚ್ಚು ಕಾಡಾನೆಗಳು ತಾಲೂಕಿನಲ್ಲಿ ಬೀಡುಬಿಟ್ಟಿದ್ದು, ಈ ಹಿಂದೆ ಕಾರಿಡಾರ್ ಮೂಲಕ ಓಡಾಡುತ್ತಾ ತಮ್ಮ ಸಂತಾನ ವೃದ್ಧಿಸಿ ಕುಟುಂಬ ನಿರ್ವಹಣೆ ಮಾಡುತ್ತಿದ್ದ ಕಾಡಾನೆಗಳು ಇದೀಗ ತಾಲೂಕು ನಮ್ಮ ತವರು ಎಂದು ತಾಲೂಕಿನಲ್ಲೇ ಉಳಿದಿವೆ. ಜನಸಂಖ್ಯೆ ಹೆಚ್ಚಾದಂತೆ ಅಭಿವೃದ್ಧಿ ಹೆಸರಲ್ಲಿ ಕಾಡು ನಾಶವಾಗುತ್ತಿದ್ದು ಕಾಡಿನ ಪ್ರಾಣಿಗಳು ನಾಡಿಗೆ ಬಂದು ಮಾನವ ಮತ್ತು ಪ್ರಾಣಿಗಳ ನಡುವೆ ಸಂಘರ್ಷಕ್ಕೆ ಕಾರಣವಾಗಿದೆ ಎಂದು ಮಲ್ಲೇಶ್‌ಅವರು ತಿಳಿಸಿದರು.

ಪ್ರಕೃತಿಯಲ್ಲಿ ಸಮತೋಲನ ಇದ್ದರೆ ಮಾತ್ರ ಮಳೆ, ಬೆಳೆ, ಶುದ್ಧಗಾಳಿ, ಬೆಳಕು ಬರಲು ಸಾಧ್ಯ, ಇದಕ್ಕಾಗಿ ಭೂಮಿ ಮೇಲೆ ಶೇ. 35 ರಷ್ಟು ಅರಣ್ಯ ಪ್ರದೇಶ ಅತ್ಯಗತ್ಯವಾಗಿರಬೇಕು. ಆದರೆ ನಮ್ಮ ದುರಾಸೆಗೆ ಕಾಡು ನಾಶ ಮಾಡುತ್ತಿದ್ದು ಇಂದು ಭೂಮಿಯಲ್ಲಿ ಶೇ. 27 ರಷ್ಟು ಮಾತ್ರ ಅರಣ್ಯ ಪ್ರದೇಶ ಇದೆ. ಈ ನಿಟ್ಟಿನಲ್ಲಿ ನಾವು ಗಿಡಗಳನ್ನು ನೆಟ್ಟು ಕಾಡನ್ನು ಬೆಳೆಸಿ ಪ್ರಕೃತಿಯಲ್ಲಿನ ಸಮತೋಲನ ಕಾಪಾಡದಿದ್ದರೆ ಮುಂದೆ ಶುದ್ದ ನೀರನ್ನು ಖರೀದಿ ಮಾಡಿದಂತೆ ಶುದ್ಧ ಗಾಳಿಯಾಗಿರುವ ಆಮ್ಲಜನಕವನ್ನು ಹಣ ಕೊಟ್ಟು ಖರೀದಿಸಿ ಬೆನ್ನಿಗೆ ಕಟ್ಟಿಕೊಂಡು ಉಸಿರಾಡುತ್ತಾ ಜೀವನ ಮಾಡುವ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಈ ನಿಟ್ಟಿನಲ್ಲಿ ರಮೇಶ್‌ಗೌಡರು ಪರಿಸರದ ಸಮತೋಲನ ಕಾಪಾಡುವ ನಿಟ್ಟಿನಲ್ಲಿ ಗಿಡಗಳನ್ನು ನೆಟ್ಟು ಪೋಷಣೆ ಮಾಡುವ ಬಗ್ಗೆ ಸದಾ ಜಾಗೃತಿ ಮೂಡಿಸುತ್ತಾ ಗಣ್ಯರು, ರಾಜಕೀಯ ಮುಖಂಡರ ಹುಟ್ಟುಹಬ್ಬಗಳಂದು ಅವರಿಂದ ಗಿಡಗಳನ್ನು ವಿತರಣೆ ಮಾಡಿಸುವ ಮೂಲಕ ಪರಿಸರದ ಬಗ್ಗೆ ಜಾಗೃತಿ ಮೂಡಿಸುತ್ತಾ ಬಂದಿದ್ದು, ಇಂದು ಮಕ್ಕಳಿಗೆ ಪರಿಸರದ ಬಗ್ಗೆ ಜಾಗೃತಿ ಮೂಡಿಸುವ ಜೊತೆಗೆ ಪೋಷಕರಿಗೆ ಬಹುಮಾನದ ನಿರೀಕ್ಷೆ ತೋರಿಸಿ ಗಿಡನೆಟ್ಟು ಪೋಷಣೆ ಮಾಡಲು ಪ್ರೇರೇಪಣೆ ನೀಡುತ್ತಿದ್ದು ಪೋಷಕರು ಮಕ್ಕಳನ್ನು ಪೋಷಣೆ ಮಾಡಿದಂತೆ ಗಿಡಗಳನ್ನು ಪೋಷಣೆ ಮಾಡುವ ವಿಶ್ವಾಸ ಇದೆ ಎಂದು ಮಲ್ಲೇಶ್‌ಅವರು ಶ್ಲಾಘನೆ ಮಾಡಿದರು. ಕಾರ್ಯಕ್ರಮದ ಅಧ್ಯಕ್ಷ ವಹಿಸಿದ್ದ ಕಸ್ತೂರಿ ಕರ್ನಾಟಕ ಜನಪರ ವೇದಿಕೆಯ ರಾಜ್ಯಾಧ್ಯಕ್ಷ ರಮೇಶ್‌ಗೌಡರು ಮಾತನಾಡಿ, ಇಂದು ನಾವು ಗಿಡಮರಗಳನ್ನು ಕಡಿದು ನಾಶ ಮಾಡಿರುವುದರಿಂದ ಶುದ್ದ ಗಾಳಿ ಇಲ್ಲವಾಗಿದೆ. ಈಗಲೂ ನಾವು ಎಚ್ಚೆತ್ತುಕೊಂಡು ಪರಿಸರ ಸಂರಕ್ಷಿಸಲು ಕಾಡನ್ನು ಬೆಳಸದಿದ್ದರೆ ಮುಂದೆ ವಾಹನಗಳಿಗೆ ಪೆಟ್ರೋಲ್ ಬಂಕ್‌ನಲ್ಲಿ ಪೆಟ್ರೋಲ್ ಹಾಕಿಸಿಕೊಳ್ಳುವಂತೆ ನಾವು ಸಹ ಅಲ್ಲಲ್ಲಿ ಶುದ್ದ ಗಾಳಿ ಪಡೆಯುವ ಬಂಕ್‌ಗಳಲ್ಲಿ ಆಮ್ಲಜನಕ ಪಡೆದು ಹೋಗುವ ವಾತಾವರಣ ನಿರ್ಮಾಣ ಆದ್ರೂ ಅಚ್ಚರಿ ಇಲ್ಲ. ಈ ನಿಟ್ಟಿನಲ್ಲಿ ನಾವು ಗಿಡಗಳನ್ನು ನೆಟ್ಟು ಪೋಷಣೆ ಮಾಡಿ ಪರಿಸರ ಸಂರಕ್ಷಣೆ ಮಾಡಲು ಸಂಕಲ್ಪ ಮಾಡಬೇಕಿದೆ ಎಂದರು.

## NMMS ಪರೀಕ್ಷೆಯಲ್ಲಿ ವಿಸಿ ಫಾರಂ ಶಾಲೆಯ ವಿದ್ಯಾರ್ಥಿನಿಯರು ಉತ್ತೀರ್ಣ




**ಮಂಡ್ಯ:** ಮಂಡ್ಯ ಉತ್ತರ ವಲಯ ವಿಸಿ ಫಾರಂ ನ ಸರ್ಕಾರಿ ಪದವಿಪೂರ್ವ ಕಾಲೇಜು( ಪ್ರೌಢಶಾಲಾ ವಿಭಾಗ ) ಮೂವರು ವಿದ್ಯಾರ್ಥಿನಿಯರು ಪ್ರತಿಷ್ಠಿತ NMMS ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಾಲೆಗೆ ಕೀರ್ತಿ ತಂದಿದ್ದಾರೆ.

ವಿಸಿ ಫಾರಂ ಶಾಲೆಯ ವಿದ್ಯಾರ್ಥಿನಿಯರಾದ ಶೀಲಾ.ಪಿ.ಎಲ್(96), ಅನುಷಾ ಬಿ(94) ಹಾಗೂ ತನುಶ್ರೀ (76) ಅಂಕಗಳನ್ನು ಪಡೆದು 2025–26ರ NMMS ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಶಾಲೆಗೆ ಕೀರ್ತಿಯನ್ನು ತಂದಿರುತ್ತಾರೆ.

ಈ ವಿದ್ಯಾರ್ಥಿನಿಯರನ್ನು ಹಾಗೂ ಮಾರ್ಗದರ್ಶನ ಮಾಡಿದ ಶಿಕ್ಷಕರನ್ನು ಎಸ್. ಡಿ. ಎಂ.ಸಿ ಅಧ್ಯಕ್ಷರು, ಸದಸ್ಯರು, ಹಿರಿಯ ಸಹ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದಿಸಿದ್ದಾರೆ.

## ಜೂ.10 ರಂದು ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ



**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ 66/11 ಕೆವಿ ಸೋಮನಹಳ್ಳಿ ವಿವಿ ಕೇಂದ್ರ ಮತ್ತು 66/11 ಕೆವಿ ಮಾರ್ಗಗಳಲ್ಲಿ ತ್ರೈಮಾಸಿಕ ನಿರ್ವಹಣಾ ಕೆಲಸವನ್ನು ಹಮ್ಮಿಕೊಂಡಿರುವುದರಿಂದ ಜೂ. 10 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಸದರಿ ವಿದ್ಯುತ್ ವಿತರಣಾ ಕೇಂದ್ರದಿಂದ ವಿದ್ಯುತ್ ಸರಬರಾಜಾಗುವ ಸೋಮನಹಳ್ಳಿ, ಚಿಕ್ಕಮೇನಹಳ್ಳಿ, ಹಿರೇಕಡಲೂರು ಮತ್ತು ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗುವುದರಿಂದ ಸಾರ್ವಜನಿಕರು ಸಹಕರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್ ತಿಳಿಸಿದ್ದಾರೆ.

## ಕೊಡಗು ಜಿಲ್ಲೆಯ ಮಳೆ ವಿವರ(ಮಿಲಿ ಮೀಟರ್‌ಗಳಲ್ಲಿ)

**ಮಡಿಕೇರಿ :** ಕೊಡಗು ಜಿಲ್ಲೆಯಲ್ಲಿ ಮಂಗಳವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 19.52 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 4.61 ಮಿ.ಮೀ. ಮಳೆಯಾಗಿತ್ತು. ಜನವರಿಯಿಂದ ಇಲ್ಲಿಯವರೆಗಿನ ಮಳೆ 223.62 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 785.60 ಮಿ.ಮೀ ಮಳೆಯಾಗಿತ್ತು.

ಮಡಿಕೇರಿ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 26.53 ಮಿ.ಮೀ. ಕಳೆದ ವರ್ಷ ಇದೇ ದಿನ 23.05 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 303.93 ಮಿ.ಮೀ, ಕಳೆದ ವರ್ಷ ಇದೇ ಅವಧಿಯಲ್ಲಿ 1158.06 ಮಿ.ಮೀ. ಮಳೆಯಾಗಿತ್ತು.

ವಿರಾಜಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 25.70 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 0.00 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 287.17 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 819.75 ಮಿ.ಮೀ. ಮಳೆಯಾಗಿತ್ತು.

ಪೊನ್ನಂಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 23.27 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 0.00 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 178.54 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 724.40 ಮಿ.ಮೀ. ಮಳೆಯಾಗಿತ್ತು.

ಸೋಮವಾರಪೇಟೆ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 14.90 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 0.00 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 204.47 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ 679.14 ಮಿ.ಮೀ. ಮಳೆಯಾಗಿತ್ತು.

ಕುಶಾಲನಗರ ತಾಲ್ಲೂಕಿನಲ್ಲಿ ಇಂದಿನ ಸರಾಸರಿ ಮಳೆ 7.20 ಮಿ.ಮೀ. ಮಳೆಯಾಗಿದೆ. ಕಳೆದ ವರ್ಷ ಇದೇ ದಿನ 0.00 ಮಿ.ಮೀ. ಜನವರಿಯಿಂದ ಇಲ್ಲಿಯವರೆಗಿನ ಮಳೆ 143.85 ಮಿ.ಮೀ. ಕಳೆದ ವರ್ಷ ಇದೇ ಅವಧಿಯಲ್ಲಿ



546.64 ಮಿ.ಮೀ. ಮಳೆಯಾಗಿತ್ತು.

ಜಿಲ್ಲೆಯಲ್ಲಿ ಹೋಬಳಿವಾರು ದಾಖಲಾಗಿರುವ ಮಳೆ ವಿವರ:–ಮಡಿಕೇರಿ ಕಸಬಾ 17, ನಾಪೋಕ್ಲು 23.60, ಸಂಪಾಜೆ 27.50, ಭಾಗಮಂಡಲ 38, ವಿರಾಜಪೇಟೆ 28.40, ಅಮ್ಮತ್ತಿ 23, ಹುದಿಕೇರಿ 23, ಶ್ರೀಮಂಗಲ 22, ಪೊನ್ನಂಪೇಟೆ 35, ಬಾಳೆಲೆ 13.06, ಸೋಮವಾರಪೇಟೆ 8.60, ಶನಿವಾರಸಂತೆ 12, ಶಾಂತಳ್ಳಿ 32, ಕೊಡ್ಲಿಪೇಟೆ 7, ಕುಶಾಲನಗರ 2.40, ಸುಂಟಿಕೊಪ್ಪ 12 ಮಿ.ಮೀ. ಮಳೆಯಾಗಿದೆ.

**ಹಾರಂಗಿ ಜಲಾಶಯದ ನೀರಿನ ಮಟ್ಟ (09–06–2026) ವರದಿ**

ಹಾರಂಗಿ ಜಲಾಶಯದ ಗರಿಷ್ಠ ಮಟ್ಟ 2,859 ಅಡಿಗಳು, ಇಂದಿನ ನೀರಿನ ಮಟ್ಟ 2823.57 ಅಡಿಗಳು. ಕಳೆದ ವರ್ಷ ಇದೇ ದಿನ 2851.71 ಅಡಿಗಳು. ಹಾರಂಗಿಯಲ್ಲಿ ಬಿದ್ದ ಮಳೆ 6.20 ಮಿ.ಮೀ., ಇಂದಿನ ನೀರಿನ ಒಳಹರಿವು 266 ಕ್ಯುಸೆಕ್, ಕಳೆದ ವರ್ಷ ಇದೇ ದಿನ 1491 ಕ್ಯುಸೆಕ್., ಇಂದಿನ ನೀರಿನ ಹೊರ ಹರಿವು ನದಿಗೆ 180 ಕ್ಯುಸೆಕ್. ಕಳೆದ ವರ್ಷ ಇದೇ ದಿನ ನೀರಿನ ಹೊರ ಹರಿವು ನದಿಗೆ 1029 ಕ್ಯುಸೆಕ್.

## ಪರಿಸರ ಸಂರಕ್ಷಣೆಗೆ ನಾವೆಲ್ಲರೂ ಮುಂದಾಗಬೇಕು

**ಪಿರಿಯಾಪಟ್ಟಣ:** ನಿಯಮಿತವಾಗಿ ಗಿಡಮರಗಳನ್ನು ನೆಟ್ಟು ಪೋಷಿಸುವ ಮೂಲಕ ಪರಿಸರ ಸಂರಕ್ಷಣೆಗೆ ನಾವೆಲ್ಲರೂ ಮುಂದಾಗಬೇಕು ಎಂದು ಐಟಿಸಿ ಲೀಫ್ ಮ್ಯಾನೇಜರ್ ಪ್ರವೀಣ್ ಕುಮಾರ್ ತಿಳಿಸಿದರು.

ಐಟಿಸಿ ಮೈಕ್ಯಾಪ್ಸ್ ಸಂಸ್ಥೆ ವತಿಯಿಂದ ಪಿರಿಯಾಪಟ್ಟಣ ತಾಲೂಕು ಪಂಚಾಯತಿ ಮತ್ತು ರಾಮನಾಥತುಂಗ ಗ್ರಾಮ ಪಂಚಾಯತಿ ಸಹಭಾಗಿತ್ವದಲ್ಲಿ ತಾಲೂಕಿನ ಸುಂಡವಾಳು ಗ್ರಾಮದಲ್ಲಿ ನಡೆದ ವಿಶ್ವ ಪರಿಸರ ದಿನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು, ಪರಿಸರದ ಅಸಮತೋಲನದಿಂದ ಕಾಲ ಕಾಲಕ್ಕೆ ಮಳೆಯಾಗದೆ ರೈತರ ಕೃಷಿ ಚಟುವಟಿಕೆಗೆ ತೊಂದರೆಯಾಗುತ್ತಿದೆ, ಇದನ್ನು ತಪ್ಪಿಸಲು ನಾವೆಲ್ಲರೂ ಇಂದಿನಿಂದಲೇ ಜಾಗ್ರತರಾಗಿ ಗಿಡಗಳನ್ನು ಹೆಚ್ಚಾಗಿ ಬೆಳೆಸಬೇಕು ಈ ನಿಟ್ಟಿನಲ್ಲಿ ಐಟಿಸಿ ಕಂಪನಿ ಮೈಕ್ಯಾಪ್ಸ್ ಸಂಸ್ಥೆ ಮೂಲಕ ರೈತರು ಮತ್ತು ಸಮುದಾಯ ಅಭಿವೃದ್ಧಿಗೆ ಹಲವು ಯೋಜನೆಗಳನ್ನು ನೀಡುತ್ತಿದ್ದು ಅವುಗಳ ಸದ್ಬಳಕೆಯಾಗಬೇಕಿದೆ ಎಂದರು.

ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಮಾತನಾಡಿ ನಾವೆಲ್ಲರೂ ಆರೋಗ್ಯಕರ ಜೀವನ ನಡೆಸಬೇಕಾದರೆ ಉತ್ತಮ ವಾತಾವರಣ ನಿರ್ಮಾಣವಾಗಬೇಕು, ಪ್ರತಿಯೊಬ್ಬರು ಗಿಡ ನೆಟ್ಟು ಪೋಷಿಸುವ ಮೂಲಕ ಮುಂದಿನಪೀಳಿಗೆಗೆ ಉತ್ತಮ ವಾತಾವರಣ ನಿರ್ಮಿಸಬೇಕು, ಐಟಿಸಿ ಕಂಪನಿ ಕೇವಲ ತಂಬಾಕು ಖರೀದಿಗೆ ಸೀಮಿತವಾಗದೆ ತಮ್ಮ ಸಿಎಸ್‌ಆರ್ ಅನುದಾನದಲ್ಲಿ ಸರ್ಕಾರಿ ಶಾಲೆ ಮತ್ತು ಅಂಗನವಾಡಿಗಳ ಅಭಿವೃದ್ಧಿ ಸೇರಿದಂತೆ ರೈತರ ಅನುಕೂಲಕರವಾದ ಹಲವು ಯೋಜನೆಗಳನ್ನು ನೀಡುತ್ತಿರುವುದು ಶ್ಲಾಘನೀಯ ಎಂದರು.

ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕ ಎನ್.ನಂಜುಂಡಸ್ವಾಮಿ ಮಾತನಾಡಿ ನಾವು ಆರೋಗ್ಯಕರ ಜೀವನ ನಡೆಸಲು ಪರಿಸರವೇ ಪ್ರಮುಖ ಕಾರಣವಾಗಿದೆ




ಈ ನಿಟ್ಟಿನಲ್ಲಿ ಮೈರಾಡ ಸಂಸ್ಥೆಯು ಹಲವು ವರ್ಷಗಳಿಂದ ನೆಲ ಜಲ ಸಂರಕ್ಷಣೆಯಲ್ಲಿ ತೊಡಗಿ ಸಮುದಾಯ ಅಭಿವೃದ್ಧಿಗೆ ಶ್ರಮಿಸುತ್ತಿದೆ, ಪ್ರಕೃತಿ ನಮಗೆ ಏನು ಕೊಡುಗೆ ನೀಡಿದೆ ಎಂಬುವ ಬದಲು ಪ್ರಕೃತಿಗೆ ನಾವು ಏನು ಕೊಟ್ಟಿದ್ದೇವೆ ಎಂಬುದನ್ನು ಅರಿತು ಪರಿಸರ ಸಂರಕ್ಷಣೆಗೆ ಮುಂದಾಗಬೇಕು ಎಂದರು.

**ಐಟಿಸಿ ಲೀಫ್ ಮ್ಯಾನೇಜರ್ ಪ್ರವೀಣ್ ಕುಮಾರ್ ಅಭಿಮತ**

ಈ ಸಂದರ್ಭದಲ್ಲಿ ಕೃಷಿ ಇಲಾಖೆ ಸಹಾಯಕ ನಿರ್ದೇಶಕಿ ಕುಸುಮ, ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಗುರುಸ್ವಾಮಿ, ಪಶು ವೈದ್ಯಾಧಿಕಾರಿ ವಿಜಯಲಕ್ಷ್ಮಿ, ಪಿಡಿಒ ಕವಿತಾ ಮಾತನಾಡಿದರು. ಮೈರಾಡ ಕಾವೇರಿ ಪ್ರಾದೇಶಿಕ ಸಂಸ್ಥೆ ಕಾರ್ಯನಿರ್ವಾಹಕ ನಿರ್ದೇಶಕ ಅಶ್ರಫುಲ್ ಹಸನ್, ಐಟಿಸಿ ಮ್ಯಾನೇಜರ್ ಚನ್ನವೀರೇಶ್, ಶಿವಕುಮಾರ್, ಮೈಕ್ಯಾಪ್ಸ್ ಯೋಜನೆ ಸಮನ್ವಯಧಿಕಾರಿ ರಾಜಪ್ಪ, ಐಟಿಸಿ ಪ್ರೋಗ್ರಾಮ್ ಆಫೀಸರ್ ವಿಶ್ವಜಿತ್, ಕಿತ್ತೂರು ಪಿಎಸಿಸಿಎಸ್ ಅಧ್ಯಕ್ಷ ಸುಮಿತ್, ಕುರಿ ಮತ್ತು ಮೇಕೆ ಸಾಕಾಣಿಕೆದಾರರ ಮಹಾಮಂಡಲ ನಿರ್ದೇಶಕ ಸುಂಡವಾಳು ಮಹದೇವ್, ತೋಟಗಾರಿಕೆ ಇಲಾಖೆ ಅಧಿಕಾರಿ ಪ್ರಸಾದ್, ಶಿಕ್ಷಣ ಇಲಾಖೆ ಸಿಆರ್ ಪಿ ಸುದರ್ಶನ್, ಮುಖಂಡರಾದ ಸ್ವಾಮಿಗೌಡ, ಕುಮಾರ್, ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಕೃಷಿ ಅಧಿಕಾರಿ ಶರತ್, ಮೈಕ್ಯಾಪ್ಸ್ ಕಾರ್ಯಕ್ರಮ ಸಮಾನ್ವಯಾಧಿಕಾರಿ ದಿನೇಶ್, ಮುಖ್ಯ ಶಿಕ್ಷಕಿ ಪುಷ್ಪಲತಾ ಹಾಗೂ ಶಿಕ್ಷಕರು, ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರು, ಕೃಷಿ ಮತ್ತು ಪಶು ಸಖಿಯರು, ಮಹಿಳಾ ಸ್ವಸಹಾಯ ಸಂಘ ಸದಸ್ಯರು, ಗ್ರಾಮಸ್ಥರು ಮತ್ತು ಮೈಕ್ಯಾಪ್ಸ್ ಸಿಬ್ಬಂದಿ ಇದ್ದರು.

# ನಾವು ಯಾಕೆ ಹೀಗೆ...?



। ಚೇಂಪಿ ದಿನೇಶ್

ಒಂದು ಕಾಲದಲ್ಲಿ ಅಂಚೆ ಬಂದರೆ ಇಡೀ ಊರಿಗೆ ಹಬ್ಬ.ನಮ್ಮ ಪಕ್ಕದ ಮನೆ ಗಂಗನಿಗೆ ನಮ್ಮ ಮನೆಯ ನಾಯಿ ಬೊಗಳಿದ ಕೂಡಲೇ ಗೊತ್ತಾಗುತ್ತೆ, ನಮ್ಮ ಮನೆಗೆ ಅಂಚೆ ಅಣ್ಣ ಬಂದಿದ್ದಾನೆ ಎಂದು. ಆಗ ಅವಳು ನಮ್ಮ ಮನೆಗೆ ಬಂದು ಅವಳಿಗೆ ಬಂದ ಅಂಚೆ ಕಾಗದ ತೆಗೆದುಕೊಂಡು ಹೋಗುತ್ತಿದ್ದಳು.

ಈಗ ಅದೆಲ್ಲ ಮಾಯಾ ವಾಗಿದೆ. ಆ ಕನಸುಗಳಿಂದ ನಾವು ಮಾಯಾವಾಗುತ್ತಿದ್ದೇವೆ.



**ಸಿನೆಮಾ ಹಾಡಿನ ಹಾಗೇ ನಾವು ಮಾಯಾ.... ನೀವು ಮಾಯಾ...**

ಮೊದಲು ಮನೆಯಲ್ಲಿ ಹಿರಿಯವರು ಬೆಳಿಗ್ಗೆ ಎದ್ದು ಭೂಮಿ ತಾಯಿಯ ಮಡಿಲಿಗೆ ಕಾಲಿಡುವ ಮುನ್ನ ಕರಾಗ್ರೇ ವಸತೇ ಲಕ್ಮ್ಮೀ.... ಸ್ತೋತ್ರ ಹೇಳಿ ಭೂಮಿಗೆ ಕಾಲಿಡಬೇಕಿತ್ತು. ನಿನ್ನನ್ನು ತುಳಿಯುತ್ತಿದ್ದೇನೆ ಕ್ಷಮೇ ಇರಲಿ ಎಂದು. ಆದರೆ ಈಗ ಹಾಸಿಗೆಯಿಂದ ಎದ್ದು ಕಣ್ಣು ಬಿಡುವು ಮೊದಲು ಮೊಬೈಲ್ಗಾಗಿ ಹುಡುಕುತ್ತೇವೆ... ಇದು ವಾಸ್ತವ.ಈಗ ನೋಟಿಫಿಕೇಶನ್ ಬಂದರೂ ನೋಡುವ ವ್ಯವಧಾನ ಇಲ್ಲ. ಅಜ್ಜ ಸಂಜೆ ಕಟ್ಟೆ ಮೇಲೆ ಕೂತು ಕಥೆ ಹೇಳುತ್ತಿದ್ದರು. ಈಗ ಮೊಮ್ಮಗ ಯೌಟ್ಯೂಬ್ ನಲ್ಲಿ 10 ಸೆಕೆಂಡ್ ರೀಲ್ ಮುಗಿಸಿ ಮುಂದೆ ಸ್ಕ್ರಾಲ್ ಮಾಡುತ್ತಾನೆ. ಕಾಲ ಬದಲಾಯ್ತು ಸರಿ. ಆದರೆ ನಾವೂ ಬದಲಾಗಿಬಿಟ್ಟೆವಾ? ನಾವು ಯಾಕೆ ಹೀಗೆ?




1. **ಡಿಜಿಟಲ್ ಮಾಯಾಲೋಕದ ಸೆರೆಯಲ್ಲಿ**
   ನಮ್ಮ ಬೆರಳ ತುದಿಯಲ್ಲಿ ಇಡೀ ಪ್ರಪಂಚ ಇದೆ. ಆದ್ರೆ ನಮ್ಮ ಪಕ್ಕದಲ್ಲಿ ಕೂರುವ ಮನುಷ್ಯಯಾರೆಂದು, ಮತ್ತು ಆತನ ಮನಸ್ಸು ಅರ್ಥ ಮಾಡಿಕೊಳ್ಳಲು ಆಗ್ತಿಲ್ಲ. Instagram ನಲ್ಲಿ ಸಾವಿರಗಟ್ಟಲೆ ಅನುಯಾಯಿಗಳನ್ನು ಇಟ್ಟುಕೊಂಡು, ಮನೆಯಲ್ಲಿ ಅಮ್ಮ ಮಾಡಿದ ಅಡುಗೆಗೆ ಸೂಪರ್ ಎಂದು ಹೇಳೋಕೆ ಮರೆಯುತ್ತೇವೆ. ಬೆಳಗ್ಗೆ Good Morning ಮೆಸೇಜ್ ನೂರಾರು ಜನಕ್ಕೆ ಫಾರ್ವರ್ಡ್ ಮಾಡುತ್ತೇವೆ, ಆದ್ರೆ ಎದುರು ಮನೆಯಲ್ಲಿ ಇರುವವರ ಜೊತೆಗೆ ಮಾತನಾಡಲು ವ್ಯವದಾನ ಇಲ್ಲ. ಪಕ್ಕದ ಮನೆಯವರಿಗೆ ಒಂದು ಸ್ಮೈಲ್ ಕೊಡೋದನ್ನ ಮರೆಯುತ್ತೇವೆ. Virtual ಜಗತ್ತಿನಲ್ಲಿ ರಾಜ, Real ಜಗತ್ತಿನಲ್ಲಿ ಒಂಟಿ. ಇದು ನಮ್ಮ ಮೊದಲ ತೊಳಲಾಟವಲ್ಲವೇ.
2. ತಾಳ್ಮೆ ಎಂಬುದು ಎಲ್ಲರಲ್ಲೂ ಅವಸಾನದ ಅಂಚಿನಲ್ಲಿದೆ
   Zomato 30 ನಿಮಿಷಕ್ಕೆ ಬರದಿದ್ರೆ 1 ಸ್ಟಾರ್ ರೇಟಿಂಗ್ ಕೊಡ್ತೊ ನಾವು . ಆದರೆ ನಮ್ಮ ಕನಸು ನನಸಾಗಲು 3 ವರ್ಷ ಬೇಕು ಅಂದ್ರೆ ಲೈಫೇ ವೇಸ್ಟ್ ಅಂತಾ ಅನ್ನಿಸಿ ಕೊಳ್ಳುತ್ತೇವೆ . 15 ಸೆಕೆಂಡ್‌ನ ರೀಲ್ ಪೂರ್ತಿ ನೋಡೋಕೆ ತಾಳ್ಮೆ ಇಲ್ಲದ ನಾವುಗಳು 2ಥ ಸ್ಪೀಡ್‌ನಲ್ಲಿ ಓಡಿಸ್ತೀವಿ. ಆದ್ರೆ ಸಂಬಂಧಗಳು ಬೆಳೆಯಲು, ನಂಬಿಕೆ ಗಟ್ಟಿಯಾಗಲು ಸಮಯ ಬೇಕು ಅನ್ನೋ ಸತ್ಯ ಮರೆತಿದ್ದೇವೆ. Fast food, Fast internet, Fast life. ಆದ್ರೆ ನೆಮ್ಮದಿ ಮಾತ್ರ ಆಮೆ ನಡಿಗೆಯಲ್ಲಿ ಇದೆ. ಯಾಕೆ ಹೀಗೆ?
3. ಹೋಲಿಕೆಯ ಖೆಡ್ಡಾಕ್ಕೆ ಬಿದ್ದಿದ್ದೇವೆ ಅನ್ನಿಸೋದಿಲ್ವೇ?
   LinkedIn ತೆರೆದ್ರೆ ಎಲ್ಲರೂ CEO. Instagram ತೆರೆದ್ರೆ ಎಲ್ಲರೂ ಫಾರಿನ್ ಟ್ರಿಪ್‌ನಲ್ಲಿ. ನಮ್ಮ ಫೋನ್‌ನ ಗ್ಯಾಲರಿ ತೆರೆದು ನೋಡಿದ್ರೆ, ಬರೀ Pending ಕೆಲಸದ ಸ್ಕ್ರೀನ್‌ಶಾಟ್. ಇಲ್ಲಿ ನಾವು ಮಾಡುವ ದೊಡ್ಡ ತಪ್ಪು ಅಂದ್ರೆ, ಬೇರೆಯವರ Highlight Reel ಜೊತೆ ನಮ್ಮ ಹಿಂದಿನ ಘಟನೆಗಳಿಗೆ ಹೋಲಿಸಿಕೊಳ್ಳುವುದು. ಪಕ್ಕದ ಮನೆಯವರು ಹೊಸ ಕಾರ್ ತಂದ್ರೆ ನಮಗೆ ಕೀಳರಿಮೆ. ನಮ್ಮ ಮನೆಯಲ್ಲಿ ನಗು, ಆರೋಗ್ಯ, ಪ್ರೀತಿ ಇದೆ ಅನ್ನೋದು ಕಣ್ಣಿಗೆ ಬೀಳೋದೇ ಇಲ್ವೇ?
4. ಸಂಬಂಧಗಳ ಸವಕಳಿಆಗುತ್ತಿದೆಯೋ ಎನ್ನುವ ಚಿಂತೆ.
   ಹಿಂದೆ ಕಷ್ಟ ಅಂದ್ರೆ ಇಡೀ ಊರಿನವರು ಓಡಿ ಬರುತ್ತಿದ್ದ ಕಾಲ ವೊಂದ್ದಿತ್ತು . ಈಗ Status ಹಾಕಿದ್ರೆ 20 ಜನ Stay Strong? ಅಂತ ಕಮೆಂಟ್ ಮಾಡ್ತಾರೆ, ಆದ್ರೆ ಮನೆ ಬಾಗಿಲಿಗೆ ಬಂದು ಹೇಗಿದ್ದೀಯಪ್ಪ ಎಂದು ತಟ್ಟಿ ವಿಚಾರಿಸೋರು ಒಬ್ಬರೂ ಇಲ್ಲ ಕಾಣ್ರೀ.ಮದುವೆ,ಶುಭ ಸಮಾರಂಭಗಳು ಎಲ್ಲಾ ಫೋಟೋಶೂಟ್‌ಗೆ ಸೀಮಿತ. ಮನಸು ಬೆರೆಯೋದು ಕಮ್ಮಿ ಆಗಿದೆ. ಎಲ್ಲರೂ ಸ್ಟ್ಯಾಂಡರ್ಡ್ ಆಗಿದ್ದಾರೆ. ಮಾತನಾಡಲು ಭಿಗುಮಾನ ಬಿಡೋದಿಲ್ಲ. ಮಾತನಾಡಿದರು ಒಂದಿಷ್ಟು ಕೊಂಕುಗಳು ಇದ್ದೆ ಇರುತ್ತೆ.ಅಪ್ಪ-ಅಮ್ಮನಿಗೆ ಮಕ್ಕಳ ಮಾರ್ಕ್ಸ್ ಮುಖ್ಯ, ಮನಸ್ಸು ಮುಖ್ಯ ಅಲ್ಲ. ಗಂಡ-ಹೆಂಡತಿ ಮಧ್ಯ ಮೊಬೈಲ್ ಎಂಬ ಮೂರನೇ ವ್ಯಕ್ತಿ ಬಂದುಬಿಟ್ಟಿದ್ದಾನೆ. ಗಂಡ ಹೆಂಡತಿ ಅಪ್ಪಿಕೊಂಡು ಮಲಗುವ ಬದಲಿಗೆ ಮೊಬೈಲ್ ಒಪ್ಪಿಕೊಂಡು ಮಲಗುವ ಪರಿಸ್ಥಿತಿಗೆ ಬಂದು ಬಿಟ್ಟಿದ್ದೇವೆ.

ಹಾಗಾದ್ರೆ ದಾರಿ ಏನು? ತಿರುವು ಎಲ್ಲಿ?

ಸಮಸ್ಯೆ ಇದೆ ಅಂದಮೇಲೆ ಪರಿಹಾರ ಕೂಡ ಇದೆ. ದೊಡ್ಡ ದೊಡ್ಡ ಬದಲಾವಣೆ ಬೇಡ, ಚಿಕ್ಕ ಹೆಜ್ಜೆ ಸಾಕು.

1. **ಡಿಜಿಟಲ್ ಉಪವಾಸ:** ದಿನಕ್ಕೆ 1 ಗಂಟೆ No Phone Zone ಮಾಡಿ ನೋಡೋಣ.ಆ ಸಮಯ ಕುಟುಂಬಕ್ಕೆ ಮೀಸಲಿಡೋಣ . ಊಟ ಮಾಡುವಾಗ ಟಿವಿ, ಮೊಬೈಲ್ ಬೇಡ ಎನ್ನೋಣ.
2. ರಾತ್ರಿ ಮಲಗುವ ಮುನ್ನ, ಆ ದಿನ ನಮಗೆ ಸಿಕ್ಕ 3 ಒಳ್ಳೆಯ ವಿಷಯಗಳನ್ನು ನೆನಪಿಸಿಕೊಳ್ಳೋಣ. ಬೇರೆಯವರ ಜೊತೆ ಹೋಲಿಕೆ ಮಾಡೋದನ್ನ ನಿಲ್ಲಿಸೋಣ.
3. ಯಾರಾದ್ರೂ ಮಾತಾಡ್ತಿದ್ರೆ ಮೊಬೈಲ್ ಕೆಳಗಿಟ್ಟು ಕಣ್ಣಲ್ಲಿ ಕಣ್ಣಿಟ್ಟು ಅವರ ಮಾತುಗಳನ್ನು ಕೇಳಿಸಿಕೊಳ್ಳಣ . ಹೂಂ ಹೂಂ ಅಂದು ತಲೆ ಆಡಿಸುವ ಬದಲಿಗೆ ನಿಜವಾಗಿಯು ಕೇಳಿಸಿಕೊಳ್ಳುವ ಮನಸ್ಥಿತಿ ನಿರ್ಮಾಣ ಮಾಡೋಣ.



4. ವಾರಕ್ಕೊಮ್ಮೆ ಬೆಳಿಗ್ಗೆ ಅಥವಾ ಸಂಜೆಯ ಹೊತ್ತಲ್ಲಿ ಚಪ್ಪಲಿ ಬಿಟ್ಟು ಬರಿಗಾಲಿನಲ್ಲಿ ನಡೆಯಲು ಅಭ್ಯಾಸ ಮಾಡೋಣ.ಆ ಸೂರ್ಯನ ಸೌಂದರ್ಯ, ಪ್ರಕೃತಿಯ ಸೊಬಗನ್ನು ಮೊಬೈಲ್‌ನಲ್ಲಿ ಅಲ್ಲ, ಕಣ್ಣಲ್ಲಿ ತುಂಬಿಕೊಳ್ಳಲು ಪ್ರಯತ್ನ ಪಡೋಣ.

ನಾವು ರೋಬೋಟ್ ಅಲ್ಲ, ಭಾವನೆ ಇರೋ ಮನುಷ್ಯರು. ತಂತ್ರಜ್ಞಾನ ನಮ್ಮ ಸೇವಕ ಇರಬಹುದು ನಾವು ಅದರ ಗುಲಾಮರಲ್ಲ ಕಾಣ್ರೀ.?ನಾವು ಯಾಕೆ ಹೀಗೆ? ಅನ್ನೋ ಪ್ರಶ್ನೆ ನಮ್ಮನ್ನು ಕಾಡುತ್ತಿದೆ ಅಂದ್ರೆ, ಇನ್ನೂ ನಮ್ಮೊಳಗೆ ಮನುಷ್ಯತ್ವ ಜೀವಂತ ಇದೆ ಅಂತ ಅರ್ಥ ಅಲ್ವೇ . ಆ ಪ್ರಶ್ನೆಯೇ ಬದಲಾವಣೆಯ ಮೊದಲ ಮೆಟ್ಟಿಲು.

ಒಮ್ಮೆ ಆಕಾಶ ನೋಡೋಣ.ಅಲ್ಲಿ ನಿನ್ನೆ ಇದ್ದ ನೀಲಿ ಮೋಡ ಇಂದು ಇಲ್ಲ, ನಿನ್ನೆ ಹಾರಾಡಿದ ಹಕ್ಕಿಗಳ ಗುಂಪು ಇಂದಿಲ್ಲ. ಆದರೆ ನಿನ್ನೆ ಇಲ್ಲದ ಬಣ್ಣದ ಚಿತ್ತಾರ ಇಂದು ಮೂಡಬಹುದು ಅಲ್ವೇ.ಬದುಕೂ ಹಾಗೆನೇ ಸ್ವಾಮಿ. ಕ್ಷಣ ಕ್ಷಣಕ್ಕೂ ಬದಲಾಗುತ್ತೆ. ಅದನ್ನು ಮೊಬೈಲ್‌ನಲ್ಲಿ ಸೆರೆಹಿಡಿಯೋ ಬದಲು, ಮನಸಲ್ಲಿ ತುಂಬಿಕೊಳ್ಳೋಣ. ಆಗ ನಾವು ಯಾಕೆ ಹೀಗೆ ಅನ್ನೋ ಪ್ರಶ್ನೆಗೆ ?ನಾವು ಹೀಗೂ ಇರಬಹುದು ಅನ್ನೋ ಉತ್ತರ ಸಿಗಬಹುದು ಅಲ್ವೇ .

# ಆಗ ಬ್ರಿಟಿಷರು, ಈಗ ರಾಜಕಾರಣಿಗಳು
## ಬದಲಾಗಿರುವುದು ಮುಖಗಳು ಮಾತ್ರ



ಎಐ ಚಿತ್ರ

ಇತಿಹಾಸದ ಪುಟಗಳನ್ನು ತೆರೆದಾಗ ಬ್ರಿಟಿಷರ ಆಳ್ವಿಕೆಯ ಅನೇಕ ಕಹಿ ನೆನಪುಗಳು ನಮ್ಮ ಕಣ್ಮುಂದೆ ಮೂಡುತ್ತವೆ. ಭಾರತದ ಸಂಪತ್ತು, ಸಂಪನ್ಮೂಲಗಳು ಮತ್ತು ಶ್ರಮವನ್ನು ಬಳಸಿಕೊಂಡು ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಂಡ ಬ್ರಿಟಿಷರು ಈ ದೇಶವನ್ನು ಹಲವು ವರ್ಷಗಳ ಕಾಲ ಆಳಿದರು. ಅವರ ಆಳ್ವಿಕೆಯಿಂದ ನಮ್ಮ ಜನರು ಅನುಭವಿಸಿದ ನೋವು, ಸಂಕಷ್ಟ ಮತ್ತು ಶೋಷಣೆ ಇಂದಿಗು ಇತಿಹಾಸದಲ್ಲಿ ಅಚ್ಚೊತ್ತಿದಂತಿದೆ.

ಆದರೆ ಸ್ವಾತಂತ್ರ್ಯ ಬಂದ ನಂತರ ಎಲ್ಲವೂ ಬದಲಾಗಬೇಕಿತ್ತು. ದೇಶದ ಸಂಪತ್ತು ದೇಶದ ಜನರ ಅಭಿವೃದ್ಧಿಗೆ ಬಳಸಲ್ಪಡಬೇಕಿತ್ತು. ಆಡಳಿತ ಜನರ ಸೇವೆಗೆ ಮೀಸಲಾಗಿರಬೇಕಿತ್ತು. ಜನಪ್ರತಿನಿಧಿಗಳು ಜನರ ಆಶಯಗಳನ್ನು ಈಡೇರಿಸುವ ನಾಯಕರಾಗಬೇಕಿತ್ತು. ಆದರೆ ಅನೇಕ ಸಂದರ್ಭಗಳಲ್ಲಿ ಜನಸಾಮಾನ್ಯರ ಮನಸ್ಸಿನಲ್ಲಿ ಮೂಡುವ ಪ್ರಶ್ನೆ ಏನೆಂದರೆ ನಿಜವಾಗಿಯೂ ಎಲ್ಲವೂ ಬದಲಾಗಿದೆಯೇ?

ಬ್ರಿಟಿಷರ ಕಾಲದಲ್ಲಿ ದೇಶದ ಸಂಪತ್ತು ವಿದೇಶಗಳಿಗೆ ಹರಿಯುತ್ತಿತ್ತು. ಇಂದು ಅನೇಕ ಭ್ರಷ್ಟಾಚಾರದ ಪ್ರಕರಣಗಳು, ಹಗರಣಗಳು ಮತ್ತು ಅಧಿಕಾರದ ದುರುಪಯೋಗದ ಘಟನೆಗಳು ಕೇಳಿಬಂದಾಗ ಕೆಲವರಿಗೆ ಇತಿಹಾಸದ ಆ ಕಹಿ ನೆನಪುಗಳು ಮರುಕಳಿಸುತ್ತವೆ. ಆಗ ಅಧಿಕಾರ ವಿದೇಶಿಯರ ಕೈಯಲ್ಲಿತ್ತು; ಇಂದು ಅದು ನಮ್ಮದೇ ದೇಶದ ಜನರ ಕೈಯಲ್ಲಿದೆ. ಆದರೆ ಜನರ ನಿರೀಕ್ಷೆಗಳು ಇನ್ನೂ ಅನೇಕ ಕಡೆಗಳಲ್ಲಿ ಅಪೂರ್ಣವಾಗಿಯೇ ಉಳಿದಿವೆ.

ಒಂದು ರಾಷ್ಟ್ರದ ಶಕ್ತಿ ಅದರ ಕಟ್ಟಡಗಳಲ್ಲಿ ಅಥವಾ ಸಂಪತ್ತಿನಲ್ಲಿ ಇರುವುದಿಲ್ಲ; ಅದರ ಜನರ ಸಂತೋಷ, ನೆಮ್ಮದಿ ಮತ್ತು ವಿಶ್ವಾಸದಲ್ಲಿರುತ್ತದೆ. ಜನರು ತಮ್ಮ ನಾಯಕರನ್ನು ನಂಬಿದಾಗ ಮಾತ್ರ ಪ್ರಜಾಪ್ರಭುತ್ವ ಬಲವಾಗುತ್ತದೆ. ಆದರೆ ಅಧಿಕಾರವು ಸೇವೆಯ ಬದಲು ಸ್ವಾರ್ಥದ ಸಾಧನವಾದಾಗ, ಜನರ ನಂಬಿಕೆ ಕುಸಿಯಲು ಆರಂಭವಾಗುತ್ತದೆ.

ಗ್ರಾಮಗಳ ರಸ್ತೆಗಳಿಗೆ ಇನ್ನೂ ಗುಂಡಿಗಳಿವೆ. ಅನೇಕ ಶಾಲೆಗಳಲ್ಲಿ ಮೂಲಸೌಕರ್ಯಗಳ ಕೊರತೆ ಇದೆ. ಆಸ್ಪತ್ರೆಗಳಲ್ಲಿ ಅಗತ್ಯ ಸೌಲಭ್ಯಗಳು ಸಿಗದೆ ಜನರು ಪರದಾಡುತ್ತಾರೆ. ರೈತರು ತಮ್ಮ ಬೆಳೆಗಳಿಗೆ ನ್ಯಾಯಯುತ ಬೆಲೆಗಾಗಿ ಹೋರಾಡುತ್ತಾರೆ. ಯುವಕರು ಉದ್ಯೋಗಕ್ಕಾಗಿ ಅಲೆದಾಡುತ್ತಾರೆ. ಇಂತಹ ಸಂದರ್ಭಗಳಲ್ಲಿ ಸಾಮಾನ್ಯ ನಾಗರಿಕನ ಮನಸ್ಸಿನಲ್ಲಿ ಪ್ರಶ್ನೆಗಳು ಹುಟ್ಟುವುದು ಸಹಜ.

ಆದರೆ ಈ ಲೇಖನದ ಉದ್ದೇಶ ಯಾರನ್ನಾದರೂ ಟೀಕಿಸುವುದಲ್ಲ. ಬದಲಾಗಿ ಸಮಾಜವಾಗಿ ನಾವು ಯಾವ ದಿಕ್ಕಿನಲ್ಲಿ ಸಾಗುತ್ತಿದ್ದೇವೆ ಎಂಬುದನ್ನು ಆತ್ಮಾವಲೋಕನ ಮಾಡಿಕೊಳ್ಳುವುದಾಗಿದೆ. ಪ್ರಜಾಪ್ರಭುತ್ವದಲ್ಲಿ ಅಧಿಕಾರಿಗಳು ಮಾತ್ರವಲ್ಲ, ಮತದಾರರು ಜವಾಬ್ದಾರರು. ಒಳ್ಳೆಯ ನಾಯಕತ್ವವನ್ನು ಆಯ್ಕೆ ಮಾಡುವುದು, ಪ್ರಶ್ನಿಸುವುದು ಮತ್ತು ಜನಪರ ಆಡಳಿತವನ್ನು ಒತ್ತಾಯಿಸುವುದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ.

ಬ್ರಿಟಿಷರು ದೇಶವನ್ನು ಆಳಿದಾಗ ಜನರಿಗೆ ತಮ್ಮ ಆಡಳಿತಗಾರರನ್ನು ಆಯ್ಕೆ ಮಾಡುವ ಹಕ್ಕೇ ಇರಲಿಲ್ಲ. ಇಂದು ನಮಗೆ ಆ ಹಕ್ಕು ಇದೆ. ಇದೇ ಪ್ರಜಾಪ್ರಭುತ್ವದ ದೊಡ್ಡ ಶಕ್ತಿ. ಆದ್ದರಿಂದ ಸಮಸ್ಯೆಗಳ ಬಗ್ಗೆ ಅಸಮಾಧಾನ ವ್ಯಕ್ತಪಡಿಸುವುದರ ಜೊತೆಗೆ ಪರಿಹಾರದ ದಾರಿಯನ್ನು ಹುಡುಕಬೇಕು.

ನಿಜವಾದ ದೇಶಭಕ್ತಿ ಎಂದರೆ ಕೇವಲ ಧ್ವಜ ಹಾರಿಸುವುದಲ್ಲ; ದೇಶದ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುವುದಾಗಿದೆ. ಒಬ್ಬ ಶಿಕ್ಷಕ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದಾಗ, ಒಬ್ಬ ರೈತ ತನ್ನ ಹೊಲದಲ್ಲಿ ಬೆವರು ಸುರಿಸಿದಾಗ, ಒಬ್ಬ ವೈದ್ಯ ರೋಗಿಯ ಜೀವ ಉಳಿಸಿದಾಗ, ಒಬ್ಬ ಕಾರ್ಮಿಕ ತನ್ನ ಶ್ರಮದಿಂದ ಸಮಾಜಕ್ಕೆ ಕೊಡುಗೆ ನೀಡಿದಾಗ ಅಲ್ಲಿಯೇ ರಾಷ್ಟ್ರ ನಿರ್ಮಾಣ ನಡೆಯುತ್ತದೆ. ಇಂದು ದೇಶಕ್ಕೆ ಬೇಕಾಗಿರುವುದು ಕೇವಲ ರಾಜಕೀಯ ಬದಲಾವಣೆ ಅಲ್ಲ; ಮೌಲ್ಯಗಳ ಬದಲಾವಣೆ. ಪ್ರಾಮಾಣಿಕತೆ, ಪಾರದರ್ಶಕತೆ ಮತ್ತು ಜನಸೇವೆಯ ಮನೋಭಾವ ಎಲ್ಲ ಕ್ಷೇತ್ರಗಳಲ್ಲೂ ಹೆಚ್ಚಾಗಬೇಕು. ನಾಯಕರು ಜನರಿಗಾಗಿ ಬದುಕಬೇಕು. ಜನರು ಜಾಗೃತರಾಗಬೇಕು. ಆಗ ಮಾತ್ರ ಪ್ರಜಾಪ್ರಭುತ್ವದ ನಿಜವಾದ ಅರ್ಥ ಸಾಕಾರವಾಗುತ್ತದೆ.

"ಆಗ ಬ್ರಿಟಿಷರು, ಈಗ ರಾಜಕಾರಣಿಗಳು: ಬದಲಾಗಿರುವುದು ಮುಖಗಳು ಮಾತ್ರ" ಎಂಬ ವಾಕ್ಯವು ಕೆಲವರ ಅಸಮಾಧಾನವನ್ನು ಪ್ರತಿಬಿಂಬಿಸಬಹುದು. ಆದರೆ ಭವಿಷ್ಯವನ್ನು ಬದಲಾಯಿಸುವ ಶಕ್ತಿ ನಮ್ಮ ಕೈಯಲ್ಲಿದೆ ಎಂಬುದನ್ನು ಮರೆಯಬಾರದು. ಇತಿಹಾಸ ನಮಗೆ ಪಾಠ ಕಲಿಸುತ್ತದೆ; ಆದರೆ ಭವಿಷ್ಯವನ್ನು ನಾವು ನಿರ್ಮಿಸುತ್ತೇವೆ.

ಒಂದು ಉತ್ತಮ ಸಮಾಜವು ಒಳ್ಳೆಯ ನಾಯಕರಿಂದ ಮಾತ್ರ ನಿರ್ಮಾಣವಾಗುವುದಿಲ್ಲ. ಜಾಗೃತ ನಾಗರಿಕರು, ಪ್ರಾಮಾಣಿಕ ವ್ಯವಸ್ಥೆ ಮತ್ತು ಸತ್ಯದ ಪರ ನಿಲ್ಲುವ ಮನೋಭಾವದಿಂದ ನಿರ್ಮಾಣವಾಗುತ್ತದೆ. ನಾವು ಎಲ್ಲರೂ ಸೇರಿ ಆ ದಾರಿಯಲ್ಲಿ ಸಾಗಿದರೆ, ಮುಂದಿನ ಪೀಳಿಗೆಗಳು "ಆಗ ಶೋಷಣೆ ಇತ್ತು, ಇಂದು ಅಭಿವೃದ್ಧಿ ಇದೆ" ಎಂದು ಹೆಮ್ಮೆಯಿಂದ ಹೇಳುವ ದಿನ ದೂರವಿರುವುದಿಲ್ಲ.

ದೇಶದ ನಿಜವಾದ ಸ್ವಾತಂತ್ರ್ಯ ಎಂದರೆ ಕೇವಲ ವಿದೇಶಿ ಆಳ್ವಿಕೆಯಿಂದ ಮುಕ್ತವಾಗುವುದಲ್ಲ; ಭ್ರಷ್ಟಾಚಾರ, ಅನ್ಯಾಯ ಮತ್ತು ಸ್ವಾರ್ಥದ ಸಂಕೋಲೆಗಳಿಂದಲೂ ಮುಕ್ತವಾಗುವುದಾಗಿದೆ. ಆ ಕನಸು ನನಸಾಗುವ ದಿನವೇ ಭಾರತದ ಪ್ರಜಾಪ್ರಭುತ್ವದ ನಿಜವಾದ ವಿಜಯೋತ್ಸವವಾಗುತ್ತದೆ.

। ಶಿವಬಸಪ್ಪ ಗು ಜಂಗಾಲಿ

# "ಜೆನ್ ಜಿ ಗ್ರ್ಯಾಂಡ್ ಮಾಸ್ಟರ್"

ಸ್ಫೂರ್ತಿ ಸುಧೆ - 40



। ಡಾ.ಸುಧಾಕರ.ಜಿ.ಲಕ್ಕವಳ್ಳಿ



ಚೆನ್ನೈನ ಪುಟ್ಟ ಮನೆಯಂಗಳದಲ್ಲಿ ಅಕ್ಕ ವೈಶಾಲಿಯ ಆಟ ಕಂಡು ಕಾಯಿ ಎತ್ತಿದ ಕಂದನೇ ಇಂದು ಜಗತ್ತಿನ ಚದುರಂಗ ದಿಗ್ಗಜರ ಎದೆಯಲ್ಲಿ ನಡುಕ ಹುಟ್ಟಿಸಿದ ಆರ್. ಪ್ರಜ್ಞಾನಂದ.ಏಳರ ಬಾಲ್ಯದಲ್ಲಿ ಶುರುವಾದ ಪಯಣ,ಹತ್ತರಲ್ಲಿ ಅಂತಾರಾಷ್ಟ್ರೀಯ ಮಾಸ್ಟರ್ ಗರಿ, ಹನ್ನೆರಡರಲ್ಲಿ ಗ್ರ್ಯಾಂಡ್‌ಮಾಸ್ಟರ್ ಪಟ್ಟ, ಭಾರತ ಕಂಡ ಎರಡನೇ ಅತಿ ಎಳೆಯ ಸಾಧಕನಾಗಿ ಇತಿಹಾಸದ ಪುಟ ಸೇರಿದ.

2023ರ ವಿಶ್ವಕಪ್ ರಣರಂಗದಲ್ಲಿ ಎದುರಾದವನು ಸಾಕ್ಷಾತ್ ಮ್ಯಾಗ್ನಸ್ ಕಾರ್ಲ್‌ಸನ್.ಲೋಕವೇ ಉಸಿರು ಬಿಗಿಹಿಡಿದ ಆ ಕ್ಷಣದಲ್ಲಿ,ನಿಶ್ಚಲ ಕಡಲಿನಂತಹ ಮುಖದಲ್ಲಿ ಪ್ರಜ್ಞಾ ಆ ಚಕ್ರಾಧಿಪತಿಯನ್ನೇ ಮಣಿಸಿದ. ಸಿಡಿಲಿನಂತೆ ನುಗ್ಗುವ ಯುಕ್ತಿ, ತಣ್ಣನೆಯ ಲೆಕ್ಕಾಚಾರ. ಹತ್ತೊಂಬತ್ತರ ಹರೆಯ,ಆದರೆ ಮನದಲ್ಲಿ ಯುಗಗಳ ಪಕ್ವತೆ. ಸೋಲಿನಲ್ಲೂ ಮುಗುಳುನಗೆ, ಗೆಲುವಿನಲ್ಲೂ ವಿನಯ ತೋರುವ ವಿರಳ ವ್ಯಕ್ತಿತ್ವ ಅವನದು.

ಅವನ ಏರಿಕೆಯ ಹಿಂದೆ ಅಮ್ಮ ನಾಗಲಕ್ಷ್ಮಿಯ ಮಮತೆ,ಅಪ್ಪ ರಮೇಶ್‌ಬಾಬು ಬೆವರು,ಗುರು ಆರ್.ಬಿ.ರಮೇಶ್‌ರ ತಪಸ್ಸಿದೆ. ದಿನಕ್ಕೆ ಎಂಟು ತಾಸಿನ ನಿರಂತರ ಅಭ್ಯಾಸ, ಪತನದಿಂದ ಪಾಠ ಕಲಿಯುವ ಗುಣ, ಯಶಸ್ಸಿನಲ್ಲೂ ನೆಲಕ್ಕೆ ಅಂಟಿದ ಪಾದ.ವಿಶ್ವನಾಥನ್ ಆನಂದ್ ನಂತರ ಭಾರತದ ಚದುರಂಗಕ್ಕೆ ಹೊಸ ದಿಕ್ಸೂಚಿಯಾದ ಈ ತರುಣ,ಕ್ಯಾಂಡಿಡೇಟ್ಸ್ ಗೆದ್ದು ಜಗದಗ್ರಗಣ್ಯನಾಗುವ ಕನಸನ್ನು ಎದೆಯಲ್ಲಿ ಹೊತ್ತಿದ್ದಾನೆ.

ಪ್ರಜ್ಞಾನಂದ ಕೇವಲ ಹೆಸರಲ್ಲ.ಅದು ಕೋಟಿ ಕನಸುಗಳಿಗೆ ದಾರಿದೀಪ. ಸಣ್ಣ ಊರಿನಿಂದಲೂ ಶಿಖರ ಏರಬಹುದು ಎಂಬುದಕ್ಕೆ ಜೀವಂತ ನಿದರ್ಶನ.ಬೇಕಿರುವುದು ಒಂದೇ: ಅಳಿಯದ ಗುರಿ ಮತ್ತು ಅಲುಗದ ಗುಂಡಿಗೆ.ಅವನ ಪ್ರತಿ ನಡೆ ನಮಗೆ ಹೇಳೋದು ಇಷ್ಟೇ-ಮೌನವಾಗಿರು, ಸಾಧನೆ ಮಾತಾಡಲಿ.

# ಪ್ರೋತ್ಸಾಹದ ಮಾತು:
## ಬದುಕನ್ನು ಬದಲಿಸುವ ಮಹಾ ಶಕ್ತಿ



ಮಾನವ ಸಹಜ ಗುಣಗಳಲ್ಲಿ ಅತ್ಯಂತ ಪ್ರಮುಖವಾದದ್ದು ಮಾನ್ಯತೆ ಮತ್ತು ಪ್ರೀತಿಯನ್ನು ಬಯಸುವುದು. ಸಮಾಜದಲ್ಲಿ ನಾವೆಲ್ಲರೂ ಹುಟ್ಟಿನಿಂದಲೇ ಅಸಾಧಾರಣ ಪ್ರತಿಭೆಗಳಾಗಿರುವುದಿಲ್ಲ. ಬಹುತೇಕರು ಸಾಮಾನ್ಯ ಬದುಕನ್ನು ನಡೆಸುವವರೇ ಆಗಿರುತ್ತಾರೆ. ಆದರೆ, ಆ ಸಾಮಾನ್ಯತೆಯ ಬೆನ್ನಿಗೆ ಪ್ರೀತಿಯ ಬೆಂಬಲ ಮತ್ತು ಸಕಾರಾತ್ಮಕ ಪ್ರೋತ್ಸಾಹ ಸಿಕ್ಕಾಗ ಅಲ್ಲಿ ಅದ್ಭುತಗಳು ಸೃಷ್ಟಿಯಾಗುತ್ತವೆ.

ಬದಲಾವಣೆಯ ದಾರಿದೀಪ ಮತ್ತು ಸುಪ್ತ ಚೇತನದ ಜಾಗೃತಿ

ಒಂದು ಸಣ್ಣ ಸಸಿಗೆ ನಿಯಮಿತವಾಗಿ ನೀರು ಮತ್ತು ಗೊಬ್ಬರ ಕೊಟ್ಟರೆ ಅದು ಹೆಮ್ಮರವಾಗುತ್ತದೆ. ಮನುಷ್ಯನ ಮನಸ್ಥಿತಿಯೂ ಹಾಗೆಯೇ. ನಿರಂತರ ಟೀಕೆ ಮತ್ತು ಅವಹೇಳನಗಳು ಎಂತಹ ಬಲಿಷ್ಠ ಮನಸ್ಸನ್ನೂ ಕುಗ್ಗಿಸಬಲ್ಲವು. ಅದೇ ರೀತಿ, ಸೋತು ನಿಂತಾಗ ಸಿಗುವ ಒಂದೇ ಒಂದು ಸಾಂತ್ವನದ ಮಾತು ಅಥವಾ ಸಣ್ಣ ಪ್ರಯತ್ನಕ್ಕೆ ಸಿಗುವ ಪ್ರಾಮಾಣಿಕ ಮೆಚ್ಚುಗೆ ಬೆಟ್ಟವನ್ನು ಕದಡುವ ಆತ್ಮವಿಶ್ವಾಸವನ್ನು ನೀಡುತ್ತದೆ.

ಬಹಳಷ್ಟು ಬಾರಿ ವ್ಯಕ್ತಿಯೊಬ್ಬನಿಗೆ ತನ್ನಲ್ಲಿರುವ ಶಕ್ತಿಯ ಅರಿವೇ ಇರುವುದಿಲ್ಲ. ಹೊರಗಿನ ಜಗತ್ತು ಆತನನ್ನು 'ಸಾಮಾನ್ಯ' ಎಂದು ಹಣೆಪಟ್ಟಿ ಕಟ್ಟಿದಾಗ ಆತ ಅದನ್ನೇ ನಂಬಿಬಿಡುತ್ತಾನೆ. ಇಂತಹ ಸಂದರ್ಭದಲ್ಲಿ ಮೂಡುವ ಪ್ರೋತ್ಸಾಹದ ನುಡಿಗಳು, ಕತ್ತಲ ಕೋಣೆಯಲ್ಲಿ ಹಚ್ಚಿದ ದೀಪದಂತೆ ಕೆಲಸ ಮಾಡುತ್ತವೆ. ಅವು ವ್ಯಕ್ತಿಯ ಆಂತರಿಕ ಶಕ್ತಿಯನ್ನು ಆತನಿಗೆ ಪರಿಚಯಿಸುತ್ತವೆ.

ಇತಿಹಾಸದ ಪುಟಗಳಿಂದ ಕೆಲವು ಜ್ವಲಂತ ಉದಾಹರಣೆಗಳು

ಜಗತ್ತನ್ನು ಬದಲಿಸಿದ ಮಹಾತ್ಮರ ಮತ್ತು ಪುರಾಣಗಳ ಬದುಕನ್ನು ಸೂಕ್ಷ್ಮವಾಗಿ ಗಮನಿಸಿದರೆ, ಅವರ ಅಸಾಮಾನ್ಯತೆಯ ಹಿಂದೆ ಯಾರೋ ಒಬ್ಬರ ಪ್ರೋತ್ಸಾಹದ ಹಸ್ತ ಇರುವುದು ಗೋಚರಿಸುತ್ತದೆ:

ರಾಮಾಯಣದಲ್ಲಿ ಹನುಮಂತನ ಶಕ್ತಿ ಜಾಗೃತಿ: ಸಮುದ್ರ ಲಂಘನ ಮಾಡುವ ಮುನ್ನ ತನ್ನ ಶಕ್ತಿಯ ಅರಿವಿಲ್ಲದೆ ಸದ್ದಿಲ್ಲದೆ ಕುಳಿತಿದ್ದ ಹನುಮಂತನಿಗೆ ಜಾಂಬವಂತನು ಆತನ ಸಾಮರ್ಥ್ಯ ಮತ್ತು ಪರಾಕ್ರಮವನ್ನು ನೆನಪಿಸಿ ಪ್ರೋತ್ಸಾಹಿಸುತ್ತಾನೆ. ಆ ಒಂದು ಪ್ರೇರಣೆಯ ಮಾತು ಹನುಮಂತನನ್ನು ಅಸಾಮಾನ್ಯ ಸಾಹಸಕ್ಕೆ ಪ್ರೇರೇಪಿಸಿತು.

ಥಾಮಸ್ ಅಲ್ವಾ ಎಡಿಸನ್ ಮತ್ತು ತಾಯಿಯ ನಂಬಿಕೆ: ಶಾಲೆಯಿಂದ "ಬುದ್ಧಿಮಾಂದ್ಯ, ಈತನಿಗೆ ಕಲಿಸಲು ಸಾಧ್ಯವಿಲ್ಲ" ಎಂದು ಹೊರಹಾಕಲ್ಪಟ್ಟ ಬಾಲಕ ಎಡಿಸನ್ ಕೈಗೆ ಶಿಕ್ಷಕರು ಒಂದು ಪತ್ರ ನೀಡಿದ್ದರು. ಅದನ್ನು ಓದಿದ ಆತನ ತಾಯಿ ನ್ಯಾನ್ಸಿ ಎಡಿಸನ್, ಕಣ್ಣೀರು ಒರೆಸಿಕೊಳ್ಳುತ್ತಾ ಮಗನಿಗೆ ಹೀಗೆ ಹೇಳಿದರು: "ನಿಮ್ಮ ಮಗ ತುಂಬಾ ಬುದ್ಧಿವಂತ, ಆತನಿಗೆ ಕಲಿಸುವಷ್ಟು ಸಮರ್ಥರು ನಮ್ಮ ಶಾಲೆಯಲ್ಲಿಲ್ಲ, ನೀವೇ ಆತನಿಗೆ ಓದಿಸಿ ಎಂದು ಪತ್ರದಲ್ಲಿದೆ." ತಾಯಿಯ ಆ ಒಂದು ಪ್ರೋತ್ಸಾಹದ ಮಾತು ಬಾಲಕನ ಮನಸ್ಸಿನಲ್ಲಿ ಸಕಾರಾತ್ಮಕ ಕಿಡಿಕೆಯನ್ನು ಹೊತ್ತಿಸಿತು. ಮುಂದೆ ಆತ ಜಗತ್ತೇ ಮೆಚ್ಚುವ ಮಹಾನ್ ವಿಜ್ಞಾನಿಯಾದದ್ದು ಇತಿಹಾಸ.

ಕವಿ ಕುವೆಂಪು ಮತ್ತು ವೆಂಕಣ್ಣಯ್ಯನವರ ಮಾರ್ಗದರ್ಶನ: ಕನ್ನಡದ ಹೆಮ್ಮೆಯ ಜ್ಞಾನಪೀಠ ಪುರಸ್ಕೃತ ಕವಿ ಕುವೆಂಪು ಅವರು ಆರಂಭದಲ್ಲಿ ಇಂಗ್ಲಿಷ್‌ನಲ್ಲಿ ಕವಿತೆಗಳನ್ನು ಬರೆಯುತ್ತಿದ್ದರು. ಅವರ ಪ್ರತಿಭೆಯನ್ನು ಗುರುತಿಸಿದ ಟಿ.ಎಸ್. ವೆಂಕಣ್ಣಯ್ಯನವರು, "ನೀನು ಕನ್ನಡದಲ್ಲೇ ಬರೆ, ನಿನ್ನಿಂದ ಕನ್ನಡ ಸಾಹಿತ್ಯ ಶ್ರೀಮಂತವಾಗುತ್ತದೆ" ಎಂದು ಬೆನ್ನು ತಟ್ಟಿ ಪ್ರೋತ್ಸಾಹಿಸಿದರು. ಆ ಒಂದು ದಿಕ್ಸೂಚಿ ಮಾತು ಕುವೆಂಪು ಅವರನ್ನು ರಾಷ್ಟ್ರಕವಿಯನ್ನಾಗಿ ರೂಪಿಸಲು ಕಾರಣವಾಯಿತು.

**ಕ್ರೀಡಾಲೋಕದಲ್ಲಿ ಪ್ರೋತ್ಸಾಹ :** ಸರ್ ಡಾನ್ ಬ್ರಾಡ್ಮನ್ ಆಗಲಿ ಅಥವಾ ಸಚಿನ್ ತೆಂಡೂಲ್ಕರ್ ಆಗಲಿ, ಅವರ ಆರಂಭಿಕ ದಿನಗಳಲ್ಲಿ ಅವರ ತರಬೇತುದಾರರು (ಕೋಚ್) ನೀಡಿದ ಸಣ್ಣ ಪ್ರೋತ್ಸಾಹ ಮತ್ತು ತಪ್ಪುಗಳನ್ನು ತಿದ್ದಿದ ಪ್ರೀತಿಯ ರೀತಿ ಅವರನ್ನು ಶ್ರೇಷ್ಠ ಮಟ್ಟಕ್ಕೇರಿಸಿತು.



ನಮ್ಮ ಸಾಂಸ್ಕೃತಿಕ ಹಿನ್ನೆಲೆಯಲ್ಲಿ "ಗುರು-ಶಿಷ್ಯ" ಪರಂಪರೆಗೆ ದೊಡ್ಡ ಸ್ಥಾನವಿದೆ. ಇಲ್ಲಿ ಗುರು ಎಂದರೆ ಕೇವಲ ಪಾಠ ಕಲಿಸುವವನಲ್ಲ, ಶಿಷ್ಯನ ಯೋಗ್ಯತೆಯನ್ನು ಗುರುತಿಸಿ ಪ್ರೋತ್ಸಾಹಿಸುವವನು. ಇಂದಿನ ತಾಂತ್ರಿಕ ಮತ್ತು ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರತಿಯೊಬ್ಬರೂ ಒಂಟಿತನ, ಒತ್ತಡ ಹಾಗೂ ಅಭದ್ರತೆಯಿಂದ ಬಳಲುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳ 'ಲೈಕ್'ಗಳ ನಡುವೆ ಬದುಕು ಯಾಂತ್ರಿಕವಾಗುತ್ತಿರುವ ಈ ಸಮಯದಲ್ಲಿ ನಮ್ಮ ಕುಟುಂಬ ಮತ್ತು ಕಚೇರಿಗಳ ವಾತಾವರಣದಲ್ಲಿ ಈ ತತ್ವ ಅತ್ಯಂತ ಪ್ರಸ್ತುತವಾಗಿದೆ.


**ಮನೆಗಳಲ್ಲಿ ಪೋಷಕರ ಪಾತ್ರ:** ಇಂದಿನ ಅಂಕಕೇಂದ್ರಿತ ಶಿಕ್ಷಣ ವ್ಯವಸ್ಥೆಯಲ್ಲಿ ಮಕ್ಕಳು ತೀವ್ರ ಒತ್ತಡದಲ್ಲಿದ್ದಾರೆ. ಮಕ್ಕಳು ಸಣ್ಣ ಸಾಧನೆ ಮಾಡಿದಾಗಲೂ ಹೆತ್ತವರು ಮುಕ್ತವಾಗಿ ಬೆನ್ನು ತಟ್ಟಬೇಕು. ಅಂಕಗಳ ಆಧಾರದ ಮೇಲೆ ಪ್ರೀತಿಯನ್ನು ಅಳೆಯದೆ ಹಾಗೂ ಇತರರೊಂದಿಗೆ ಹೋಲಿಕೆಗಳನ್ನು ಬದಿಗಿಟ್ಟು, ಅವರ ಪ್ರಯತ್ನವನ್ನು ಮೆಚ್ಚಿದಾಗ ಮಕ್ಕಳಲ್ಲಿ ಸಕಾರಾತ್ಮಕ ವ್ಯಕ್ತಿತ್ವ ವಿಕಸನವಾಗುತ್ತದೆ.

ಕಾರ್ಯಸ್ಥಳಗಳಲ್ಲಿ ಮಾನವೀಯ ನಾಯಕತ್ವ: ಉತ್ತಮ ನಾಯಕನಾದವನು ಕೇವಲ ತಪ್ಪುಗಳನ್ನು ಹುಡುಕುವ ಕಟು ವಿಮರ್ಶಕನಾಗಬಾರದು. ಸಹೋದ್ಯೋಗಿಗಳ ಸಣ್ಣ ಯಶಸ್ಸನ್ನೂ ಗುರುತಿಸಿ ಸಾರ್ವಜನಿಕವಾಗಿ ಗೌರವಿಸುವ ಗುಣ ಹೊಂದಿರಬೇಕು. ಇದು ಇಡೀ ತಂಡದ ಸಾಮರ್ಥ್ಯ, ಪ್ರೇರಣೆ ಮತ್ತು ನಿಷ್ಠೆಯನ್ನು ವೃದ್ಧಿಸುತ್ತದೆ.

ಇತರರನ್ನು ಪ್ರೋತ್ಸಾಹಿಸುವ ಗುಣವನ್ನು ನಾವೂ ರೂಢಿಸಿಕೊಳ್ಳಬೇಕಿದೆ. ಮೆಚ್ಚುಗೆಯ ಮಾತುಗಳಿಗೆ ಹಣ ಖರ್ಚಾಗುವುದಿಲ್ಲ, ಆದರೆ ಅದರಿಂದ ಸಿಗುವ ಧನಾತ್ಮಕ ಶಕ್ತಿ ಅಮೂಲ್ಯವಾದದ್ದು.

ನಾವು ಬಳಸುವ ಪ್ರೋತ್ಸಾಹದ ಮಾತುಗಳು ಕೇವಲ ಮುಖಸ್ತುತಿಯಾಗಿರದೆ, ಪ್ರಾಮಾಣಿಕತೆಯಿಂದ ಕೂಡಿರಬೇಕು ಎನ್ನುವುದನ್ನು ನಾವು ಮರೆಯಬಾರದು. ಸುಳ್ಳು ಹೊಗಳಿಕೆ ವ್ಯಕ್ತಿಯಲ್ಲಿ ಅಹಂಕಾರವನ್ನು ಬೆಳೆಸಿದರೆ, ಪ್ರಾಮಾಣಿಕ ಪ್ರೋತ್ಸಾಹ ಜವಾಬ್ದಾರಿಯನ್ನು ನೆನಪಿಸುತ್ತದೆ ಮತ್ತು ಮತ್ತಷ್ಟು ಉತ್ತಮವಾಗಿ ಕಾರ್ಯನಿರ್ವಹಿಸಲು ಪ್ರೇರೇಪಿಸುತ್ತದೆ. ಯಾರೋ ಒಬ್ಬರ ಬದುಕಿನಲ್ಲಿ ನಾವೇನೂ ನೀಡದಿದ್ದರೂ ಪರವಾಗಿಲ್ಲ, ಆದರೆ ಅವರ ಆತ್ಮವಿಶ್ವಾಸವನ್ನು ಕುಗ್ಗಿಸುವ ಒಂದು ಕಟು ನುಡಿಯನ್ನೂ ಆಡದಿರುವುದು ಒಂದು ಮುಖ್ಯವಾದ ಸಾಮಾಜಿಕ ಧರ್ಮ. ಒಬ್ಬ ಸಾಮಾನ್ಯ ವ್ಯಕ್ತಿಯಲ್ಲಿ ಅಡಗಿರುವ ಸುಪ್ತ ಚೇತನವನ್ನು ಎಚ್ಚರಗೊಳಿಸಿ, ಆತನನ್ನು ಅಸಾಮಾನ್ಯನನ್ನಾಗಿ ರೂಪಿಸುವ ಜವಾಬ್ದಾರಿ ಮತ್ತು ಶಕ್ತಿ ನಮ್ಮೆಲ್ಲರ ಮಾತುಗಳಲ್ಲಿದೆ.

ಬನ್ನಿ, ಇಂದಿನಿಂದಲೇ ನಮ್ಮ ಸುತ್ತಮುತ್ತಲಿನವರ ಸಣ್ಣ ಪ್ರಯತ್ನಗಳನ್ನು ಮುಕ್ತ ಮನಸ್ಸಿನಿಂದ ಪ್ರೋತ್ಸಾಹಿಸೋಣ; ಜಗತ್ತನ್ನು ಮತ್ತಷ್ಟು ಸುಂದರವಾಗಿಸೋಣ.



। ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email: Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,